೧೪೦
೧೪೧

ಸಂಕ್ರಮಣ

ಸಂಪುಟ ೧೯ : ಸಂಚಿಕೆ ೪–೫ ಸಪ್ಟೆಂಬರ–ಅಕ್ಟೋಬರ ೧೯೮೩

ಜಾತಿ : ಗುಲ್ವಾಡಿ ವೆಂಕಟರಾಯರು
ಕನ್ನಡ ಆಡಳಿತ ಭಾಷೆ : ಜಿ. ನಾರಾಯಣ
ಅರುಣ ಕಾಂಬಳೆ ಅವರ 'ಲಂಕಾವತಾರ'
ಶಾಂತರಸರ 'ಬಡೇಸಾಬು ಪುರಾಣ'

ಎಸ್. ಜಿ. ಸಿದ್ಧರಾಮಯ್ಯ, ಬಸವಲಿಂಗ ಸೊಪ್ಪಿವಂತ, ಜಂಬಣ್ಣ ಅಮರಚಿಂತ,
ರವಿ ಬೆಳಗೆರೆ, ಸ. ಉಷಾ, ಶ್ರೀಕೃಷ್ಣ ಚೆನ್ನಂಗೋಡ, ಡಿ. ಹೊಸಳ್ಳಿ ಶಿವು,
ಎಚ್. ಆರ್ ಅಮರನಾಥ, ಶ್ರೀನಾಥ್ ರಾಯಂಸಂ, ಚಂದ್ರಶೇಖರ ಪಾಟೀಲ,
ಸಿದ್ದನಗೌಡ ಪಾಟೀಲ ಇವರ ಕವನಗಳು

ಪ್ರತಿಕ್ರಿಯೆಗಳು
ಸಂಪಾದಕೀಯ ಲೇಖನಗಳು
ಪುಸ್ತಕ ವಿಮರ್ಶೆ

DEVU PATTAR
GUTTIPETH,
SHAHAPUR-585223

ಸಂಪಾದಕ : ಚಂದ್ರಶೇಖರ ಪಾಟೀಲ

ಸಂಕ್ರಮಣ ಮಾಸಿಕ ಸಾಹಿತ್ಯ ಸಂಕಲನ
ಸಂ : ಚಂದ್ರಶೇಖರ ಪಾಟೀಲ

SANKRAMANA 140-141 A Monthly in Kannada
September-October 1983 Vol XIX Nos. 4-5
Editor : **Chandrashekhar Patil**
Sankramana Prakashana Dharwad 580008 Phone : 80509

ಮುದ್ರಣ : ರಾಜಶ್ರೀ ಪ್ರಿಂಟಿಂಗ್ ಪ್ರೆಸ್, ಧಾರವಾಡ-೧

ಲೇಖಕರಿಗೆ ಸೂಚನೆ :
ಸ್ವಚ್ಛ ಬರಹದ ಅಥವಾ ಟೈಪು ಮಾಡಿದ ಲೇಖನಗಳಿಗೆ ಪ್ರಾಶಸ್ತ್ಯ, ಉತ್ತರ ಬಯಸುವವರು ಡಬಲ್ ಕಾರ್ಡು ಬರೆಯಬೇಕು. 'ಸಂಕ್ರಮಣ'ದಲ್ಲಿ ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆ ಕಳಿಸುವವರು ಸಂಚಿಕೆ ಹೊರಬಂದ ೧೦ ದಿನದೊಳಗಾಗಿ ಕಳಿಸಬೇಕು.

ಚಂದಾದಾರರಿಗೆ ಸೂಚನೆ :
ಎಂ ಓ.,ಡಿ.ಡಿ. ಮೂಲಕ ಕಳಿಸಬೇಕು. ಅಥವಾ Syndicate Bank K. U. C. Branch Dharwad 3 ಈ ಶಾಖೆಯ S.B.A/c No. 8823 (Editor, Sankramana) ಖಾತೆಗೆ ಚಂದಾ ಹಣವನ್ನು M. T. ಮಾಡಿ ನಮ್ಮ ಕಾರ್ಯಾಲಯಕ್ಕೆ ಬರೆದು ತಿಳಿಸಬೇಕು

ವಾರ್ಷಿಕ ಚಂದಾ ರೂ. ೨೪. ಆಜೀವ ಚಂದಾ ರೂ. ೨೦೦.

ವಿಳಾಸ : ಸಂಪಾದಕ, ಸಂಕ್ರಮಣ
ಧಾರವಾಡ ೫೮೦೦೦೮ ಕರ್ನಾಟಕ
ಫೋನು : ೮೦೫೦೯

ಒಳಗಿನ ಪುಟಗಳಲ್ಲಿ

ಕೇಡುಂ ಲೇಸಿನಾ ಗಡಿಯಾಚೆ ನಿಂತವನುಂ	ಎಸ್. ಜಿ. ಸಿದ್ಧರಾಮಯ್ಯ	೩
ಜಾತಿ	ಗುಲ್ವಾಡಿ ವೆಂಕಟರಾಯರು	೫
ಮೂರು ಕವನಗಳು	ಬಸವಲಿಂಗ ಸೊಪ್ಪಿಮಠ	೨೪
ಕನ್ನಡ ಆಡಳಿತ ಭಾಷೆ	ದೇಶಹಳ್ಳಿ ಜಿ. ನಾರಾಯಣ	೨೭
ಬರಗಾಲದ ಹಾಡು	ಜಂಬಣ್ಣ ಅಮರಚಿಂತ	೪೦
ಶಾಂತರಸರ 'ಬಡೇಸಾಬು ಪುರಾಣ'	ಎಸ್. ಶಿವಾನಂದ	೪೩
ಎರಡು ಕವನಗಳು	ರವಿ ಬೆಳಗೆರೆ	೪೯
ಬಾಯಿ ಮುಚ್ಚಿಕೋ ಸೀತಾ	ಸ. ಉಷಾ	೫೨
ಒಂದು ಕವನ–ಒಂದು ಮೆಚ್ಚುಗೆ	ಶ್ರೀಕೃಷ್ಣಚೆನ್ನಂಗೋಡ್/ಪೋಲಂಕಿ	೫೩
ಇತಿಹಾಸದ ಗೆರೆಗಳು	ಡಿ. ಹೊಸಳ್ಳಿ ಶಿವು	೫೬
ಸಂಪಾದಕೀಯ ಲೇಖನಗಳು	ಚಂಪಾ	೫೭
೧. ಬೆರಳಚ್ಚಿನ ಬ್ರಹ್ಮಚಾರಿ : ಒಂದು ಸಂದರ್ಶನ		
೨. ವೃತ್ತಿ ರಂಗಭೂಮಿ : ಒಂದು ಚಿಂತನೆ		
ಬೇಂದ್ರೆಯವರ ಮೊದಲ ಪುಣ್ಯತಿಥಿ	ಎಚ್. ಆರ್. ಅಮರನಾಥ	೬೫
ಪ್ರತಿಕ್ರಿಯೆಗಳು	ಸತೀಶ ಕುಲಕರ್ಣಿ/ರಘು ಕುಲಕರ್ಣಿ	೬೭
	ಡಾ. ಬಸವ ಪ್ರಭು ಪಾಟೀಲ / ಎನ್. ಟಿ. ಭಟ್	
ಅರುಣ ಕಾಂಬಳೆ–'ಲಂಕಾವತಾರ'	ಸಿದ್ದಣ್ಣ ಗುಂಬ್ಬಿ	೭೭
ನೆರಳ ನಡಿಗೆ	ಶ್ರೀನಾಥ್ ರಾಯಸಂ	೮೦
ಅವಳಿ ಜವಳಿ	ಚಂದ್ರಶೇಖರ ಪಾಟೀಲ	೮೧
ಮೂರು ಕವನಗಳು	ಸಿದ್ದನಗೌಡ ಪಾಟೀಲ	೮೨
೧೯೮೨ರ ಐವರು ಹೊಸ ಕವಿಗಳು	…ಕ ಮಠದ	೮೫

DEVU PATTAR
GUTTIPETH,
SHAHAPUR-585223

ಪ್ರಥಮ ಸಂಕಲನದ ಕವಿಗಳು

ಯಾವಾಗಲೂ ಹೊಸ ಪೀಳಿಗೆಯ ಮೇಲೆ ಗಮನವಿರಿಸುತ್ತಲೇ ಬಂದ **ಸಂಕ್ರಮಣವು** ಪ್ರಥಮ ಸಂಕಲನದ ಕವಿಗಳನ್ನು, ಅವರ ಕೆಲ ಉತ್ತಮ ಕವನಗಳನ್ನು ಪುನರ್ ಮುದ್ರಿಸುವ ಮೂಲಕವೇ ಪರಿಚಯಿಸುವ ಹೊಸ ಉಪಕ್ರಮ ಪ್ರಾರಂಭಿಸಿದೆ. ಇದನ್ನು ಸಹೃದಯರು ಸ್ವಾಗತಿಸುವರೆಂಬ ಭರವಸೆ ಇದೆ.

—ಸಂಪಾದಕ

ಈ ಸಂಚಿಕೆಯು ಲೇಖಕರು

ಎಸ್. ಜಿ. ಸಿದ್ಧರಾಮಯ್ಯ ಕನ್ನಡ ಪ್ರಾಧ್ಯಾಪಕ, ಸರಕಾರಿ ಕಾಲೇಜು, ಮಡಿಕೇರಿ **ದಿ| ಗುಲ್ವಾಡಿ ವೆಂಕಟರಾಯರು** ಕನ್ನಡದ ಮೊದಲ ಕಾದಂಬರಿಯ ಕರ್ತೃ. **ಬಸವಲಿಂಗ ಸೊಪ್ಪಿನಮಠ** ಕನ್ನಡ ಪ್ರಾಧ್ಯಾಪಕ, ಜಿ.ಪಿ.ಪಿ ಕಾಲೇಜು, ಸಿಂದಗಿ **ದೇಶಹಳ್ಳಿ ಜಿ. ನಾರಾಯಣ** ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು; ನಂ.೩, ಬಿ.ಸಿ.ಸಿ. ಬ್ಯಾಂಕ ಕಟ್ಟಡ, ಚಾಮರಾಜಪೇಟೆ, ಬೆಂಗಳೂರು. ೧೮; **ಜಂಬಣ್ಣ ಅಮರಚಿಂತ** ಜಿಲ್ಲಾ ಲೆಪ್ರಸಿ ಆಫೀಸು, ರಾಯಚೂರು **ಎಸ್. ಶಿವಾನಂದ** ಸ್ಟೇಟ ಅಕೌಂಟ; ವಿಭಾಗ, ಕಾವೇರಿ ಭವನ, ಬೆಂಗಳೂರು **ರವಿ ಬೆಳಗೆರೆ** ೪ನೇ ರಸ್ತೆ, ಸತ್ಯನಾರಾಯಣ ಪೇಟೆ, ಬಳ್ಳಾರಿ **ಸ. ಉಷಾ** ಕನ್ನಡ ಪ್ರಾಧ್ಯಾಪಕಿ, ಬಿ ಪಿ. ಕಾಲೇಜು ಹೊಳಲ್ಕೆರೆ, **ಶ್ರೀಕೃಷ್ಣ ಚೆನ್ನಂಗೋಡ್** ಸ್ಮೃತಿ ಪ್ರಕಾಶನ, ಅಡ್ಯನಡ್ಕ, ದ. ಕ. **ಪೋಲಂಕಿ ರಾಮಮೂರ್ತಿ** L.೩೦, ಮಾನಸ ಗಂಗೋತ್ರಿ, ಮೈಸೂರು–೬ **ಡಿ. ಹೊಸಳ್ಳಿ** ಶಿವು. ನಂ.೬. ೭ನೇ ಕ್ರಾಸು, ಸರಸ್ವತಿಪುರಂ, ಮೈಸೂರು–೯, **ಎಚ್ ಆರ್. ಅಮರನಾಥ** ಇಂಗ್ಲಿಷ್ ಪ್ರಾಧ್ಯಾಪಕ, ಜ್ಯೂ. ಕಾಲೇಜು, ಹಳಿಯಾಳ, **ಸತೀಶ ಕುಲಕರ್ಣಿ** ಕೆ.ಇ.ಬಿ. ಹಾವೇರಿ, **ರಘು ಕುಲಕರ್ಣಿ** ಭಾಷಾ ವಿಜ್ಞಾನ ವಿಭಾಗ, ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದು **ಡಾ. ಬಸವಪ್ರಭು ಪಾಟೀಲ** ಕಲ್ಯಾಣ ವೈದ್ಯಾಲಯ, ಮಾನ್ವಿ **ಎನ್.ಟಿ.ಭಟ್** ಎಂ.ಜಿ.ಎಂ. ಕಾಲೇಜು, ಉಡುಪಿ **ಸಿದ್ದಣ್ಣ ಗಂಬ್ಬಿ**, ಬಿಡಿಟಿ ಕಾಲೇಜು, ದಾವಣಗೆರೆ **ಶ್ರೀನಾಥ್ ರಾಯಸಂ** ಸೀನಿಯರ್ ಅಬ್ಸರ್ವರ್, ಹವಾಮಾನ ಇಲಾಖೆ, ಬಳ್ಳಾರಿ **ಸಿದ್ಧನಗೌಡ ಪಾಟೀಲ** 'ಯುವಲೋಕ', ಶ್ರೀನಗರ, ಧಾರವಾಡ–೩ **ಅಶೋಕ ಮಠದ** ಕೆನರಾ ಬ್ಯಾಂಕ್, ಕಿತ್ತೂರ ಚೆನ್ನಮ್ಮ ವೃತ್ತ, ಹುಬ್ಬಳ್ಳಿ

ಶುಭಾಶಯಗಳು —

ಬೆಲ್ಲದ ಆ್ಯಂಡ ಕಂಪನಿ

ಹುಬ್ಬಳ್ಳಿ-೨೧ ಧಾರವಾಡ–೧

ಕೇಡುಲೇಸಿನಾ ಗಡಿಯಾಚೆ ನಿಂತವನು

ಎಸ್. ಜಿ. ಸಿದ್ಧರಾಮಯ್ಯ

DEVU PATTAR
GUTTIPETH,
SHAHAPUR-585223

ಇಲ್ಲ ಮಾರಾಯ ಖಂಡಿತ ನಿನ್ನ ನೆನಪಿರಲೇ ಇಲ್ಲ
ಅಂಥದ್ದರೊಳಗೆ ಈ ಸರಿಮಧ್ಯ ಹೊತ್ತಲ್ಲಿ
ಬುತ್ತಿಗಂಟು ಬಿಚ್ಚಿ ಧುತ್ತನೆ ಪ್ರತ್ಯಕ್ಷವಾಗಿ
ಕೈಯ ತುತ್ತು ಬಾಯಿಗಿಲ್ಲದಂತೆ ಕಾಡಿಸುವುದೆ ?

ಕೊಡಕ್ಕೆ ಕುಣಿಕೆ ಬಿಗಿದು ಬಾವಿ ಇಲ್ಲದ ಜಾಗ
ದಲ್ಲಿ ಸರಭರ ಎಳೆವ ಚಿತ್ರ ! ಇದು ಎಂಥ ಪಾತ್ರ ?
ಊರು ಬಿಟ್ಟು ಲಾಗಾಯ್ತು ನಾನು ನೀರಿಗೆ ಹೋಗುವ
ಅದೂ ಕಂಡರಿಯದ ನನ್ನೂರ ಪಡ್ಡೆ ಹುಡುಗ

ರ ಜತೆ ಕೊಡಕ್ಕೆ ಯಾ ಹಗ್ಗಕ್ಕೆ ಕಿತ್ತಾಡುವ
ಸಂಗತಿ ಹಾ ! ನಿಜಕ್ಕೂ ನೆನಪು ಸುಳ್ಳಲ್ಲ
ಅದೆ ಆ ಬುಗುರಿ ಮರದಡಿಯ ಬೇರ ಉಬ್ಬಿ
ನ ಜಾಗ. ಮನೆಯ ಬಸಿದ ಎಸರನ್ನೊಲ್ಲದ

ತಮ್ಮನ ರಣಾರಂಪ ಮುನಿಸಿಗೆ ಕಾರೆಂಬ ಕತ್ತಲೆ
ಬೋರೆಂಬ ನಾಯಿಗಳಿಗೆ ಹೆದರಿಯೂ ಬಿಡದೆ ಈ
ಮನೆಯಿಂದ ಆ ಮನೆಗೆ ಸ್ವಾಡಿಗೆಗೆ ಆಗಾಗ ಲಕ್ಕ
ನ ಜತೆ ಗೊಣಗಿ ನಡೆದಿದ್ದ ತಡವಿದ್ದೆ ಎಡವಿದ್ದೆ,

ಆಗೆಲ್ಲ ಮುಚ್ಚಿದ್ದ ಕಣ್ಣಲ್ಲೂ ನಿಚ್ಚಳ ಬೆತ್ತಲಾಗಿ ಸ್ಪಷ್ಟ
ವಿದ್ದ ಗುಂಡಿ ಕೂಳೆ ಕಲ್ಲು ಕೆಸರ ಹಾಸು ಬೇರ ಕಾಲ
ಬೀಸು.   ಆ ದಿನಮಾನವೇ ಇರಬೇಕು ಗರ್ಭದ
ಚೇಳು ಕಡಿದದ್ದು ರಣಾರಂಪದ ತಮ್ಮನಿಗೆ ಹೊಗೆ

ಮೆಣಸು ಧೂಪ ಸೇವೆ ಮನೆ ಬಿಡುವಂತಾದದ್ದು
ಕೊಬ್ಬಿದ ಕತ್ತಲ ಉಬ್ಬಿದ ಬೇರಿನ ಆ ಬುಡ
ದಲ್ಲೇ ಗೆಳೆಯ ಈಗ ಬಾವಿ ಇರದ ಬಾವಿ ಕಂಡದ್ದು
ಅರಿವಿನ ಪರಿಧಿಯೊಳಗೊಮ್ಮೆ ಬಂದಿರದ ಆ

ನನ್ನೂರ ಪಡ್ಡೆಹೈದರು ಕಾಡಿನ್ದು ಕಿತ್ತಾಡಿದ್ದು ನನ್ನ
ದಲ್ಲದ ಕೊಡ ಹಗ್ಗಗಳಿಗೆ ! ಎಂಥ ಸೋಜಿಗ ಮಾರಾಯ
ನಮ್ಮೆಲ್ಲ ದನಿಗಳ ಆ ನಿನ್ನ ದನಿ ಕೇಳಿದ್ದು
ಆ ಕ್ಷಣವೆ. ಶಬ್ದದ ಚಲನೆಗಿಂತ ನಿಶ್ಶಬ್ದದ ಬೆಳಕು

ತೀಕ್ಷ್ಣಗಾಮಿಯಲ್ಲವೇ ? ನಿನ್ನ ಕೋಮಿನ ನಿನ್ನವರದೇ
ಪರಿಸೆ ಆ ಹಾಡಿನ ವರಸೆ ನಡುನಡುವೆ ಪಾಂಡವ
ಸೋದರಿಕೆಯ ಬೆರಸೆ ಅಸಂಗತ ಹೋಲಿಕೆಯಲ್ಲೂ ಆ
ಪ್ರಿಯ ಉಪ್ಪಿನ ಹರಳು ಬಾಯ ತುತ್ತಿಗೆ ಬೆರಳು.

ನಿನ್ನ ಬಿಳುಪುದನಿ ಸರಿದಂತೆ ಕಣ್ಕತ್ತಲಿಟ್ಟಾಗಿ
ನನ್ನಪ್ಪನ ಪ್ರತಿರೂಪದ ನೆರವುನೆಯ ಚಿಕ್ಕಮ್ಮ
ಯಥಾ ಕೇಳಿದ್ದು ಇದರ ಹಿಂದೆ ಒಂದೊಂದಾ
ನನಗೆ ಭೂತವಾದ ಮುಖಗಳ ಸಂತೆ ಸರಿದದ್ದು

ಹೇಳು ಗೆಳೆಯ ಬೋರೆಂಬ ನಾಯಿಗಳ ನನ್ನೂರ
ಹಳೆಯ ನನ್ನ ಭೂತದ ಆ ಶ್ರೀಮಂತ ಮುಖಗಳು
ಕೂಳಿಗೆ ಬೇರಿಗೆ ಬೀಸಿಗೆ ಎಂದಾದರೂ ಬಸಿದ
ದ್ದುಂಟೆ, ಬೆತ್ತಲಾದದ್ದುಂಟೆ ? ಕತ್ತಲಲ್ಲೂ ಕಾಡಿದೆ

ಹೇಳು ಗೆಳೆಯ ಸರಿ ಮಧ್ಯ ಹೊತ್ತಲ್ಲಿ ಹೆಗಲ ಭಾರ
ವಾಗಿ ಕಂಡವನೆ ಉತ್ತಲೇಖ ದ ನಡುವೆ ಹೇತು
ಮೂಗಿಗೆ ನಾತವಾಗಿ ಕಾಡಿದವನೆ ಕುರಿ ಆಡು
ಗಳ ಜತೆ ಕಾಡಲ್ಲಿ ಕಾಡಾಗಿ ನಾನು ನಿಂತ ಈ

ನಾಡಿಗರ ಸಿಮೆಂಟಿನ ಬಯಕೆಗಳಲ್ಲಿ ಭಸ್ಮ
ವಾದವನೇ, ಕಳೆದ ಕೊಳಲಿನ ನೆನಪಾಗಿ ನನ್ನೊ
ಳಗೆ ಕಾಡುವವನೇ, ಹೇಳು ಈ ಇಂಥ ಕನಸಿನ
ಮಾಟ ಬಿದ್ದವಗೆ ಕೇಡಂತೆ ಇದ್ದವಗೆ ಲೇಸಂತೆ ? !

ಕತ್ತಲ ಬೇರಿನಾ ಉಬ್ಬು ನಾರನ್ನ ಎಬ್ಬಿದವನೇ
ನನ್ನೆಲ್ಲ ಭೂತ ಸಂಗತಿಗಳ ಸರಮಾಲೆಯ
ಉಧೋ ಉಧೋ ಕವಡೆ ಚೌಡಿಕೆಯ ಜೋಗಿಣಿಯೇ
ಅಲ್ಲ ನೀನು ಕನಸಲ್ಲಿ ಕೇಡು ಲೇಸಿನಾ ಗಡಿಯಾಚೆ ನಿಂತವನು.

ಗುಲ್ವಾಡಿ ವೆಂಕಟರಾಯರು

ಹಿಂದೂ ಧರ್ಮನಿಯಮಗಳಲ್ಲಿ "ಜಾತಿ" ಎಂಬುದು ಅತ್ಯಂತ ವಿಶೇಷವಾದುದು. ಜಾತಿನಿಯಮವನ್ನನುಸರಿಸದೆ ಒಬ್ಬ ಹಿಂದುವು ಯಾವ ಕೆಲಸವನ್ನಾದರೂ ಮಾಡಲು ಸಾಧ್ಯವಿಲ್ಲ. ಜೀವಿಸಿಕೊಂಡಿರುವಾಗಲೂ ಮರಣಾನಂತರವಾದರೂ ಅವನು ಜಾತಿ ನಿಯಮವನ್ನು ತಪ್ಪಿಸಿಕೊಳ್ಳಕೂಡದು. ಈ ನಿಯಮದ ವಿಶೇಷತ್ವವು ಎಷ್ಟು ಮಟ್ಟಿಗೆ ಉಂಟೆಂದರೆ ಜಾತಿ ವಿನಾ ಒಬ್ಬ ಹಿಂದುವು ಹಿಂದುವೆನ್ನಿಸಲೇ ಕೂಡದಷ್ಟಿದೆ. ಇತ್ತಲಾಗಿ ಮಡಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ಮಹಾದೇವಾನಂದ ಸ್ವಾಮಿಯವರು ಒಂದು ಉಪನ್ಯಾಸವನ್ನು ಮಾಡುವಾಗ "ಜಾತಿ ವಿನಾ ಈ ಲೋಕವೇ ನಡೆಯದು" ಎಂದು ಗಂಭೀರವಾಗಿ ಹೇಳಿಬಿಟ್ಟರು. ಆದರೆ ಜಾತಿನಿಯಮವು ಪ್ರಚಲಿತವಿಲ್ಲದ ಅಮೇರಿಕ, ಆಫ್ರಿಕ, ಯುರೋಪ್ ಮುಂತಾದ ರಾಷ್ಟ್ರಗಳು "ಲೋಕ"ದಲ್ಲಿ ಸೇರಿರುವವುಗಳೇ ಎಂಬ ವಿದ್ಯಮಾನವನ್ನು ಆಲೋಚಿಸಿದರೆ ಆ ಮಾತಿಗೆ ಬೆಲೆ ಎಷ್ಟೆಂದು ನಿಶ್ಚಯಿಸ ಬಹುದು. ತಥಾಪಿ ಅನೇಕಾನೇಕ ಹಿಂದುಗಳ ಅಭಿಪ್ರಾಯವು-ಮುಖ್ಯವಾಗಿ ಸಾಂಪ್ರತ ಕಾಲದಲ್ಲಿ ಬ್ರಾಹ್ಮಣರೆನ್ನಿಸುವವರ ಅಭಿಪ್ರಾಯವು-ಪ್ರಾಯಶಃ ಆ ಸ್ವಾಮಿಯವರ ಅಭಿಪ್ರಾಯದಂತೆಯೇ ಇದೆ; ಮತ್ತೆ ಜಾತಿನಿಯಮವು ದೈವನಿರ್ಮಿತವಾದುದೆಂದು ಅವರ ಅಂಬೋಣವೂ ನಂಬಿಕೆಯೂ ಇದ್ದು ಇವುಗಳನ್ನು ಸಾದೃಶ್ಯಪಡಿಸುವುದ ಕ್ಕೋಸ್ಕರ ನಾನಾ ತರದಲ್ಲಿ ಪೇಚಾಡುತ್ತಾರೆ. ಇಷ್ಟು ವಿಶೇಷವಾದ ಮತ್ತು ದೈವ ನಿರ್ಮಿತದ್ದೆಂಬ ಈ ನಿಯಮವು ಹಿಂದುಗಳ ವಾಸಸ್ಥಾನವಾದ ಈ ಹಿಂದುಸ್ಥಾನದಲ್ಲಿ ವಿನಾ ಇಡೀ ಪೃಥ್ವಿಯಲ್ಲಿ ಬೇರೆ ಎಲ್ಲಿಯೂ ಇಲ್ಲ. ಹಿಂದುಸ್ಥಾನದಲ್ಲಿರುವ ಹಿಂದು ಗಳಲ್ಲದೆ ಬೇರೆಯವರ ಬಾಳು ಹೇಗೊ ಆಗಲೆಂದು ದೇವರ ಮನಸ್ಸು ಇತ್ತೋ ಏನೋ! ಆ ಮಾತು ಹೇಗೂ ಇರಲಿ–ಜಾತಿನಿಯಮವು ಹಿಂದುಗಳಲ್ಲಿ ಬಹು ವಿಶೇಷ ವಾದ ಧರ್ಮನಿಯಮವೆನ್ನುವಲ್ಲಿ ಸಂಶಯವಿಲ್ಲ. ಈ ಆಶ್ಚರ್ಯಕರವಾದ ನಿಯಮ

ವನ್ನು ಕುರಿತು ಅನೇಕರು ವಿಚಾರ ಮಾಡುತ್ತಾ ಇದ್ದಾರೆ-ನಾವು ಸಹ ಕೈಲಾದಷ್ಟು ಮಟ್ಟಿಗೆ ವಿಚಾರಿಸೋಣ.

೨. ಧರ್ಮನಿಯಮವೆನ್ನಿಸುವ ಯಾವುದೊಂದು ವಿಷಯವನ್ನಾದರೂ ವಿಚಾರಿಸುವಾಗ ಶ್ರುತಿ, ಸ್ಮೃತಿ, ಪುರಾಣ, ಲೋಕಾಚಾರವೆಂಬ ಚತುರ್ವಿಧ ಪ್ರಮಾಣಗಳನ್ನನುಸರಿಸಿ ವಿಚಾರಿಸುವುದು ಯೋಗ್ಯವೆಂದೂ, ಅವುಗಳಲ್ಲಿ ಪುರಾಣಕ್ಕಿಂತ ಸ್ಮೃತಿ, ಸ್ಮೃತಿಗಿಂತ ಶ್ರುತಿ ಹೆಚ್ಚು ಪ್ರಧಾನವಾದ ಪ್ರಮಾಣಗಳೆಂದೂ, ಶ್ರುತಿ, ಸ್ಮೃತಿ,ಪುರಾಣ ಈ ಮೂರರಲ್ಲಿಯೂ ನಿಶ್ಚಯಿಸಲ್ಪಡದ ವಿಷಯವು ಲೋಕಾಚಾರಕ್ಕನುಸಾರವಾಗಿ ನಿಶ್ಚಯಿಸಲ್ಪಡತಕ್ಕದೆಂದೂ ಪ್ರಾಚೀನ ಕಾಲದ ಸುಜ್ಞರಾದ ಮಹರ್ಷಿಗಳು ವಿಧಿಸಿದ್ದಾರೆ. ಆದುದರಿಂದ ಈ ಜಾತಿ ಎಂಬ ನಿಯಮವನ್ನು ಹಾಗೆಯೇ ವಿಚಾರಿಸೋಣ. ಈ ವಿಚಾರದಲ್ಲಿ ಹೆಚ್ಚು ಕುಂದುಗಳಿದ್ದರೆ ಸುಜ್ಞರಾದ ಸಭಾಸದರು ಕ್ಷಮಿಸುವುದಲ್ಲದೆ ತಿದ್ದಿ ಸರಿಪಡಿಸಲೂ ಬೇಕೆಂದು ಪ್ರಾರ್ಥಿಸುತ್ತೇನೆ. ಒಂದು ಮತಸಂಬಂಧವಾದ ಪ್ರಕರಣವನ್ನು ಚರ್ಚಿಸುವಾಗ ಒಬ್ಬನ ಮನಸ್ಸಿಗೆ ಒಪ್ಪುವ ಅಥವಾ ಇನ್ನೊಬ್ಬನ ಮನಸ್ಸಿಗೆ ಒಪ್ಪದ ಮಾತುಗಳು ಬರುವುದು ಅಸಹಜವಲ್ಲ; ಸುಜ್ಞರು ಅಂತಹ ಮಾತುಗಳನ್ನು ಕೇಳಿದರೆ ಅವುಗಳ ಸತ್ಯಸತ್ಯತ್ವವನ್ನು ವಿಚಾರಿಸಲು ನೋಡುತ್ತಾರಲ್ಲದೆ ಕೋಪೋದ್ರೇಕಪಟ್ಟು ಜಗಳ ಮಾಡುವುದಿಲ್ಲವೆಂಬ ವಿದ್ಯಮಾನವನ್ನು ಸುಜ್ಞರಾದ ಈ ಸಭಾಸದರಿಗೆ ತಿಳಿಹಿಸಬೇಕೆಂಬ ಅವಶ್ಯವಿಲ್ಲವಷ್ಟೇ ?

೩. ಋಗ್ವೇದದ ೧೦ನೇ ಮಂಡಲದ ೯೦ನೇ ಮಂತ್ರವಾಗಿರುವ ಪುರುಷಸೂಕ್ತದಲ್ಲಿ "ದೇವತೆಗಳು ಪುರುಷನನ್ನು ಖಂಡಿಸಿದಾಗ ಎಷ್ಟು ತುಂಡುಗಳನ್ನಾಗಿ ಖಂಡಿಸಿದರು ? ಏನು ಅವನ ಮುಖವಾಗಿತ್ತು ? ಏನು ಅವನ ಬಾಹುಗಳಾಗಿತ್ತು ? ಯಾವ ವಸ್ತುಗಳು ಅವನ ತೊಡೆಗಳೂ ಪಾದಗಳೂ ಆಗಿದ್ದುವು ? ಬ್ರಾಹ್ಮಣನು ಮುಖವಾಗಿದ್ದನು; ಕ್ಷತ್ರಿಯನು ಬಾಹುಗಳಾಗಿದ್ದನು; ವೈಶ್ಯನೆಂದು ಕರೆಯಲ್ಪಡುವ ಜೀವಿಯು ತೊಡೆಗಳಾಗಿದ್ದನು; ಶೂದ್ರನು ಪಾದಗಳಿಂದ ಸಿಡಿದನು."

ಎಂಬ ವಚನವಿದೆ. ಇದು ಜಾತಿನಿಯಮಕ್ಕೆ ಮೂಲಾಧಾರವಾದ ವಚನವೆಂದೂ ಬ್ರಾಹ್ಮಣನು ಪುರುಷನ (ಅಂದರೆ ದೇವರ) ಬಾಯಿಯಿಂದಲೂ, ಕ್ಷತ್ರಿಯನು ಬಾಹುಗಳಿಂದಲೂ, ವೈಶ್ಯನು ತೊಡೆಗಳಿಂದಲೂ, ಶೂದ್ರನು ಪಾದಗಳಿಂದಲೂ ಉದ್ಭವಿಸಿದರೆಂದೂ ಹಿಂದುಗಳು-ಮುಖ್ಯವಾಗಿ ಪ್ರಾಸ್ತುತದ ಬ್ರಾಹ್ಮಣರು-ಸಾಧಿಸುತ್ತಾರೆ. ಆದರೆ ಯತಾರ್ಥದಲ್ಲಿ ಈ ಮಂತ್ರದಲ್ಲಾಗಲೀ ವೇದದ ಬೇರೆ ಯಾವ ಮಂತ್ರಭಾಗದಲ್ಲಾಗಲಿ ಜಾತಿನಿಯಮಕ್ಕಾಧಾರವಾದ ಯಾವುದೊಂದು ಶಬ್ದವಾದರೂ ಇಲ್ಲ. ಈ

ಬ್ರಾಹ್ಮಣರಂ ಬರೇ ಸಾಮ್ಯಾರ್ಥವನ್ನು ಶಬ್ದಾರ್ಥದಲ್ಲಿ ಅನ್ವಯಿಸಿ ಅರ್ಥ ಅನರ್ಥ ಮಾಡಿ ಜಾತಿಗೋಸ್ಕರ ಬಡಿದಾಡುತ್ತಾರೆ. ಇದೇ ಪುರುಷಸೂಕ್ತದಲ್ಲಿ ಮೇಲಿನಂತೆಯೇ ಸಾಮ್ಯಾಲಂಕೃತಗಳಾದ ಬೇರೆ ವಚನಗಳೂ ಇವೆ. ಅವುಗಳ ಅರ್ಥ ಸಹ ಶಬ್ದಾರ್ಥದಲ್ಲಿ ಅನ್ವಯಿಸಿದರೆ ಅದರಿಂದ ಎಂತಹ ನಗೆಗೇಡಿತನ ವಿದ್ಯಮಾನವು ಉಂಟಾಗುವುದು ! ಹೇಗೆಂದರೆ :

> "ದೇವತೆಗಳು ಪುರುಷನನ್ನು ಆಹುತಿಯನ್ನಾಗಿ ಮಾಡಿ ಯಜ್ಞಮಾಡುವಾಗ ವಸಂತಕಾಲವು ಅದರ ಬೆಣ್ಣೆಯಾಗಿತ್ತು; ಘ್ರೀಷ್ಮಕಾಲವು ಸೌದೆಯಾಗಿತ್ತು; ಶರತ್ಕಾಲವು ಬಲಿಯಾಗಿತ್ತು"

ಎಂದು ಒಂದು ವಚನವಿದೆ. ಇದರಲ್ಲಿಯು ಸಾಮ್ಯಗಳನ್ನು ನಾವು ಮೇಲಿನದರಲ್ಲಿಯು ಹಾಗೆ ಶಬ್ದಾರ್ಥ ಪ್ರಕಾರ ಅನ್ವಯಿಸಿದರೆ "ವಸಂತಕಾಲವು ಬೆಣ್ಣೆಯಿಂದ, ಘ್ರೀಷ್ಮ ಕಾಲವು ಸೌದೆಯಿಂದ, ಶರತ್ಕಾಲವು ಬಲಿಯಿಂದ ಹುಟ್ಟಿಬಂದವುಗಳೆ"ಂದು ಹೇಳ ಬೇಕಷ್ಟೆ ? ಆದರೆ ಹಾಗೆ ಹೇಳಿದರೆ ನಮ್ಮನ್ನು ಹುಚ್ಚರೆಂದು ಯಾರಾದರೂ ಹೇಳದೆ ಇರುವರೆ ? ಬ್ರಾಹ್ಮಣರು ಸಹ ಹೇಳಿಯೇ ಹೇಳ್ಯಾರು!

೪. ಈ ಜಾತಿನಿಯಮವನ್ನು ಪ್ರತಿಪಾದಿಸುವುದಕ್ಕೋಸ್ಕರ ಬಹಳ ಕಡೆಗಳಲ್ಲಿ ಗೊತ್ತುಗುರಿ ಇಲ್ಲದ ಪೇಚಾಟವು ನಡೆಯುತ್ತಿದೆ ಎಂದು ಮೇಲೆ ಹೇಳೋಣಾಯಿತು. ಆದರೆ ಆ ಪೇಚಾಟದಿಂದ ಯಾವ ಪ್ರಯೋಜನವಾದರೂ ಇನ್ನೂ ಉಂಟಾಗಲಿಲ್ಲ. ವಿದ್ಯಾಪರಿಣಿತರೆಂದು ಕೀರ್ತಿಯನ್ನು ಮೆರೆಯಿಸಿದ ಸಕಲ ಜನಮಾನನೀಯರಾದ ಮೆಕ್ಸಮಿಲ್ಲರ ಪಂಡಿತರು ಈ ಜಾತಿನಿಯಮವು ವೇದಸಮ್ಮತವಾದುದೋ ಹೇಗೆಂದು ನಿಶ್ಚಯಿಸಿದ ಬಳಿಕ ಹೆಚ್ಚಿನ ಪೇಚಾಟವು ಪ್ರಯೋಜನಕಾರಿಯಲ್ಲ. ಆ ಮಹನೀಯರು ಹೇಳುವುದೇನೆಂದರೆ:

"ನಾವು ಪ್ರಾಚೀನ ಪ್ರಮಾಣಗಳನ್ನೆಲ್ಲ ಮುಂದಿಟ್ಟುಕೊಂಡು, ಮನುಧರ್ಮಶಾಸ್ತ್ರ ದಲ್ಲಿ ತೋರುವ ಮತ್ತು ಪ್ರಸ್ತುತದಲ್ಲಿ ಪ್ರಚಲಿತವಾಗಿರುವ ಜಾತಿನಿಯಮವು ವೇದದಲ್ಲಿ ಪ್ರಸ್ತಾಪಿಸಲ್ಪಟ್ಟಿದೆಯೇ ಎಂಬ ಪ್ರಶ್ನೆಗೆ ಉತ್ತರ ಕೊಡುವುದಾದರೆ ಇಲ್ಲವೇ ಇಲ್ಲ ವೆಂದು ಉತ್ತರ ಕೊಡಬೇಕು. ವೇದ ಮಂತ್ರಗಳಲ್ಲಿ ಜಾತಿ ಎಂಬ ಪೀಕಲಾಟಕ್ಕೂ ಬ್ರಾಹ್ಮಣರು ತಾವೇ ಪೂಜ್ಯರೆಂದು ಅಹಂಕರಿಸುವುದಕ್ಕೂ ಶೂದ್ರರೇ ಮುಂತಾದವ ರನ್ನು ತಗ್ಗಿಸಿ ಹೀನದಶೆಯಲ್ಲಿರಿಸುವದಕ್ಕೂ ಆಧಾರವಿಲ್ಲ. ಬೇರೆ ಬೇರೆ ತರದ ಜನರು ಪರಸ್ಪರ ಅನ್ನಪಾನ ಸಂಪರ್ಕಗಳನ್ನು ನಡೆಯಿಸದೆ ಇರುವುದಕ್ಕೂ ವಿವಾಹ ಸಂಬಂಧ ಗಳನ್ನು ಬೆಳೆಯಿಸದೆ ಇರುವುದಕ್ಕೂ ಅಂತಹ ವಿವಾಹಗಳಿಂದ ಹುಟ್ಟಿದ ಸಂತತಿ ಯಲ್ಲಿ ಕೊರತೆಯನ್ನು ಕಂಡುಕೊಳ್ಳುವುದಕ್ಕೂ ಆಧಾರಗಳಾದ ನಿಯಮಗಳು

ವೇದದಲ್ಲಿ ಇಲ್ಲ. ಈಗ ಎಲ್ಲಾ ಕಡೆಯಲ್ಲೂ ಸಾಂದ್ರವಾಗಿ ನಡೆಯುವ ಜಾತಿಭೇದವು ವೇದೋಕ್ತವಾದ ನಿಬಂಧನೆಯಲ್ಲ. ವೇದಕಾಲದವದವರಿಗೆ ಅದು ತಿಳಿದು ಇದ್ದೇ ಇಲ್ಲ. ಆದುದರಿಂದ ಜಾತಿ ನಿಯಮವನ್ನು ಧಿಕ್ಕರಿಸಿ ನಡೆಯುವವನು ನಿಜವಾದ ವೇದದಾಜ್ಞೆಯನ್ನು ಮೀರಿ ನಡೆದವನಾಗುವುದಿಲ್ಲ" ಎಂದು ಖಂಡಿತವಾಗಿ ಹೇಳಿದ್ದಾರೆ. ಇವರಂತೆಯೇ ವೇದಶಾಸ್ತ್ರಸಂಪನ್ನರಾದ ವೇದ ಭಾಷ್ಯ ರಚಕರಾದ ಶ್ರೀಮದ್ದಯಾನಂದ ಸರಸ್ವತಿ ಸ್ವಾಮಿಗಳವರೂ ಬೇರೆ ಅನೇಕ ಪಂಡಿತರೂ ಹೇಳಿದ್ದಾರೆ.

೫. ವೇದಗಳಲ್ಲಿ ನಾಲ್ಕು 'ವರ್ಣ'ಗಳ ಪ್ರಸ್ತಾಪ ಮಾತ್ರ ಉಂಟು ಆ ವರ್ಣಗಳು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬವುಗಳು. ಇವುಗಳು "ಜಾತಿ" ಎಂಬ ಶಬ್ದಕ್ಕೆ ಈಗಿನವರು ಕೊಟ್ಟಿರುವ ಅರ್ಥಪ್ರಕಾರದ ಜಾತಿಗಳಲ್ಲ-ತರಗತಿಗಳು. ಸಾಮಾಜಿಕ ಅನುಕೂಲತೆಗಳಿಗೋಸ್ಕರ ಇಂತಹವರು ಇಂತಹ ಕೆಲಸ ಮಾಡಬೇಕೆಂದು ನಿಯಮಗಳನ್ನು ಏರ್ಪಡಿಸುವ ಅವಶ್ಯಕತೆಯು ಉಂಟಾಗಿ ಆ ಪ್ರಕಾರ ತರಗತಿಗಳು ಮಾಡಲ್ಪಟ್ಟಿದ್ದುವು. ಆಗ ಬ್ರಹ್ಮಜ್ಞರೂ, ವೇದಜ್ಞರೂ ಇಹಪರಗಳ ಸುಖ ದುಃಖದ ಗೋಜಿಲ್ಲದವರೂ ಇತರರನ್ನು ಜ್ಞಾನೋಪದೇಶವನ್ನು ಮಾಡಲು ಯೋಗ್ಯರೂ ಆಗಿದ್ದವರು ಪ್ರಥಮ ತರಗತಿಯಲ್ಲೂ, ಭುಜಬಲ ಪರಾಕ್ರಮಿಗಳೂ ಯುದ್ಧಶಾಲಿಗಳೂ ಜನರಾಶಿಯ ಕ್ಷೇಮವನ್ನು ಕಾಪಾಡಲು ಶಕ್ತರೂ ಆಗಿದ್ದವರು ಎರಡನೇ ತರಗತಿಯಲ್ಲೂ, ವ್ಯವಸಾಯ ವ್ಯಾಪಾರಗಳಲ್ಲಿ ಕುಶಲರಾಗಿದ್ದವರು ಮೂರನೇ ತರಗತಿಯಲ್ಲೂ, ಈ ಕೆಲಸಗಳನ್ನು ಮಾಡಲು ಬುದ್ಧಿಯೂ ಶಕ್ತಿಯೂ ಸಾಕಷ್ಟು ಇಲ್ಲದವರು ನಾಲ್ಕನೇ ತರಗತಿಯಲ್ಲೂ ಸೇರಿದರು. ಆದರೇನಾಯಿತು ? ಈ ತರಗತಿಗಳವರಲ್ಲಿ ಊಟ ಉಪಚಾರ ವಿವಾಹವೇ ಮುಂತಾದ ಸಂಪರ್ಕ ಸಂಸರ್ಗಗಳು ನಡೆಯುವಲ್ಲಿ ಯಾವ ಪ್ರತಿಬಂಧಕಗಳೂ ಇದ್ದಿಲ್ಲ. ವೇದ ಕಾಲವಲ್ಲೂ, ಅನಂತರ ಬಹುಕಾಲದವರೆಗೂ ಬ್ರಾಹ್ಮಣರು ಶೂದ್ರರಲ್ಲೂ, ಶೂದ್ರರು ಬ್ರಾಹ್ಮಣರಲ್ಲೂ ಊಟವೇ ಮುಂತಾದ ಸಂಪರ್ಕ ಸಂಸರ್ಗಗಳನ್ನು ನಡೆಯಿಸುತ್ತಿದ್ದರು ಎಂದು ವೇದ ಮಂತ್ರಗಳಿಂದಲೇ ಕಂಡುಬರುತ್ತದೆ—"ಜಾತಿ ಹೋಯಿತು" ಎಂಬ ಪೀಕಲಾಟವು ಉಂಟಾಗಲೇ ಇಲ್ಲ. ಸಾವಿರವೇಕೆ?-ಅಡಿಗೆ ಗೋಸ್ಕರ ಶೂದ್ರರನ್ನು ಇಟ್ಟುಕೊಳ್ಳುವ ವಿಷಯದಲ್ಲಿ ಆಪಸ್ತಂಭ ಮಹರ್ಷಿಗಳು (II. 2-3-4-9) ಏರ್ಪಾಡು ಮಾಡಿದ್ದಾರೆ. ಶೂದ್ರ ಅಡಿಗೆಭಟ್ಟನು ಮಾಡಿದ ಭೋಜನದ್ರವ್ಯಗಳು ಧರ್ಮಾಚಾರ ಕಾರ್ಯಗಳಿಗೆ ಯೋಗ್ಯವಾದವುಗಳೆಂದು ಎಣಿಸಿಲ್ಪಡುತ್ತಿದ್ದವು. ಮುಖ್ಯಾಂಶವೇನಂದರೆ ಈ ಜಾತಿನಿಯಮವು ವೇದೋಕ್ತವಾದುದಲ್ಲವೆಂಬುದು ಖಂಡಿತವೇ.

೬. ಜಾತಿ ನಿಯಮವು ದೈವನಿರ್ಮಿತವಾದುದೆಂಬುದು ನಿಜವಾದರೆ ದೇವರು ಆ ನಿಯಮವನ್ನು ಪೃಥ್ವಿಯ ಒಂದು ಚಿಕ್ಕ ಭಾಗವಾದ ಹಿಂದುಸ್ಥಾನದಲ್ಲಿ ಮಾತ್ರವೇ ನಿರ್ಮಿಸುವುದಕ್ಕೂ, ಅದು ವೇದಸಮ್ಮತವಾದುದೆಂಬುದು ನಿಜವಾದರೆ, ಆಪಸ್ತಂಭ ಮಹರ್ಷಿಗಳು ಮೇಲೆ ಹೇಳಿದಂತೆ ಶೂದ್ರ ಅಡಿಗೆಭಟ್ಟನನ್ನು ಇಟ್ಟುಕೊಳ್ಳುವ ವಿಷಯದಲ್ಲಿ ನಿಯಮವನ್ನುಂಟು ಮಾಡುವುದಕ್ಕೂ ಶತಪಥ ಬ್ರಾಹ್ಮಣ, ತೈತ್ತರೀಯ ಬ್ರಾಹ್ಮಣವೇ ಮುಂತಾದ ವೇದೋಕ್ತ ಗ್ರಂಥಗಳಲ್ಲಿ ಮತ್ತು ಸ್ಮೃತಿಪುರಾಣಗಳಲ್ಲಿ ಆ ನಿಯಮದ ನಿರ್ಮಾಣದ ವಿಷಯದಲ್ಲಿ ವೇದವಿರುದ್ಧಗಳಾದ ಮತ್ತು ತಮ್ಮಲ್ಲಿ ತಾವೇ ವಿರುದ್ಧಗಳಾದ ಸಂಗತಿಗಳು ಇರುವುದಕ್ಕೂ ಕಾರಣವಿಲ್ಲ. ಶತಪಥ ಬ್ರಾಹ್ಮಣದಲ್ಲಿ “ಪ್ರಜಾಪತಿಯು ‘ಭೂಃ’ಎಂದು ಹೇಳಿ ಆ ಶಬ್ದದಿಂದ ಬ್ರಾಹ್ಮಣನನ್ನೂ ‘ಭುವಃ’ ಎಂದು ಹೇಳಿ ಕ್ಷತ್ರಿಯನನ್ನೂ ‘ಸ್ವಃ’ ಎಂದು ಹೇಳಿ ವೈಶ್ಯನನ್ನೂ ನಿರ್ಮಿಸಿದನು ಎಂದು ಹೇಳಲಾಗಿಯದೆ. (II 1.4). ಇದಕ್ಕೆ ವಿರೋಧವಾಗಿ ತೈತರೀಯ ಬ್ರಾಹ್ಮಣದಲ್ಲಿ “ಈ ಇಡೀ ವಿಶ್ವವು ಬ್ರಹ್ಮನಿಂದ ರಚಿಸಲ್ಪಟ್ಟುದು; ವೈಶ್ಯ ತರಗತಿಯವರು ಋಗ್ವೇದದಿಂದ ಹುಟ್ಟಿದರು; ಯಜುರ್ವೇದವೆಂಬ ಗರ್ಭಕೋಶದಿಂದ ಕ್ಷತ್ರಿಯರು ಹುಟ್ಟಿದರು; ಸಾಮವೇದವು ಬ್ರಾಹ್ಮಣನು ಹುಟ್ಟಿಬಂದ ಮೂಲವಾಗಿದೆ” (III. 12 9) ಎಂದು ಹೇಳಲಾಗಿದೆ. ಈ ಮಾತಿನಲ್ಲಾದರೂ ನಿಶ್ಚಯತ್ವವಿದೆಯೆ? ಇಲ್ಲ, ಇದಕ್ಕೆ ವಿರೋಧವಾಗಿ ಇದೇ ಗ್ರಂಥದಲ್ಲಿ (1.2.6.7) “ಬ್ರಾಹ್ಮಣ ಜಾತಿಯು ದೇವತೆಗಳಿಂದ, ಶೂದ್ರಜಾತಿಯು ಅಸುರರಿಂದ ಉಂಟಾದುವು” ಎಂದು ಹೇಳಲಾಗಿದೆ! ಏವಂಚ ಪ್ರಸ್ತುತದ ಬ್ರಾಹ್ಮಣರು ಹೇಳುವ ಹಾಗಿನ ವಿಷಯವು ಈ ಬ್ರಾಹ್ಮಣ ಗ್ರಂಥಗಳಲ್ಲಿ ಕಂಡುಬರುವುದಿಲ್ಲ.

೭. ಸ್ಮೃತಿಗಳಲ್ಲಿ ಮನುಸ್ಮೃತಿಯನ್ನೇ ಹೆಚ್ಚಾಗಿ ಬ್ರಾಹ್ಮಣರು ಪ್ರಧಾನ ಪ್ರಮಾಣವನ್ನಾಗಿ ಗ್ರಹಿಸುತ್ತಾರೆ; ಬೇರೆ ಸ್ಮೃತಿಗಳು ಅವರ ಮನಸ್ಸಿಗೆ ಹತ್ತುವುದಿಲ್ಲ. ಏಕೆಂದರೆ ಅವುಗಳಲ್ಲಿ ಧರ್ಮನಿಯಮಗಳನ್ನನುಸರಿಸಿ ನಡೆಯುವಲ್ಲಿ ತಮ್ಮ ಮನಸ್ಸಿಗೆ ಕಂಡಂತೆ ನಡೆಯುವುದಕ್ಕೆ ಅವಕಾಶವನ್ನು ಕೊಡದ, ಅವರಿಗೆ ಅಹಿತವಾದ ವಿಷಯಗಳಿವೆ. ಹೇಗೆಂದರೆ, ಪರಾಶರ ಸ್ಮೃತಿಯು ಈ ಕಲಿಯುಗದ ಧರ್ಮಕ್ಕೋಸ್ಕರವೇ ಉಂಟಾದುದಾದರೂ ಕೆಲವು ಸಂಗತಿಗಳಲ್ಲಿ ವಿಧವೆಯರಿಗೆ ವಿವಾಹವಾಗಬಹುದೆಂದು ಅದರಲ್ಲಿ ನಿರ್ದೇಶಿಸಿರುವುದರಿಂದ, ಈ ನಿಯಮವು ಅರ್ವಾಚೀನ ಬ್ರಾಹ್ಮಣಯುಕ್ತಿಗೆ ಸರಿಬೀಳುವುದಿಲ್ಲವಾದುದರಿಂದ, ಈ ಸ್ಮೃತಿಯನ್ನು ಅಲಕ್ಷಿಸಿ ಸಮಯಕ್ಕೆ ಬೇಕಾದಂತೆ ಮಾತನಾಡುವುದಕ್ಕೂ ನಡೆದುಕೊಳ್ಳುವುದಕ್ಕೂ ಇಂಬುಕೊಡುವ ಮನುಸ್ಮೃತಿಯನ್ನೇ ದೊಡ್ಡ ಪ್ರಮಾಣವೆಂದು ಆಧರಿಸುತ್ತಾರೆ. ಈ ಮನುಸ್ಮೃತಿಯಲ್ಲಾದರೂ ಜಾತಿನಿಯಮದ ನಿರ್ಮಾಣವನ್ನು ಕುರಿತು ಏನು ಹೇಳಲಾಗಿದೆ ಎಂದು ನೋಡು

ವಾಗ "ಒಂದು ಚಿನ್ನದ ಮೊಟ್ಟೆಯಲ್ಲಿ ಹುಟ್ಟಿದ ಬ್ರಹ್ಮನು ಸಕಲ ಲೋಕಗಳಿಗೂ ತಂದೆಯಾಗಿದ್ದಾನೆ, ಈ ಲೋಕವು ಜನರಿಂದ ವಾಸಮಾಡಲ್ಪಡಬೇಕೆಂಬುದರಿಂದ ತನ್ನ ಮುಖದಿಂದ ಬ್ರಾಹ್ಮಣನನ್ನೂ, ಬಾಹುಗಳಿಂದ ಕ್ಷತ್ರಿಯನನ್ನೂ, ತೊಡೆಗಳಿಂದ ವೈಶ್ಯನನ್ನೂ, ಪಾದಗಳಿಂದ ಶೂದ್ರನನ್ನೂ ಹೊರಡಿಸಿದನು." ಎಂದು ಒಂದು ತಡವೆ (1.31); "ಅವನು ತನ್ನ ಸ್ವಂತ ಶರೀರವನ್ನೇ ಎರಡು ಭಾಗಗಳನ್ನಾಗಿ ವಿಭಾಗಿಸಿ ಒಂದರ್ಧ ಭಾಗದಲ್ಲಿ ಸ್ತ್ರೀಯಾದನು, ಆಕೆಯಲ್ಲಿ ವಿರಾಜನನ್ನು ಹುಟ್ಟಿಸಿದನು" ಎಂದು ಇನ್ನೊಂದು ತಡವೆ (1.32.33); ಹೀಗೆ ಅಕಾಂಡತಾಂಡವ ವಚನಗಳನ್ನು ನುಡಿದಿದ್ದಾನೆ. ಬ್ರಹ್ಮನು ಸಕಲ ಲೋಕಗಳಿಗೂ ತಂದೆ ಎಂದರೇನು? ಸಕಲ ಲೋಕಗಳೂ ಅವುಗಳಲ್ಲಿರುವ ಚರಾಚರ ವಸ್ತುಗಳೂ ಆತನಿಂದುಂಟಾದವುಗಳೆಂಬ ಅರ್ಥ ತಾನೆ ? ಹಾಗಾದಮೇಲೆ ಅಂಡವು ಚಿನ್ನವೂ ಆತನು ಹುಟ್ಟುವ ಮೊದಲೇ ಎಲ್ಲಿಂದ ಯಾರಿಂದ ಉಂಟಾದುವು ಎಂಬ ಪ್ರಶ್ನೆಗೆ ಉತ್ತರವೇನೋ ಗೊತ್ತಿಲ್ಲ. ಆ ವಿಷಯವು ಹೇಗೂ ಇರಲಿ–ಈ ಮನುಸ್ಮೃತಿಯಲ್ಲಾಗಲೀ ಬೇರೆ ಸ್ಮೃತಿಯಲ್ಲಾಗಲೀ ಜಾತಿ ನಿಯಮಕ್ಕಾಧಾರವಾದ ನಿಶ್ಚಯಾರ್ಥಕ ಪ್ರಮಾಣಗಳಿಲ್ಲ.

೮. ಪುರಾಣಗಳ ಮಾತಂತೂ ಏನು ಹೇಳೋಣ ? ಅದೊಂದು ದೊಡ್ಡ ಗೊಂದಲವೇ. ಪುರಾಣಗಳು ಒಂದೆರಡಲ್ಲ. ಹದಿನೆಂಟಿವೆ. ಅವುಗಳಲ್ಲಿ ಅತ್ಯಂತ ಶ್ರೇಷ್ಠವಾದುದು "ಮಹಾಭಾರತ" ಪುರಾಣವು ಇದು ಐದನೇ ವೇದವೆನ್ನಿಸುತ್ತದೆ. ಇವರ ಕರಾಮತ್ತು ಅಷ್ಟಿಷ್ಟೆಂದು ಹೇಳತೀರದು. "ಮಹಾಭಾರತ" ಎಂಬುದರ ಶಬ್ದವ್ಯುತ್ಪತ್ತಿ (Etymology)ಯನ್ನು ತಿಳಿದ ಮಾತ್ರದಲ್ಲಿಯೇ ಒಬ್ಬನು ಕೈವಲ್ಯ ಪದವಿಯನ್ನು ಹೊಂದುವನಂತೆ ! ಮಹಾಭಾರತದಲ್ಲಿ ಹೇಳೋಣಾಗದ ವಿಷಯವು ಬೇರೆ ಯಾವ ಗ್ರಂಥವಲ್ಲೂ ಹೇಳಿರಲಾರದೆಂದು ಅದನ್ನು ರಚಿಸಿದ ಕೃಷ್ಣದ್ವೈಪಾಯನ ವ್ಯಾಸರು ಹೇಳಿದ್ದಾರೆ. ಆದುದರಿಂದ ಪ್ರಥಮತಃ ಈ ಮಹಾಭಾರತದಲ್ಲಿ ಜಾತಿನಿಯಮವನ್ನು ಕುರಿತು ಏನು ಹೇಳೋಣಾಗಿದೆಯೆಂದು ನೋಡೋಣ. ಶ್ಯಾಂತಿಪರ್ವದಲ್ಲಿ ಭೃಗುಮಹರ್ಷಿಗಳು ಹೇಳಿರುವುದೇನೆಂದರೆ :

> "ಜಾತಿಗಳು ಎಂಬ ಭೇದವೇ ಇಲ್ಲ: ಏಕೆಂದರೆ ಪ್ರಥಮತಃ ಬ್ರಹ್ಮನಿಂದ ಈ ಲೋಕದಲ್ಲಿ ಪೂರ್ಣವಾಗಿ ಬ್ರಾಹ್ಮಣರೇ ರಚಿಸಲ್ಪಟ್ಟಿದ್ದರು; ಅನಂತರ ಅವರವರ ಕೃತಕರ್ಮಗಳ ದೆಸೆಯಿಂದ ಜಾತಿಗಳಾಗಿ ವಿಂಗಡಿಸಲ್ಪಟ್ಟರು;ಹೇಗೆಂದರೆ ಸ್ತ್ರೀ ಸಂಭೋಗನಿರತರಾದ, ಉರಿಗೋಪಿ ಮುಂಗೋಪಿಗಳಾದ, ಹಟ ಸಂಭೋಗಾಭಿಲಾಷಿಗಳಾದ, ತಮ್ಮ ಕರ್ತವ್ಯವನ್ನು ಬಿಟ್ಟು ಬಿಟ್ಟ, ಕೆಂಬಣ್ಣದ ಮೈಯ ದ್ವಿಜರು ಕ್ಷತ್ರಿಯರ ಗತಿಯಲ್ಲೂ, ಗೋವುಗಳಿಂದ ಉಪಜೀವನವನ್ನು ನಡೆಸುತ್ತಿದ್ದ, ಪೀತವರ್ಣದ ಮೈಯ ವ್ಯವಸಾಯದಿಂದ ಜೀವಿಸು

ಕ್ರಿಷ್ಟ. ತಮ್ಮ ಕರ್ತವ್ಯವನ್ನು ಬಿಟ್ಟುಬಿಟ್ಟ ದ್ವಿಜರು ವೈಶ್ಯರ ಗತಿಯಲ್ಲೂ, ಕೆಡುಕಿಗಳಾದ, ಪ್ರಾಣಿಹಿಂಸಕರಾದ, ಪರಧನಾಪೇಕ್ಷಿಗಳಾದ, ಸಿಕ್ಕಿದ ಕೆಲಸಮಾಡಿ ಜೀವಿಸುತ್ತಿದ್ದ, ಕಪ್ಪು ವರ್ಣದ ಮತ್ತು ನಿರ್ಮಲತೆಯನ್ನು ಬಿಟ್ಟುಬಿಟ್ಟ ದ್ವಿಜರು ಶೂದ್ರರ ಗತಿಯಲ್ಲೂ ಬಿದ್ದರು. ಈ ಕೃತ್ಯಗಳಿಂದ ವಿಂಗಡಿಸಲ್ಪಟ್ಟವರಾಗಿ ಬ್ರಾಹ್ಮಣರು ಬೇರೆ ಬೇರೆ ಜಾತಿಗಳಾಗಿ ವಿಭಾಗಿಸಲ್ಪಟ್ಟರು"

ಎಂದು ಹೇಳಿರುತ್ತಾರೆ. ಇದರಿಂದ ದೇವರು ನಿರ್ಮಿಸಿದ್ದೆಂಬುದು ಸರ್ವತ್ರ ಒಂದೇ ಜಾತಿ ಎಂಬಲ್ಲದೆ ಹೆಚ್ಚೆಂದು ಕಂಡುಬರುವುದಿಲ್ಲ. ಕಾಲಕ್ರಮದಲ್ಲಿ ಅವರವರ ಕೃತ್ಯಗಳ ದೆಸೆಯಿಂದ ಬ್ರಾಹ್ಮಣರೇ ಬೇರೆ ಬೇರೆ ಜಾತಿಗಳಾಗಿ (ಅಂದರೆ ನಾಲ್ಕು ವರ್ಣಗಳಾಗಿ) ವಿಂಗಡಿಸಲ್ಪಟ್ಟರೆಂದು ಆವಿಷ್ಕೃತವಾಗುತ್ತದೆ. ಆದರೆ ಏನು ಮಾಡೋಣ? ಇದೇ ಶಾಂತಿಪರ್ವದಲ್ಲಿ ಮತ್ತೊಂದು ಕಡೆಯಲ್ಲಿ "ಕೃಷ್ಣಸ್ವಾಮಿಯು ಪುನಃ ತನ್ನ ಮುಖದಿಂದ ನೂರು ಮಂದಿ ಅತ್ಯುತ್ತಮ ಬ್ರಾಹ್ಮಣರನ್ನೂ ಬಾಹುಗಳಿಂದ ನೂರು ಮಂದಿ ಕ್ಷತ್ರಿಯರನ್ನೂ ತೊಡೆಗಳಿಂದ ನೂರು ಮಂದಿ ವೈಶ್ಯರನ್ನೂ ಪಾದಗಳಿಂದ ನೂರು ಮಂದಿ ಶೂದ್ರರನ್ನೂ ನಿರ್ಮಿಸಿದನು" ಎಂದು ಹೇಳೋಣಾಗಿದೆ. ಪುನಃ ಅಂದರೇನು? ಮೊದಲೊಮ್ಮೆ ನಿರ್ಮಿಸಿದ್ದನೆ? ಇದ್ದರೆ ಯಾವಾಗ, ಯಾವ ವಿದ್ಯಮಾನಗಳಲ್ಲೆಂದು ಎಲ್ಲಿಯೂ ಹೇಳೋಣಾಗಲಿಲ್ಲ. ಅದು ಎಷ್ಟು ಮೊದಲು ಎಂದು ಹೇಳುವ ಪಕ್ಷದಲ್ಲೂ ದ್ವಾಪರಯುಗಕ್ಕಿಂತ ಮೊದಲಾಗಿರಕೂಡದು, ಏಕೆಂದರೆ ಕೃಷ್ಣಸ್ವಾಮಿಯು ಹುಟ್ಟಿದ್ದೇ ದ್ವಾಪರದಲ್ಲಷ್ಟೆ ? ಅತ್ಯುತ್ಕೃಷ್ಟವಾದುದೆಂಬ ಮಹಾಭಾರತದಲ್ಲೇ ಈ ರೀತಿಯಲ್ಲಿ ಪರಸ್ಪರ ವಿರೋಧವಾದ ಸಂಗತಿಗಳು ಕಂಡುಬರುತ್ತವೆ. ಬೇರೆ ಪುರಾಣಗಳಲ್ಲಿ ಬೇರೆ ಸಂಗತಿಗಳು ಹೇಳೋಣಾಗಿವೆ. ವಾಯು ಪುರಾಣದ ೮ನೇ ಅಧ್ಯಾಯ, ಶ್ರೀಮದ್ಭಾಗವತ ಪುರಾಣದ ೯ನೇ ಅಧ್ಯಾಯಗಳಲ್ಲಿ ಕೃತಯುಗದಲ್ಲಿ ಜಾತಿಭೇದಗಳೂ ವರ್ಣಭೇದಗಳೂ ಇದ್ದೇ ಇಲ್ಲ–ಒಂದೇ ವೇದ, ಒಂದೇ ದೇವರು, ಒಂದೇ ಅಗ್ನಿ, ಮತ್ತು ಒಂದೇ ಜಾತಿ–ಹೀಗಿತ್ತು; ತ್ರೇತಾಯುಗದ ಪ್ರಾರಂಭದಲ್ಲಿ ಪುರೂರವಾಸನಿಂದ ತ್ರಿವೇದಗಳು ಬಂದವು ಎಂದು ಹೇಳಿಯುನೆ. ಈ ಹೇಳಿಕೆಯು ಮೇಲಿನ ಎಲ್ಲಾ ಪ್ರಮಾಣಗಳಿಗೂ ವಿರೋಧವಾದುದೆಂದು ಪ್ರತ್ಯೇಕಿಸಿ ಹೇಳಬೇಕೆಂದಿಲ್ಲ. ಸದ್ಯ ಇಲ್ಲಿ ಮತ್ತೊಂದು ಪ್ರಶ್ನೆಯು ಹುಟ್ಟುತ್ತದೆ–ವೇದಗಳು ಸೃಷ್ಟಿಯಂತೆ ಅನಾದಿಯಾದವುಗಳು ಮತ್ತು ಅವುಗಳಲ್ಲಿ ಜಾತಿನಿಯಮಕ್ಕೆ ಮೂಲಾಧಾರ ಉಂಟೆಂದು ಪ್ರಸ್ತುತದ ಬ್ರಾಹ್ಮಣರು ಹೇಳುವುದು ನಿಜವಾದರೆ ಸಕಲ ಪುರಾಣಗಳನ್ನೂ ರಚಿಸಿದ, ವೇದಗಳನ್ನು ಶೋಧಿಸಿ ಕ್ರಮಪಡಿಸಿ ವೇದವ್ಯಾಸನೆಂಬ ನಾಮಾಭಿಧೇಯವನ್ನು ಪಡೆದ ವ್ಯಾಸಮುನಿಗಳು ತಮ್ಮ ಪುರಾಣಗಳಲ್ಲಿ ವೇದವಿರುದ್ಧವಾದ ಒಂದಕ್ಕೊಂದು ಸರಿಬೀಳದ ಸಂಗತಿಗಳನ್ನು ಹೇಳುವುದಕ್ಕೆ ಕಾರಣವೇನು? ಬ್ರಾಹ್ಮಣರ

ಸಾಧನೆಯು ನಿರಾಧಾರಿಯಾದುದೆಂಬದಕ್ಕೆ ಇನ್ನೂ ಹೆಚ್ಚಿನ ದೃಷ್ಟಾಂತಗಳು ಬೇಡ. ತ್ರೇತಾಯುಗದಲ್ಲಿ ಪುರೂರವಾಸನಿಂದ ತ್ರಿವೇದಗಳು ಬಂದುವು ಎಂಬುದರ ಅರ್ಥ ವೇನು? ಅದಕ್ಕೆ ಮುಂಚೆ ಕೃತಯುಗದಲ್ಲಿ ವೇದಗಳು ಇದ್ದೇ ಇಲ್ಲವೆ ? ಅಥವಾ ಒಂದೇ ಇತ್ತೇ ? ಇದ್ದರೆ ಅದು ಯಾವುದು ? ಎಂಬ ಪ್ರಶ್ನೆಗಳಿಗೆ ಉತ್ತರಗಳು ಸಿಕ್ಕುವುದಿಲ್ಲ. ಏವಂಚ, ಜಾತಿನಿಯಮಕ್ಕಾಧಾರಗಳಾದ ನಿಶ್ಚಯಾರ್ಥಗಳಾದ ಪ್ರಮಾಣಗಳು ಪುರಾಣಗಳಲ್ಲಾದರೂ ಇಲ್ಲ.

೯. ಶ್ರುತಿ, ಸ್ಮೃತಿ, ಪುರಾಣ ಪ್ರಮಾಣಗಳ ವಿಚಾರವು ಇನ್ನೂ ಹೆಚ್ಚಾಗಿ ಮಾಡ ಬೇಕೆಂದಿಲ್ಲ. ಈಗ ಲೋಕಾಚಾರವೆಂಬ ಯುಕ್ತಿಗಾದರೂ ಈ ಜಾತಿನಿಯಮವೆಂಬುದು ಸರಿಬೀಳುತ್ತದೋ ಏನೆಂದು ನೋಡೋಣ. ಪ್ರಥಮತಃ "ಲೋಕಾಚಾರ"ವೆಂದ ರೇನು? ಲೋಕದಲ್ಲಿ ಬಹುಜನರು ಆಚರಿಸುವ ಪದ್ಧತಿಯಲ್ಲವೆ? ಜಾತಿನಿಯಮವೆಂಬ ಪದ್ಧತಿಯು ಈ ಹಿಂದುಸ್ಥಾನದಲ್ಲೇ ವಿನಾ ಬೇರೆ ಎಲ್ಲಿಯೂ ಇಲ್ಲ; ಹಿಂದುಸ್ಥಾನದ ಜನಸಂಖ್ಯೆಯು ಇಡೀ ಪೃಥ್ವಿಯ ಜನಸಂಖ್ಯೆಯ ಕಾಲು ಪಾಲಷ್ಟಾದರೂ ಇಲ್ಲ; ಆದುದರಿಂದ ಜಾತಿನಿಯಮವು ಬಹು ಜನರು ಆಚರಿಸುವ ಪದ್ಧತಿ ಎಂದು ಹೇಳುವು ದಕ್ಕೆ ಸುತರಾಂ ಸಂದರ್ಭವಿಲ್ಲ. ಒಂದು ವೇಳೆ ಹಿಂದುಸ್ಥಾನದಲ್ಲಿ ಬಹು ಜನರು ಆಚರಿಸುವ ಪದ್ಧತಿ ಎನ್ನುವ ಪಕ್ಷದಲ್ಲೂ, ಒಂದು ಊರಿನಲ್ಲಿ ಒಂದು ನಿಯಮ ಅಥವಾ ಪದ್ಧತಿಯನ್ನು ಬಹುಜನರು ಆಚರಿಸುತ್ತಾರೆಂಬ ಒಂದೇ ಕಾರಣದಿಂದ ಅದು ಲೋಕಾಚಾರಕ್ಕೆ ಸರಿಯಾದುದೆಂದು ಹೇಳಕೂಡದು; ಏಕೆಂದರೆ ಅದರ ಗುಣ ದೋಷಾನುಭವಗಳನ್ನೂ ಅದು ಬಹು ಜನೋಪಕಾರಿಯಾದುದೋ ಏನೆಂಬ ವಿದ್ಯ ಮಾನವನ್ನೂ ವಿಚಾರಿಸಿ ತೀರ್ಮಾನಿಸುವುದು ಒಳ್ಳೆಯದು. ಏಕೆಂದರೆ ದೋಷರಹಿತ ವಾದ ಪದ್ಧತಿಯೇ ಲೋಕಾಚಾರವೆನ್ನಿಸುವುದಕ್ಕೆ ಯೋಗ್ಯವಾದುದು. ಒಂದು ಊರಿನಲ್ಲಿ ಬಹುಜನರು ಮದ್ಯಪಾನಿಗಳು, ಮಾಂಸಾಹಾರಿಗಳು ಅಥವಾ ದುಷ್ಟರು ಇರಬಹುದು; ಆಗ ನಾವು ಅವರಂತೇ ಇರುವುದು ವಿಹಿತವಾದ ಲೋಕಾಚಾರವಲ್ಲ. ಆದುದರಿಂದ ಈ ಜಾತಿನಿಯಮದ ಗುಣದೋಷಗಳನ್ನು ವಿಚಾರಿಸಿ ನೋಡೋಣ.

೧೦. ಜಾತಿನಿಯಮದಿಂದ ಕೆಳಗೆ ಬರೆವಷ್ಟು ಗುಣಗಳುಂಟಾಗಿವೆ ಎಂದು ಕೆಲವರ ಅಂಬೋಣವಿದೆ. ಯಾವವೆಂದರೆ :

1. **ವೃತ್ತಿಗಳ ವಿಲೇವಾರಿ :** ಅಂದರೆ ಇಂತಹ ಕೆಲಸ ಇಂತಹನೇ ಮಾಡುವುದು ಯೋಗ್ಯ, ಅನ್ಯನು ಮಾಡುವುದು ಅಯೋಗ್ಯ. ಉದಾಹರಣೆ : ವೈದಿಕ ಪುರೋಹಿತನ ಕೆಲಸವು ಬ್ರಾಹ್ಮಣನೇ ಮಾಡುವುದು ಯೋಗ್ಯ. ಕುಂಬಾರನು ಮಾಡಿದರೆ ಅದು ಸರಿಯಾಗದು.

2. **ಭದ್ರತೆ :** ಅಂದರೆ ಜಾತಿನಿಯಮವನ್ನನುಸರಿಸುವವನು ದೊಡ್ಡದಾದ ಒಂದು ಕುಟುಂಬದ ಯಜಮಾನನಂತೆ ಜಾತಿಯವರು ಮಾಡುವ ಕೆಲಸಗಳಲ್ಲಿ ಮತ್ತು ಅವರ

ಸುಖದುಃಖ ಅನುಭವಗಳಲ್ಲಿ ಲಕ್ಷ್ಯವಿಡುತ್ತಾನೆ. ಉದಾಹರಣೆ : ಒಂದು ದೇವಾಲಯದಲ್ಲಿ ಒಬ್ಬ ಮ್ಲೇಚ್ಛನು ಪ್ರವೇಶಿಸುತ್ತಾನೆಂದಾಗ ಆತಂಕಿಸುವುದಕ್ಕೆ ಜಾತಿಯವರೆಲ್ಲರೂ ಹೆಚ್ಚಾಗಿ ಮುಖ್ಯಸ್ಥರು ಪೇಚಾಡುತ್ತಾರೆ.

3. **ಶುಚಿ :** ದೇಹ, ಪಾತ್ರ ಪದಾರ್ಥಗಳನ್ನು ಯಾವಾಗಲೂ ತಿಕ್ಕಿ ತೊಳೆದು ಹಸನುಪಡಿಸುವುದು.
4. **ಮಾನಮರ್ಯಾದೆ :** ದೊರೆತನದವರಿಗೂ ಗುರುಹಿರಿಯರಿಗೂ ಬುದ್ಧಿವಂತರಿಗೂ ತೋರಿಸುವ ಭಕ್ತಿ ವಿಶ್ವಾಸ.

೫. **ಧರ್ಮಾನುವರ್ತನೆಯ ಮೇಲೆ ಅಂಕೆ :** ಉದಾಹರಣೆ: ಶೋಭನ ಪ್ರಸ್ಥವೆ ಮುಂತಾದ ಆಚಾರಗಳು. ಈ ಐದು ಗುಣಗಳಿವೆಯೆಂದು ಕೆಲವರು ಹೇಳುತ್ತಾರೆ.

ಆದರೆ ಜಾತಿನಿಯಮವು ಪ್ರಚಾರದಲ್ಲಿಲ್ಲದ ಊರುಗಳ ನಿವಾಸಿಗರಲ್ಲಿ ಇಂತಹ ಗುಣಗಳು ಉಂಟೋ ಇಲ್ಲವೋ ಎಂಬುದನ್ನು ಸಹ ಆಲೋಚಿಸಬೇಕು. ಜಾತಿನಿಯಮವು ರಾಜ್ಯದಾಡಳಿತೆಗೆ ಉಪಯುಕ್ತವಾದುದರಿಂದ ಇದೂ ಒಂದು ಗುಣವೇ ಎಂದೂ ಈ ನಿಯಮಕ್ಕೆ ಇನ್ನಷ್ಟು ಉತ್ತೇಜನವನ್ನು ಕೊಡುವುದು ಯೋಗ್ಯವೆಂದೂ ಸರ್ ಲೆಪೆಲ್ ಗ್ರಿಫಿನ್ ದೊರೆಗಳವರು ಹೇಳುತ್ತಾರೆ. ಆದರೆ ಇದು ಬರೇ ಸ್ವಾರ್ಥದ ಮಾತು. ಅದು ಹೇಗಾದರೂ ಮೇಲೆ ಹೇಳಿದ ಗುಣಗಳನ್ನು ಕುರಿತು ಆಲೋಚಿಸುವಾಗ ಕೆಳಗೆ ಬರೆದ ದೋಷಗಳನ್ನು ಸಹ ಕುರಿತು ಆಲೋಚಿಸಬೇಕು. ದೋಷಗಳು ಯಾವವೆಂದರೆ:

1. **ದೇಹಚೈತನ್ಯ ಕ್ಷೀಣತೆ, ಅಕಾಲ ಮರಣ :** ಬಾಲವಿವಾಹವು ಜಾತಿನಿಯಮದಿಂದುಂಟಾದುದು. ಚಿಕ್ಕಂದಿನಿಂದಲೇ ಹುಟ್ಟಿಸಿದ ಮಕ್ಕಳೆಂದರೆ ಎಳೆಬೀಜದಿಂದುಂಟಾದ ಫಲದಂತೆಯೇ ಅಲ್ಪಾಯುಷಿಗಳು. ಒಂದುವೇಳೆ ಕೆಲವು ದಿನ ಜೀವಿಸಿದ್ದರೂ ಚೈತನ್ಯಹೀನರಾಗಿ ಬೇಗನೆ ಸಾಯುವರು—ಹೀಗೆಂದು ಅನೇಕ ಪಾಶ್ಚಿಮಾತ್ಯ ಪಂಡಿತರೂ ಹಿಂದುಸ್ಥಾನದ ಕವಿರಾಜರೂ ವೈದ್ಯರೂ ಹೇಳುತ್ತಾರೆ. ಅಷ್ಟೇಕೆ? ನಾವೇ ಒಂದು ಸ್ಥಳದಲ್ಲಿ ಒಂದು ಎಳೇ ಬೀಜ. ಒಂದು ಬೆಳೆದ ಬೀಜ ಹೀಗೆ ಎರಡು ಬೀಜಗಳನ್ನು ಬಿತ್ತಿ ನೋಡೋಣ—ಮೇಲಿನ ಮಾತಿನ ದೃಷ್ಟಾಂತವು ಚೆನ್ನಾಗಿ ಕಂಡು ಬರುವುದು. ಮಕ್ಕಳ ರೋಗಗಳ ವಿಷಯದಲ್ಲಿ ಒಳ್ಳೆಯ ಒಂದು ಪುಸ್ತಕವನ್ನು ಬರೆದ ವೆಸ್ಟ್ ಎಂಬ ಒಬ್ಬ ಇಂಗ್ಲಿಷ್ ವೈದ್ಯರು "ಬಾಲಕರ ರೋಗ ಮತ್ತು ಅಕಾಲ ಮರಣದ ಕಾರಣಗಳಲ್ಲಿ, ಹತ್ತಿರದ ಸಂಬಂಧಿಕರೊಳಗೆ ಆಗುವ ವಿವಾಹವೇ ಪ್ರಥಮದ ಕಾರಣ" ವೆಂದು ಹೇಳುತ್ತಾರೆ. ಇಂತಹ ವಿವಾಹಗಳು ಜಾತಿನಿಯಮದ ಫಲಗಳೇ. "ಮದ್ರಾಸಿನಲ್ಲಿರುವ ಮುದಲಿಯಾರ್ ಜಾತಿಯವರಲ್ಲಿ ಸುಮಾರು ಐವತ್ತು ಒಳಜಾತಿಗಳಿವೆ; ಒಂದು ಒಳಜಾತಿಯವರು ಮತ್ತೊಂದು ಒಳಜಾತಿಯ

ರಲ್ಲಿ ಮದುವೆಯಾಗಲು ಕೂಡದು. ನಾಯಿಡು, ಪಿಳ್ಳೆ, ರೆಡ್ಡಿ ಎಂಬ ಒಳಜಾತಿಗಳಲ್ಲಿ ಇವೇ ಪ್ರತಿಬಂಧಕವಿದೆ. ಈ ರೀತಿಯಲ್ಲಿ ಬಹುಚಿಕ್ಕ ಕುಟುಂಬಗಳಲ್ಲಿ, ಬಹು ಸಮೀಪದ ಸಂಬಂಧಿಕರಲ್ಲಿ ಉಂಟಾಗುವ ವಿವಾಹಗಳಿಂದ ಹುಟ್ಟುವ ಶಾರೀರಿಕ ಸಾಮಾಜಿಕ ಕೇಡುಗಳು ಎಷ್ಟೆಂದು ವಿವರಿಸುವ ಆವಶ್ಯವಿಲ್ಲ" ಎಂದು ಪ್ರೊಫೆಸರ್ ರಂಗನಾಥ ಮುದಲಿಯಾರ್‌ರವರು ಹೇಳಿದ್ದಾರೆ. ಇನ್ನೂ ಅನೇಕ ಉದಾಹರಣೆ ಗಳನ್ನೂ ಪಂಡಿತರ ಅಭಿಪ್ರಾಯಗಳನ್ನೂ ಎತ್ತಿತೋರಿಸಬಹುದು.

2. **ಸ್ವದೇಶ ದಾರಿದ್ರ್ಯ;** ಇದಕ್ಕೆ ಮುಖ್ಯವಾಗಿ ಮೂರು ಕಾರಣಗಳಿವೆ: ೧ನೇದು, ಇಂಡಿಯ ದೇಶವನ್ನು ಬಿಟ್ಟು ವಿದ್ಯೆ ವ್ಯಾಪಾರಕ್ಕೋಸ್ಕರ ಪರರಾಜ್ಯಗಳಿಗೆ ಹೋಗು ವಲ್ಲಿರುವ ಪ್ರತಿಬಂಧಕ. ಸಾಂಪ್ರತಕಾಲದಲ್ಲಿ ಇಂಗ್ಲಂಡಿನಷ್ಟು ಪ್ರಖ್ಯಾತಿಪಟ್ಟ ವಿದ್ಯೆ ಸ್ಥಳವು ಬೇರೆ ಇಲ್ಲ. ಆದರೆ ಅಲ್ಲಿಗೆ ಹೋದರೆ "ಜಾತಿ ಹೋಯಿತು"! ಏಕೆಂದರೆ ಜಾತಿನಿಯಮ ಪ್ರಕಾರ ಇಂಡಿಯದ ಹೊರಗಿರುವವರೆಲ್ಲರೂ "ಮ್ಲೇಚ್ಛರು"!

೨ನೇದು: ವೃತ್ತಿಗಳು ಜಾತಿಪರಂಪರಾಗತವಾದವುಗಳೆಂಬ ಪ್ರತಿಬಂಧಕ: ಹೇಗೆಂದರೆ ಮೃತ್ಪಾತ್ರಗಳನ್ನು ಕುಂಬಾರನೇ ಮಾಡಬೇಕು, ಬ್ರಾಹ್ಮಣನು ಮಾಡಿದರೆ "ಜಾತಿ ಹೋಯಿತು". ಕುಂಬಾರನಿಲ್ಲದ ಊರಲ್ಲಿ ಪಾತ್ರಗಳಿಲ್ಲದೆ ತೊಡಕುಬಿದ್ದರೂ ಚಿಂತಿಲ್ಲ!

೩ನೇದು. ಅನೇಕ ವೃತ್ತಿಗಳು ನೀಚವೃತ್ತಿಗಳೆಂಬ ಪ್ರತಿಬಂಧಕ : ಜಾತಿನಿಯಮ ವೆಂಬ ಪೀಕಲಾಟವನ್ನು ಹುಟ್ಟಿಸಿದ ಮನುವಿನ ಧರ್ಮಶಾಸ್ತ್ರ (ಅ III. IV)ಪ್ರಕಾರ ವೈದ್ಯ. ಗಾಯನ, ನಾಟಕಪಾತ್ರತನ, ಬಿಲ್ಲುಬಾಣಗಳನ್ನು ಮಾಡೋಣ, ಶಿಲ್ಪವಿದ್ಯೆ, ಹಡಗಗಳನ್ನು ಕಟ್ಟೋಣ, ಬಡಿಗೆಯ ವೃತ್ತಿ, ಕಮ್ಮಾರನ ವೃತ್ತಿ. ಅಕ್ಕಸಾಲೆಯ ವೃತ್ತಿ, ಧೋಬಿಯ ವೃತ್ತಿ, ಪಂಚಾಳವೃತ್ತಿ ಇವುಗಳು "ನೀಚವೃತ್ತಿಗಳು"! ಈ ಪುಣ್ಯಾತ್ಮನಿಗೆ ಲೋಕದಲ್ಲಿ ಇನ್ನೂ ಬೇರೆ ವೃತ್ತಿಗಳೂ ಉಂಟೆಂದು ಗೊತ್ತಿರುತ್ತಿದ್ದರೆ ಅವುಗಳೂ ಹೀನವೃತ್ತಿಗಳೆಂದು ನಿಯಮ ಮಾಡುತ್ತಿದ್ದನೋ ಏನೋ! ಅದಿರಲಿ. ಈ ವೃತ್ತಿಗಳು ಹೀನವೃತ್ತಿಗಳೆಂದೂ ಸ್ಥಾನ ಭ್ರಷ್ಟಕಾರಕಗಳೆಂದೂ ವಿಧಿಸಿದ್ದು ಎಂತಹ ವಿದ್ಯಮಾನಗಳಲ್ಲೆಂದು ಕೇಳುತ್ತೀರಾ? ಬಡಿಗೆಯವನು ಬ್ರಾಹ್ಮಣರ ಹೋಮಕ್ಕೆ ಬೇಕಾದ ಸೌದೆಯನ್ನು ಒದಗಿಸಿ ಕೊಡಲಿಲ್ಲ! ಗುಡಿಗಾರನು ಬ್ರಾಹ್ಮಣರ ಬಣ್ಣದ ಕೆಲಸ ಸರಿಯಾಗಿ ಮಾಡಲಿಲ್ಲ! ಅಕ್ಕಸಾಲೆಯು ಬ್ರಾಹ್ಮಣರು ಆಭರಣ ಕ್ಕೋಸ್ಕರ ಕೊಟ್ಟ ಚಿನ್ನದಿಂದ ಕೆಲವನ್ನು ಕದ್ದಿಬಿಟ್ಟನು! ಎಂತಹ ದುರಾತ್ಮರಪ್ಪಾ!

ಅದುವರೆಗಿನ ಶಿಕ್ಷೆಯು ಅಪರಾಧಿಗಳಿಗೆ ಮಾತ್ರವಲ್ಲ. ಯಾವ ಪಾಪಪುಣ್ಯವನ್ನಾದರೂ ತಿಳಿಯದ ನಮಗೂ ಬಂತು!–ಅವರ ವೃತ್ತಿಗಳೂ ಉಳಿದ ಬೇರೆ ವೃತ್ತಿಗಳೂ (ಇದೇ ತರದ ಬೇರೆ ಬೇರೆ ಕಾರಣಗಳ ಮೇಲೆ) ಸ್ಥಾನಭ್ರಷ್ಟಕಾರಕಗಳೆಂದು ನಿಯಮವಾಯಿತು ! ಇದರ ಫಲ ಪರ್ಯವಸಾನವೇನೆಂದು ಪ್ರತ್ಯೇಕಿಸಿ ಹೇಳಬೇಕೆ ? ಈ ಹೊತ್ತು ನಮಗೆ ಒಂದು ಗುಂಡುಸೂಜಿಯು ಬೇಕಾದರೆ ಅದು ವಿಲಾಯತಿಯಿಂದ ಬಂದೇ ಆಗಬೇಕು ! ನಾನು ಅಥವಾ ಈ ಸಭಾಸದರಲ್ಲಿ ಯಾರಾದರೂ ಅದನ್ನು ಮಾಡಿದರೆ "ಜಾತಿ ಹೋಯಿತು"! ಹೀಗಾದ ಮೇಲೆ ನಮ್ಮ ದೇಶದ ಉನ್ನತಿಯ ಆಶೆಯು ಏಕೆ ?

3. **ಬುದ್ಧಿವಿಕಾಸತೆಗೆ ವಿಘ್ನ** : ಹೇಗೆಂದರೆ, ಬ್ರಾಹ್ಮಣನಲ್ಲದೆ ಮತ್ತ್ಯಾರೂ ವೇದಗಳನ್ನು ಓದಲೂ ಧರ್ಮೋಪದೇಶವನ್ನು ಮಾಡಲೂ ಕೂಡದೆಂದು ಪ್ರತಿಬಂಧಕವಿದೆ. ಶೂದ್ರನು--ಅಹ! ಬಡ ಪ್ರಾಣಿಯೆ!–ಮಸಣ ಸಮಾನನಂತೆ! ಅವನು ವೇದಗಳನ್ನು ಓದಲು ಎಂತೂ ಕೂಡದಷ್ಟೆ-ಓದಿದ್ದನ್ನು ಕೇಳಲು ಸಹ ಕೂಡದು. "ಅವನು ವೇದಮಂತ್ರವನ್ನು ಕಿವಿಯಿಂದ ಕೇಳಿದರೆ ಅವನ ಕಿವಿಯಲ್ಲಿ ಕರಗಿಸಿದ ಸೀಸ ಮತ್ತು ಅರಗನ್ನು ತುಂಬಿಸಬೇಕು; ಅದನ್ನು ಉಚ್ಚರಿಸಿದರೆ ಅವನ ನಾಲಿಗೆಯನ್ನು ಸೀಳಬೇಕು; ಅದನ್ನು ಹೃದ್ಗತಮಾಡಿಕೊಂಡರೆ ಅವನ ಶರೀರವನ್ನು ಸಿಗಿಯಬೇಕು" ಎಂದು ಸ್ಮೃತಿಯಲ್ಲಿ ನಿರ್ದೇಶಿಸಿರುವುದಾಗಿ ಶ್ರೀಮಂತ್ ಶಂಕರಾಚಾರ್ಯರು ರಚಿಸಿದ ವೇದಾಂತ ಸೂತ್ರ(S.B.E.Vol. XXXIV.P.228)ದಲ್ಲಿ ಹೇಳಿದ್ದಾರೆ. ವೇದವೇ ವೇದಾಂಗಗಳಲ್ಲಿ ವ್ಯಾಕರಣ, ಕವಿತ್ವ, ಗಣಿತಶಾಸ್ತ್ರ ಮತ್ತು ಅನೇಕ ವಿದ್ಯಾಶಾಸ್ತ್ರ (Literature) ವಿಜ್ಞಾನಶಾಸ್ತ್ರ (Science)ಗಳಿವೆ. ಇವುಗಳನ್ನು ಬ್ರಾಹ್ಮಣರಲ್ಲದೆ ಮತ್ತ್ಯಾರೂ ಓದಕೂಡದು, ಕೇಳಕೂಡದು, ಎಂಬುದರ ಅರ್ಥವೇನು ? ಬ್ರಾಹ್ಮಣರಲ್ಲದವರೆಲ್ಲರೂ ಅಜ್ಞಾನಾಂಧಕಾರದಲ್ಲೇ ಬಿದ್ದು ಹೊರಳಾಡಬೇಕೆಂಬುದೇ ತಾನೆ? ಈ ಪ್ರತಿಬಂಧಕವು ಬಹುಜನರ ವಿದ್ಯಾಭಿವೃದ್ಧಿಗೆ ವಿಘ್ನಕರಿಸುವುದೆಂದು ಲೋಕದ ಖಾನೇಶುಮಾರಿಯ ಪ್ರಕಾರ ಬ್ರಾಹ್ಮಣರ ಸಂಖ್ಯೆಯು ಹೆಚ್ಚೋ ಇತರ ಎಲ್ಲಾ ಜಾತಿಯವರ ಸಂಖ್ಯೆಯು ಹೆಚ್ಚೋ ಎಂಬುದನ್ನು ನೋಡಿ ಸುಲಭದಲ್ಲಿ ನಿಶ್ಚಯಿಸಬಹುದು. ಈ ಪ್ರತಿಬಂಧಕದಿಂದ ಬ್ರಾಹ್ಮಣರಿಗೆ ಮಾತ್ರವೇಯಾದರೂ ಪ್ರಯೋಜನ ಉಂಟಾಯಿತೆ ? ಇಲ್ಲ-ವೆಕೆಂದರೆ. ವೇದಪಠಣ ಧರ್ಮೋಪದೇಶಗಳನ್ನು ತಾವಲ್ಲದೆ ಮತ್ತ್ಯಾರೂ ಮಾಡಕೂಡದೆಂಬ ಮನಸ್ಸಿನ ನಿಶ್ಚಯತ್ವದಿಂದ ಅಹಂಕಾರವೂ ತಾತ್ಸಾರವೂ ಹುಟ್ಟಿ ಬ್ರಾಹ್ಮಣರು ಈ ವೃತ್ತಿಗಳನ್ನು ಮಾಡದೆ ಬಿಡುತ್ತಾ ಬಂದರು. ಬೇರೆಯವರು ಮಾಡುವುದಕ್ಕೆ ಈ ಪ್ರತಿಬಂಧಕವಿತ್ತು. ಹಾಗೂ ಹೀಗೂ ವಿದ್ಯಾಭಿವೃದ್ಧಿಗೆ ಕೇಡು ಬಂತು. ಹೀಗಾಗಿ ಈಗ ಅನೇಕಾನೇಕ ಬ್ರಾಹ್ಮಣರ ಸ್ಥಿತಿಯು ಹೇಗಿದೆ ? ಮೊಹರಮ್ಮಿನಲ್ಲಿ ಬರುವ ಬ್ರಾಹ್ಮಣರ ಸ್ಥಿತಿಯಂತೆಯೋ ಸೈ!

4. **ಸಾಮಾಜಿಕ ಸುಧಾರಣೆಗೆ ಕೇಡು :** ಈಗ ಇಂಡಿಯದಲ್ಲಿ ಮುಖ್ಯವಾದ ಸಾಮಾಜಿಕ ಅರಿಷ್ಟಗಳ್ಯಾವವು ? ಸ್ತ್ರೀಶಿಕ್ಷೆಯ ಕಡೆಗೆ ತಾತ್ಸಾರ, ಬಾಲವಿವಾಹ, ವಿಧವೆಯರ ದುರ್ಗತಿ, ಮದುವೆ ಮತ್ತು ಜಾತಿ ಸಂಬಂಧವಾದ ಹಬ್ಬ ಉತ್ಸವಗಳಿಗೋಸ್ಕರ ದ್ರವ್ಯವ್ಯಯ ಇವುಗಳು. ಈ ಪ್ರತಿ ಒಂದು ಅರಿಷ್ಟಕ್ಕೂ ಜಾತಿನಿಯಮವೇ ಮೂಲ ಕಾರಣವು. ಸ್ತ್ರೀಯು ನಮಗೆ ಸರಿಸಮಾನಳಾದ ಮನುಷ್ಯ ಪ್ರಾಣಿ ಎಂದು ತಿಳಿದುಕೊಳ್ಳುವವರು ಹಿಂದುಗಳಲ್ಲಿ-ಮುಖ್ಯವಾಗಿ ಬ್ರಾಹ್ಮಣರಲ್ಲಿ-ಬಹಳ ಕಡಮೆ. ಸ್ತ್ರೀಯು ಜನ್ಮಜನ್ಮಾಂತರಗಳಲ್ಲೂ ಪುರುಷನ ದಾಸಿಯಾಗಿದ್ದು ಅಜ್ಞಾನಾಂಧಕಾರದಲ್ಲಿ ಬಿದ್ದು ಸಾಯಬೇಕೆಂದೇ ಮನುಕೃತ ನಿಯಮಗಳ ತಾತ್ಪರ್ಯವು. (ಈ ವಿಷಯದ ಸ್ವಲ್ಪ ವಿವರಗಳು "ಲಾಡುಪ್ರಿಯಾಚಾರ್ಯ"§ವೆಂಬ ಪುಸ್ತಕದಲ್ಲಿ ಬರೆದು ಇವೆ.) ಅನೇಕರು ಒಬ್ಬ ಹುಡುಗಿಯು ಸುಶಿಕ್ಷಿತಳಾಗಿ, ಪ್ರಾಯಭರಿತಳಾಗಿ. ಚೈತನ್ಯ ಸಂಪನ್ನೆಯಾಗಿ, ವಿವಾಹಕ್ಕೆ ಯೋಗ್ಯಳಾಗಿ, ತನಗೆ ಬೇಕಾದ ವರನು ಇಂತಹನೇ ಎಂದು ತಿಳಿಯುವಷ್ಟು ಜ್ಞಾನಶಕ್ತಿಯು ಹುಟ್ಟುವ ಮುಂಚೆಯೇ ಮನುಕೃತ ನಿಯಮಗಳಿಗೂ ಗೃಹ್ಯಸೂತ್ರಗಳೇ ಮುಂತಾದ ಶಾಸ್ತ್ರಪ್ರಮಾಣಗಳಿಗೂ ವಿರೋಧವಾಗಿ ೮-೧೦ ವರುಷಗಳಿಗೆ ಮುಂಚೆಯೇ ಆಕೆಯನ್ನು ವಿವಾಹ ಮಾಡಿಕೊಟ್ಟು ಆ ಬಳಿಕ ಸ್ವಭಾವವಶಾತ್ ಬರುವ ಕಷ್ಟಗಳನ್ನು ಅನುಭವಿಸುತ್ತಾರೆ ಅಥವಾ ಮುಚ್ಚುಮರೆ ಮಾಡುತ್ತಾರೆ. ವಿಧವೆಯರ ಮಾತಂತೂ ಬಿಡಿ-ಅವರ ಕರ್ಮಗಳನ್ನು ಹೇಳಿ ಅಥವಾ ಬರೆದು ಪೂರೈಸಕೂಡದು. ಒಬ್ಬ ವಿಧವೆಯು ಸಾಯುವ ವರೆಗೂ ಬ್ರಹ್ಮಚರ್ಯದಲ್ಲೂ ಪಾರಮಾರ್ಥಿಕ ಜ್ಞಾನಸಂಪಾದನೆಯಲ್ಲೂ ಇರಬೇಕಾದುದು ಯೋಗ್ಯವಾದ ಧರ್ಮವೇ ಆಗಿದ್ದರೂ ವಿಶೇಷವಾದ ಕೆಲವು ವಿದ್ಯಮಾನಗಳಲ್ಲಿ ಆಕೆಯ ಪುನರ್ವಿವಾಹವು ಧರ್ಮವೇ ಎಂದು ಪೂರ್ವಕಾಲದ ಋಷಿಗಳೂ ಈಗಿನ ಅನೇಕ ಪಂಡಿತರೂ ನಿಶ್ಚಯಿಸಿದ್ದಾರೆ. ಆದರೂ ಈಗಿನ ದಿನಗಳಲ್ಲಿ ಪ್ರಾಯಭರಿತಳಾದ ಹುಡುಗಿಯನ್ನಾಗಲೀ ಬಾಲವಿಧವೆಯನ್ನಾಗಲೀ ವಿವಾಹ ಮಾಡಿದರೆ "ಜಾತಿ ಹೋಗುತ್ತದೆ"! ಮದುವೆ, ಹಬ್ಬ, ಆಚಾರಗಳಿಗೋಸ್ಕರ ಮಾಡಲ್ಪಡುವ ಭಯಂಕರವಾದ ದ್ರವ್ಯವ್ಯಯದ ವಿಷಯವನ್ನು ವಿವರಿಸಿದರೆ ಉಪನ್ಯಾಸವು ಬಹಳ ಉದ್ದ ಬೆಳೆಯುವುದು—ಕೈಯಲ್ಲಿ ಹಣವಿಲ್ಲದಿದ್ದರೆ ಸಾಲ ಕಡವಾದರೂ ಮಾಡಿ, ಅದಕ್ಕೂ ಅನುಕೂಲವಿಲ್ಲದಿದ್ದರೆ ಊರೂರು ಸುತ್ತಿ ಬೇಡಿ ತಂದಾದರೂ ಖರ್ಚು ಮಾಡಲೇ ಬೇಕು ಈ ಕೊಡಗಿನಲ್ಲಿ "ಹುತ್ರಿ" ಎಂಬ ಹಬ್ಬದ ಸಮಯದಲ್ಲಿ ಎಷ್ಟು ಜನರು ಚಿನ್ನಾಭರಣಗಳನ್ನು ಅಡವು ಮಾಡಿ ಸಾಲ ಪಡೆದು ಕಡೆಗೆ ಅವುಗಳನ್ನು ಬಿಡಿಸಿಕೊಳ್ಳುವುದಕ್ಕೆ ಯತ್ನವಿಲ್ಲದೆ ಕಳೆದುಕೊಳ್ಳುತ್ತಾರೆ.

5. **ಸ್ವಾತಂತ್ರ್ಯ ಕ್ಷಯ :** ನಾಲ್ಕು ಊರು ತಿರುಗಿ ಜೀವನೋಪಾಯವೋ ಪ್ರಪಂಚದ ಅನುಭವವೋ ಪಡೆಯೋಣವೆಂದರೆ ನಮ್ಮ ಸ್ವಾತಂತ್ರ್ಯವೇನಿದೆ ? ಯಾವ

§ ಲಾಡುಪ್ರಿಯಾಚಾರ್ಯ : ದಿ. ಗುಲ್ವಾಡಿ ವೆಂಕಟರಾಯರ ಇನ್ನೊಂದು ಕೃತಿ.

ಕೆಲಸಕ್ಕೋಸ್ಕರವಾದರೂ ವಿಲಾಯತಿಗೆ ಅಥವಾ ಅಮೇರಿಕಕ್ಕೆ ಹೋದರೆ "ಜಾತಿ ಹೋಯಿತು"! ಬೊಂಬೆ ಹೈಕೋರ್ಟ್ ಜಡ್ಜರಾಗಿರುವ ಶ್ರೀಯುತ ಮಾನ್ಯವರ ನಾರಾಯಣ ಗಣೇಶ ಚಂದಾವರಕರರು ನಮ್ಮ ಉಪಕಾರಕ್ಕೋಸ್ಕರ ವಿಲಾಯತಿಗೆ ಹೋದುದರಿಂದ ಅವರ ಜಾತಿಯು ಹೋಗಿ ಈಗ ಅವರನ್ನು ಸಾರಸ್ವತ ಬ್ರಾಹ್ಮಣರು "ಜಾತಿಭ್ರಷ್ಟ"ನೆಂದು ಹೇಳುತ್ತಾರೆ! ಸಾರಸ್ವತ ಬ್ರಾಹ್ಮಣರಿಗೆ ಇದು ಶ್ರೇಯಸ್ಕರವಾದ ವಿಷಯವೆ ? ಇರಲಿ–ನೀರಡಿಸಿ ಕಂಠಗತ ಪ್ರಾಣವಾದಾಗಲೂ ಮತ್ತೊಂದು ಜಾತಿಯವನು ಮುಟ್ಟಿದ ನೀರನ್ನು ಕುಡಿದರೆ "ಜಾತಿ ಹೋಯಿತು"! ಹೊಗೆ ಬಂಡಿ, ಹೊಗೆ ಹಡಗದಲ್ಲಿ ವಿದೇಶ ಪ್ರಯಾಣ ಮಾಡಲು ಯತ್ನವಿಲ್ಲ-ಜಾತಿ ಬೇಕಾದರೆ ಅನ್ನ ನೀರು ಬಿಟ್ಟು ಪ್ರಯಾಣ ಮಾಡಬೇಕು; ಜೀವದಾಶೆಗೆ ಹೋದರೆ ಜಾತಿ ಕಳೆದುಕೊಳ್ಳಬೇಕು. ಅನೇಕಾನೇಕ ವಿಷಯಗಳಲ್ಲಿ ನಮ್ಮ ಸ್ವಬುದ್ಧಿಯನ್ನು ಉಪಯೋಗಿಸುವುದಕ್ಕೆ ಜಾತಿ ನಿಯಮವು ಬಿಡುವುದಿಲ್ಲ. ಈ ನಿಯಮ ಪ್ರಕಾರ ಒಬ್ಬನು ಒಂದು ಕೃತ್ಯವನ್ನು ಮಾಡಿದರೆ ಮತ್ತೊಬ್ಬನು ಸಹ ಆ ಕೃತ್ಯವನ್ನು ಮಾಡಲೇಬೇಕು. ಆ ಕೃತ್ಯವು ಪಾಪದ್ದಾದರೂ, ಪುಣ್ಯದ್ದಾದರೂ ನಾಚಿಕೆಗೇಡಿನದ್ದಾದರೂ ಏನಾದರೂ ಚಿಂತಿಲ್ಲ-ಒಬ್ಬನು ಹೋಳಿ ಹಬ್ಬದ ಸಮಯದಲ್ಲಿ ಭಂಡು ಸೂಳೆಯರ ಸಂಗಡ ಬೀದಿ ಬೀದಿ ಸುತ್ತಿಕೊಂಡು ಭಂಡುಪದಗಳನ್ನು ಹಾಡಿದರೆ ಮತ್ತೊಬ್ಬನೂ ಹಾಗೆಯೇ ಮಾಡುತ್ತಾನೆ. ಮಾಡದಿದ್ದರೆ ಹೇಗೆ "ಜಾತಿಗ್ರಹಸ್ಥ" ನೆನ್ನಿಸುವನು ?

6. **ದೇಶೋನ್ನತಿಗೂ ಜನಾಂಗವೃದ್ಧಿಗೂ ಕೇಡು :** ಪೂರ್ವಕಾಲದಲ್ಲಿ ರೋಮಾಯರಲ್ಲಿ "ಭೇದಿಸಿ ಜಯಿಸು" ಎಂಬ ಒಂದು ನಾಣ್ಣುಡಿ ಇತ್ತು. ಬ್ರಾಹ್ಮಣರು ಇದಕ್ಕನುಸಾರವಾಗಿ ಪ್ರವರ್ತಿಸಿದಂತೆ ತೋರುತ್ತದೆ. ಜನವರ್ಗವನ್ನು ಸಾವಿರಾರು ಜಾತಿಗಳನ್ನಾಗಿ ಖಂಡವಿಖಂಡ ಮಾಡಿ ತಾವೇ ಶ್ರೇಷ್ಠರೆನ್ನಿಸಿದರು. ಇದರಿಂದೇನು ಕೇಡು ಉಂಟಾಗುವುದೆಂದು ನೋಡಲೇ ಇಲ್ಲ. ಆಯಾ ಜಾತಿಯವರು ತಮ್ಮ ತಮ್ಮ ಪಾಡಿನಲ್ಲೇ ಇರುವುದಾಯಿತು. ಒಂದೇ ಜನಾಂಗವೆಂಬುದು ಇಲ್ಲದಂತಾಯಿತು. ಅನ್ಯೋನ್ಯ ಸ್ನೇಹ, ಪ್ರೇಮ, ವಾತ್ಸಲ್ಯ ಇವುಗಳು ನಿಂತುಹೋದುವು. ಪರಾಯಿ ದೇಶದವರಿಗೆ ಇಂಬು ಸಿಕ್ಕಿತು. ಅವರು ದೌಡು ಮಾಡಿಬಂದು ನಮ್ಮನ್ನು ಪೀಡಿಸುವಾಗ ನಾವು ಸಹಾಯಹೀನರಾಗಿ ಸುಲಭದಲ್ಲಿ ಸೋತುಹೋದೆವು. ದೀರ್ಘಾಲಾಪವೇಕೆ? ಕಟ್ಟಕಡೆಯಲ್ಲಿ ನಮ್ಮ ಕುತ್ತಿಗೆಯ ಮೇಲೆ ಪರಾಯ ಜನರ ನೊಗವು ಬಂದು ಬಿದ್ದಿತು.

7. **ವೇದಶಾಸ್ತ್ರ ಪುರಾಣಗಳ ಮೂಲಾರ್ಥ ವಿನಾಶ :** ಜಾತಿ ನಿಯಮ ಪ್ರಕಾರ ಬ್ರಾಹ್ಮಣರು ತಾವೇ ಶ್ರೇಷ್ಠರೆಂದು ಹೇಳಿಸಿಕೊಂಡು ವಿದ್ಯಾಶಾಸ್ತ್ರ ಜ್ಞಾನಶಾಸ್ತ್ರ

ಗಳೆಲ್ಲವೂ ಇವರ ಪಾಲಿಗಾಗಿ ಹೋದ ಬಳಿಕ, "ವಿಪ್ರವಾಕ್ಯವೇ ದೇವವಾಕ್ಯ" ವೆಂದೆಣಿಸಬೇಕೆಂಬ ಉದ್ದೇಶದಿಂದ ವೇದಶಾಸ್ತ್ರ ಪುರಾಣ ಗ್ರಂಥಗಳಲ್ಲಿ ಮೂಲಾರ್ಥಗಳನ್ನು ಕೆಡಿಸಿ ಸ್ವಕಪೋಲ ಕಲ್ಪಿತಾರ್ಥಗಳನ್ನು ಸೇರಿಸಿ, ಅನೇಕ ವಿದ್ಯಮಾನಗಳಲ್ಲಿ ಕೇವಲ ಹೊಸ ಸಂಗತಿಗಳನ್ನು ನಿರ್ಮಿಸಿ ಅನೇಕ ಅನರ್ಥಗಳನ್ನುಂಟುಮಾಡಿದರು. ಅವುಗಳಲ್ಲಿ ಒಂದನ್ನು ಉದಾಹರಣೆಗೋಸ್ಕರ ಇಲ್ಲಿ ಹೇಳುತ್ತೇನೆ: ಋಗ್ವೇದದಲ್ಲಿ (X 18 8) ಅಂತ್ಯೇಷ್ಟಿ ಸಂಸ್ಕಾರದ ಸಮಯದಲ್ಲಿ ಸ್ಮಶಾನಕ್ಕೆ ಹೋಗುವ ವಿಷಯವನ್ನು ಹೇಳುವ ಮಂತ್ರದಲ್ಲಿ ಸ್ತ್ರೀಯು ಅಗ್ರಭಾಗದಲ್ಲಿರಬೇಕೆಂದು ಅರ್ಥವನ್ನು ಕೊಡುವ "ಅಗ್ರೆ" ಎಂಬ ಶಬ್ದವನ್ನು ತೆಗೆದು ಅದಕ್ಕೆ ಬದಲಾಗಿ "ಅಗ್ನೆ" ಎಂಬ ಶಬ್ದವನ್ನು ಸೇರಿಸಿ, ವೇದದ ಯಾವ ಮಂತ್ರದಲ್ಲಾದರೂ ನಿರ್ದೇಶಿಸದಿದ್ದ "ಸಹಗಮನ"ವೆಂಬ ಪದ್ಧತಿಯನ್ನುಂಟುಮಾಡಿ ಲೆಕ್ಕವಿಲ್ಲದ ಬಡಸ್ತ್ರೀಯರು ಗಂಡಂದಿರ ಮೃತಶರೀರಗಳ ಸಂಗಡ ಸಹವಹನವಾಗಿ ದುರ್ಮರಣ ಪಡೆಯುವುದಾಯಿತು! ಇನ್ನು ಬೇರೆ ಗ್ರಂಥಗಳಲ್ಲಿ ತಮ್ಮ ಮನಸ್ಸಿಗೆ ಬಂದ ಹಾಗೆ ಸುಳ್ಳು ಸಂಗತಿಗಳನ್ನು ಸೇರಿಸಿ, ಅವುಗಳೇ ಪ್ರಮಾಣಗಳೆಂದು ಪ್ರತಿಪಾದಿಸಿ ಮಕ್ಕಳನ್ನು "ಗಂಗಾದೇವಿಗೆ" ಅರ್ಪಣ ಮಾಡೋಣವೆಂದು ಹೊಳೆಯಲ್ಲಿ ಹಾಕಿ ಕೊಂದುಬಿಡೋಣ, ಕಡಿದು ಕೊಂದು ದೇವರಿಗೆ ಬಲಿಯಾಗಿ ಕೊಡೋಣವೆ ಮುಂತಾದ ಅನೇಕ ಅನರ್ಥಗಳನ್ನುಂಟುಮಾಡಿದರು. ಮೃಗಪಕ್ಷಿಗಳ ನಾಶದ ಮಾತಂತೂ ಅತೀ ಭಯಾನಕವಾದುದು ಇವರ ಜಾತಿನಿಯಮಾನುಗುಣವಾದ ಶ್ರೇಷ್ಠತ್ವದ ದೆಸೆಯಿಂದ ದೇವರುಗಳು ಮಾಂಸಭಕ್ಷಕರೂ ಮದ್ಯಪಾನಿಗಳೂ ಆಗಿಹೋದರು! ಇವರು ಉಂಟುಮಾಡಿದ ಕೆಲವು ದೇವಾರಾಧನೆಯ ಕ್ರಮಗಳಿವೆ; ಅವುಗಳನ್ನು ಕುರಿತು ಸ್ವಲ್ಪ ಮಟ್ಟಿಗಾದರೂ ಬರೆಯುವುದು ಲಜ್ಜಾಸ್ಪದವಾದ ವಿಷಯವು. ಶಕ್ತಿಯಾರಾಧನೆಯ ಕ್ರಮಗಳನ್ನು ನೀವುಗಳು ತಿಳಿದಿರಬಹುದು. ಹಾಸ್ಯೋತ್ಪಾದಕಗಳಾದ ಕ್ರಮಗಳಂತೂ ಲೆಕ್ಕವಿಲ್ಲದಷ್ಟಿವೆ; ದಿಗಂಬರ ಸನ್ಯಾಸಿಗಳು, ಲಂಗೋಟಿ ಸನ್ಯಾಸಿಗಳು, ಜಿಂಕೆಯ ಚರ್ಮ, ಹುಲಿಯ ಚರ್ಮಗಳನ್ನು ಹೊದ್ದುಕೊಳ್ಳುವ ಸನ್ಯಾಸಿಗಳು, ಮೌನ ಹಿಡಿದ ಸನ್ಯಾಸಿಗಳು, ಉಪವಾಸಿ ಸನ್ಯಾಸಿಗಳು, ಮಧ್ಯಾಹ್ನ ಕಾಲದಲ್ಲಿ ಉರಿ ಮಳಲಿನಲ್ಲಿ ಮಲಗಿಕೊಳ್ಳುವ ಸನ್ಯಾಸಿಗಳು, ಕಣ್ಣಿ ಕಪ್ಪಟಗಳಂತೆ ಮರಗಳಿಗೆ ತೂಗಾಡುವ ಸನ್ಯಾಸಿಗಳು, ಒಂದೇ ಕಾಲಿನಿಂದ ನಡೆಯುವ ಸನ್ಯಾಸಿಗಳು, ಸಾಯುವತನಕ ಒಂದೇ ಕೈಯನ್ನು ಎತ್ತಿಹಿಡಿಯುವ ಸನ್ಯಾಸಿಗಳು, ಖಡಾವು ಸನ್ಯಾಸಿಗಳು (ಅಂದರೆ ಖಡಾವುಗಳಿಗೆ ಕಬ್ಬಿಣದ ಆಣಿಗಳನ್ನು ಮೊನೆಗಳು ಮೇಲಕ್ಕಾಗಿ ಹೊಡೆದು ಅವುಗಳಲ್ಲಿ ನಡೆಯುವವರು), ಹೊರಳಾಡುವ ಸನ್ಯಾಸಿಗಳು, ಭೂಮಿಯನ್ನು ಅಳತೆ ಮಾಡುವ ಸನ್ಯಾಸಿಗಳು (ಅಂದರೆ ಮಾರ್ಗದಲ್ಲಿ ಬಿಸಾಡಿದ ಆಹಾರ ವಸ್ತುಗಳನ್ನು ಹೆಕ್ಕಿತಿನ್ನುವವರು), ಕಾಪಾಲಿಕ ಸನ್ಯಾಸಿಗಳು (ಅಂದರೆ ಮನುಷ್ಯನ ತಲೆಬುರುಡೆಯಲ್ಲಿ ಅನ್ನ ತಿನ್ನುವವರು), ಅಘೋರಿ ಸನ್ಯಾಸಿಗಳು (ಅಂದರೆ ಮನುಷ್ಯ ಶವದ ಮಾಸ ತಿನ್ನುವವರು). ಹರಿ ಓಂ! ರಾಂ ರಾಂ!

ಬಂಬಂ! ಭುಂ ಭುಂ! ಕಾಳಿಮಾ ! ಗಂಗಾಮಾ ! ಎಂದು ಕೂಗುವ ಸನ್ಯಾಸಿಗಳು, ಇನ್ನೂ ಅನೇಕ ಅವಲಕ್ಷಣ ರೂಪಗಳು ಈ ಆರಾಧನೆಯ ಕ್ರಮಗಳಿಂದ ಹುಟ್ಟಿದವುಗಳಾಗಿರುತ್ತವೆ. ವೈಚಿತ್ರ್ಯವೇನೆಂದರೆ, ಈ ಜಾತಿ ನಿಯಮದ ದೆಸೆಯಿಂದ ವಿದ್ಯಾಶಾಸ್ತ್ರದ ಮೂಲಗ್ರಂಥಗಳು; ಹಾಳಾಗಿಹೋದವು. ಹೊಸ ಗ್ರಂಥಗಳೂ ಕ್ರಮಗಳೂ ನಿರ್ಮಿತವಾದುವು; ಹೀಗಾಗಿ ಮೂಲ ರಚಕರು ಹೇಳಿದ ವಿಷಯಗಳ್ಯಾವುವು ಸ್ವಕಪೋಲಕಲ್ಪಿತ ವಿಷಯಗಳ್ಯಾವುವು ಎಂದು ವಿಂಗಡಿಸುವುದು ವಿಶ್ವಪ್ರಯತ್ನವಾಗಿದೆ.

8. ಹೊಟ್ಟೆಬಾಕತನ, ಸುಲಿಗೆ, ಮೋಸ, ಇವುಗಳ ವೃದ್ಧಿ : ಜಾತಿ ನಿಯಮಾನುಸಾರವಾಗಿ ಬ್ರಾಹ್ಮಣರು ಮಾಡಿದ ಕ್ರಮಗಳಲ್ಲಿ ಭಯಂಕರವಾದ ಕೆಲವುಗಳನ್ನು ಕಾಶಿ, ಗಯಾ, ಹರಿದ್ವಾರ, ತಿರುಪತಿ, ಜಗನ್ನಾಥ, ರಾಮೇಶ್ವರ– ಈ ಮುಂತಾದ ಯಾತ್ರೆಯ ಸ್ಥಳಗಳಲ್ಲಿ ಕಂಡು ತಿಳಿಯಬಹುದು. ನಾಲ್ಕಾಣೆ, ಎಂಟಾಣೆ ದಕ್ಷಿಣೆಗೋಸ್ಕರ, ಅನ್ನಕೋಶವು ಹರಿದುಹೋಗುವುದೆಂಬ ಭಯವಾದರೂ ಇಲ್ಲದೆ, ದೊಡ್ಡ ದೊಡ್ಡ ಲಡ್ಡುಗಳನ್ನು ನುಂಗುವವರು, ಪಿತೃಗಳಿಗೆ ದುರ್ಗತಿಯುಂಟಾಗುವುದೆಂದು ಭಯಪಡಿಸಿ ಹಣ ಸುಲಿಗೆ ಮಾಡುವವರು, ತಾನು ಮಾಡಿದ ಪುಣ್ಯವನ್ನು ದಾನ ಮಾಡಿ ಕೊಡುತ್ತೇನೆಂದು ನಂಬಿಸಿ ಹಣ ಪಡೆಯುವವರು ಅನೇಕರಿದ್ದಾರೆ.

ಅವರ ಅಕೃತ್ಯಗಳನ್ನು ಹೇಳಿ ಪೂರೈಸಕೂಡದು.

9. ಪಾಳ್ಯದಲ್ಲಿ ಕಚ್ಚಾಟ : ಮೇಲೆ (೬ನೇ ಪ್ರಕರಣದಲ್ಲಿ) ಹೇಳಿದಂತೆ, ನಾವು ಹೀನದೆಸೆಯನ್ನು ಸೇರಿದನಂತರವಾದರೂ ಈ ಬ್ರಾಹ್ಮಣರ ಪೀಕಲಾಟ ನಿಂತೀತೆ ? ಇಲ್ಲ. ತಮ್ಮ ತಮ್ಮೊಳಗೇನೇ ಒಳಜಾತಿಗಳೆಂಬ ಭೇದಗಳನ್ನುಂಟುಮಾಡಿಕೊಂಡರು. ಈಗಲೂ ಜಗಳಾಡುತ್ತಲೇ ಇದ್ದಾರೆ: ಶೈವ ಬ್ರಾಹ್ಮಣನನ್ನು ಕಂಡರೆ ವೈಷ್ಣವ ಬ್ರಾಹ್ಮಣನಿಗೆ ಆವೇಶ ಬರುತ್ತದೆ. ವೈಷ್ಣವ ಬ್ರಾಹ್ಮಣನನ್ನು ಕಂಡರೆ ಶೈವ ಬ್ರಾಹ್ಮಣನಿಗೆ ಆವೇಶ ಬರುತ್ತದೆ. ಒಬ್ಬನು ಶಿವವಿರೋಧಿಯು, ಇನ್ನೊಬ್ಬನು ವಿಷ್ಣುವಿರೋಧಿಯು. ಒಬ್ಬನು ಉದ್ದ ನಾಮದವನು, ಇನ್ನೊಬ್ಬನು ಅಡ್ಡ ನಾಮದವನು. ಒಬ್ಬನು 'ಶಿವನಾಭಿ' ಎಂಬ ಶಬ್ದವನ್ನು ಉಚ್ಚರಿಸನು; ಏಕೆಂದರೆ ಅದರಲ್ಲಿ 'ಶಿವ' ಎಂಬ ಶಬ್ದವು ಉಚ್ಚಾರಕ್ಕೆ ಬರುತ್ತದೆ. ಇನ್ನೊಬ್ಬನು 'ಹರಿವಾಣ' ಎಂಬ ಶಬ್ದವನ್ನು ಉಚ್ಚರಿಸನು; ಏಕೆಂದರೆ ಅದರಲ್ಲಿ 'ಹರಿ' (ಅಂದರೆ ವಿಷ್ಣು) ಎಂಬ ಶಬ್ದವು ಉಚ್ಚಾರಕ್ಕೆ ಬರುತ್ತದೆ. ಹೆಚ್ಚು ಮಾತೇಕೆ?–ಶೈವ ಬ್ರಾಹ್ಮಣನು ಪಾತ್ರವನ್ನು ತಿಕ್ಕುವಾಗ ಅಡ್ಡದಲ್ಲೇ ತಿಕ್ಕುವನು;ವೈಷ್ಣವ ಬ್ರಾಹ್ಮಣನು ಉದ್ದದಲ್ಲೇ ತಿಕ್ಕುವನು. ಏಕೆಂದರೆ ಶೈವನು ಉದ್ದದಲ್ಲಿ ವೈಷ್ಣವನು ಅಡ್ಡದಲ್ಲಿ ತಿಕ್ಕಿದರೆ ಶೈವನು ವೈಷ್ಣವನೆಂದೂ ವೈಷ್ಣವನು ಶೈವನೆಂದೂ ಅರ್ಥವಾಗಬಹುದಂತೆ! ಈ ಶೈವ ವೈಷ್ಣವ ಬ್ರಾಹ್ಮಣರ ಹಾಸ್ಯೋತ್ಪಾದಕ ಕೃತ್ಯಗಳನ್ನು ಶಿವಕಂಚಿ, ವಿಷ್ಣುಕಂಚಿ ಎಂಬ ಸ್ಥಳಗಳಲ್ಲಿ ಚೆನ್ನಾಗಿ

ನೋಡಿ ತಿಳಿಯಬಹುದು. ಇವರ ಸ್ವಮತ ಸ್ಥಾಪನೆ, ಪ್ರತಿಮತೋತ್ಪಾಟನೆಯ ವ್ಯವಹಾರಗಳಲ್ಲಿ ಇವರು ನಂಬುವ ದೇವರುಗಳನ್ನು ಸಹ ತುಚ್ಛವಾಗಿ ನಿಂದಿಸುತ್ತಾರೆ......ಲ್ಲಿ ಕೆಲವು ಕಾಲದ ಹಿಂದೆ ಹಜೂರ ಕಚೇರಿಯಲ್ಲಿ ಹೆಡ್ ಶಿರಸ್ತೇದಾರ, ನಾಯಬ ಶಿರಸ್ತೇದಾರ ಎಂಬ ಎರಡು ಮಂದಿ ಉದ್ಯೋಗಸ್ಥರು ಇದ್ದರು. ಅವರಲ್ಲಿ ಒಬ್ಬನು ಶುದ್ಧ ವೈಷ್ಣವ ಬ್ರಾಹ್ಮಣನು, ಇನ್ನೊಬ್ಬನು ಶುದ್ಧ ಶೈವ ಬ್ರಾಹ್ಮಣನು. ಇಬ್ಬರೂ ಮನಸ್ಸಿನಲ್ಲಿ ಪರಸ್ಪರ ವಿರೋಧಿಗಳು. ಒಂದಾನೊಂದು ದಿನ ನಾಯಬ ಶಿರಸ್ತೇದಾರನು ಉದ್ಯೋಗ ಪ್ರಯುಕ್ತವಾದ ಒಂದು ಕಾರ್ಯಕ್ಕೋಸ್ಕರ ಹೆಡ್ ಶಿರಸ್ತೇದಾರನಲ್ಲಿಗೆ ಬಂದು ಇಬ್ಬರೂ ಮಾತನಾಡುತ್ತಿರುವಾಗ ಹೆಡ್ ಶಿರಸ್ತೆದಾರನ ಮಗುವು ಅಲ್ಲಿ ಸಮೀಪದಲ್ಲೇ ಮಲವಿಸರ್ಜನೆ ಮಾಡಿತು. ಆಗ ಹೆಡ್ ಶಿರಸ್ತೇದಾರನು "ಯಾರೋ ಅಲ್ಲಿ?" ಎಂದು ಸೇವಕನನ್ನು ಕರೆದು "ಅದನ್ನು ತೆಗೆದು ಬಿಸಾಡಿ ಅಲ್ಲಿಷ್ಟು ರುದ್ರ§ ದೇವರ ಪ್ರಸಾದ‡ವನ್ನು ಹಾಕಿ ಶುದ್ಧಮಾಡಿಬಿಡು" ಎಂದಪ್ಪಣೆ ಕೊಡೋಣವೇ. ಈ ಮಾತನ್ನು ಶೈವನಾದ ನಾಯಬ ಶಿರಸ್ತೇದಾರನು ಕೇಳಿ ಕೋಪವಶನಾಗಿ "ಅಯ್ಯೋ ಸ್ವಾಮಿ!-ಅದನ್ನೇಕೆ ಹಾಳುಮಾಡುವುದು? ಈ ಹೊತ್ತು ಭೂವರಾಹ‡ ದೇವರ ನೈವೇದ್ಯಕ್ಕೆ ಉಪಯೋಗಿಸಬಹುದಷ್ಟೇ?" ಎಂದು ಹೇಳಿದನು. ಆ ಬಳಿಕ ಉಭಯ ಕಡೆ ಯಿಂದಲೂ ಇನ್ನು ಕೆಲವು ಕೆಟ್ಟ ಮಾತುಗಳು ಬಂದು ನಾಯಬ ಶಿರಸ್ತೇದಾರನು ದುಮ್ಮು ಝಾಡಿಸಿಕೊಂಡು ಮನೆಗೆ ನಡೆದನು. ಇಂತಹ ಪ್ರಸಂಗಗಳು ಇನ್ನೂ ಅನೇಕ ಕಡೆಗಳಲ್ಲಿ ನಡೆಯುತ್ತವೆ. ಬ್ರಾಹ್ಮಣರಿಗೆ ಜಾತಿಗಳು ಮಾತ್ರ ಸಾಕಾಗದೆ ಒಂದೊಂದು ಜಾತಿಯಲ್ಲಿ ಅನೇಕ ಒಳಜಾತಿಗಳು ಸಹ ಬೇಕಾದುವು! ಇದರಿಂದ ಪ್ರತಿಯೊಂದು ಜಾತಿಯಲ್ಲೂ ಪರಸ್ಪರ ಸ್ನೇಹವೂ ಪ್ರೇಮವೂ ಇಲ್ಲವೆ ಇಲ್ಲದಂತಾಯಿತು.

10. **ಪರರ ಕಷ್ಟಕಾಲದಲ್ಲಿ ಹೃದಯದ ಕಠಿಣತೆ:** ಆತಿಥ್ಯ ಸತ್ಕಾರಗಳು ಸಾಧಾರಣವಾಗಿ ಹಿಂದುಗಳಲ್ಲಿ ಸ್ವಭಾವಗುಣಗಳೇ ಸರಿ. ಆದರೆ ಅವುಗಳಲ್ಲಿ ಜಾತಿ ನಿಯಮವು ಸ್ವಾರ್ಥವೂ ಸೇರಿ ಹಾಳಾಗಿ ಹೋಗಿವೆ. ಅನೇಕ ಕಡೆಗಳಲ್ಲಿ ದಿನನಿತ್ಯವೂ ಸಹಸ್ರ ಭೋಜನಗಳು ನಡೆಯುತ್ತವೆ. ಧರ್ಮಛತ್ರಗಳೂ ಊಟ ಪುರ್ಯಗಳೂ ಇವೆ. ಆದರೆ ಅವುಗಳ ಉಪಯೋಗವು ಹೆಚ್ಚುಕಡಿಮೆ ಪೂರ್ಣವಾಗಿ ಬ್ರಾಹ್ಮಣರಿಗೆ ಮಾತ್ರವೇ ಸಿಕ್ಕುತ್ತವೆ. ಇತರರೂ ಮನುಷ್ಯ ಪ್ರಾಣಿಗಳೆಂಬ ವಿಚಾರವಿಲ್ಲ. ಒಬ್ಬ ಬ್ರಾಹ್ಮಣನ ಮನೆಗೆ ಬ್ರಾಹ್ಮಣನಲ್ಲದ ಒಬ್ಬ ಅತಿಥಿಯು ಬಂದರೆ ಊಟ ಸಿಕ್ಕುವುದು ಬಹು ದುರ್ಲಭವೇ. ಬ್ರಾಹ್ಮಣರು ಇರುವ ಗಲ್ಲಿಯಲ್ಲಿ ಬ್ರಾಹ್ಮಣನಲ್ಲದ ಗತಿಗೋತ್ರವಿಲ್ಲದ ಇತರನ್ಯಾರಾದರೂ ರೋಗದಿಂದ ಅಥವಾ ಬೇರೆ ಕಾರಣದಿಂದ ಸಾಯುವುದಕ್ಕೆ ಬಿದ್ದರೆ ಒಬ್ಬನಾದರೂ ಅವನ ಹತ್ತಿರಕ್ಕೆ ಹೋಗನು, ಒಂದು ಬೊಟ್ಟು ನೀರನ್ನಾದರೂ ಕೊಡನು. ಏಕೆಂದರೆ ಅವನ ಸಮೀಪಕ್ಕೆ ಹೋಗುವುದರಿಂದ ಅಥವಾ

---

§ ಬೂದಿ

‡ ಹಂದಿಯು ಹೇಲನ್ನು ತಿನ್ನುವುದು ಎಲ್ಲರೂ ಬಲ್ಲರು. ಭೂವರಾಹ ದೇವರು ಹೆಡ್ ಶಿರಸ್ತೇದಾರನ ಕುಲದೇವರು.

ಅವನನ್ನು ಮುಟ್ಟುವುದರಿಂದ ಭ್ರಷ್ಟತ್ವ ಉಂಟಾಗುತ್ತದೆ! ಅವನು ಸತ್ತಮೇಲೆ ಶವವನ್ನು ತೆಗೆದರಂತೂ ಜಾತಿಯೇ ಹೋಗುತ್ತದೆ! ಅನಾಥ ಪ್ರೇತಸಂಸ್ಕಾರದಿಂದ ಕೋಟಿಯಜ್ಞಗಳ ಫಲವು ಲಭಿಸುತ್ತದೆ ಎಂಬ ಮಾತು ತಮ್ಮ ತಮ್ಮೊಳಗೇ ಸೈ -ಇಂತಹ ಸಂಗತಿಗಳು ಬ್ರಾಹ್ಮಣರಲ್ಲಿ ಮಾತ್ರವಲ್ಲ-ಜಾತಿನಿಯಮವನ್ನನುಸರಿಸುವ ಎಲ್ಲರಲ್ಲೂ ಸಂಭವಿಸುತ್ತವೆ. ಈ ದುಷ್ಟತನಕ್ಕೆ ಜಾತಿನಿಯಮವೇ ಕಾರಣವು. ಕಿರಾನಿ ಕುರಾನಿ ಮತಗಳವರಲ್ಲೂ ಇಂತಹ ಸಂಗತಿಗಳು ಸಂಭವಿಸುವುದಿಲ್ಲವೇ? ಎಂದು ನೀವು ಕೇಳುವಿರಿ. ಆದರೆ ಒಬ್ಬ ಕ್ರಿಸ್ತೀಯ ಅಥವಾ ಮುಸಲ್ಮಾನನು ಅನ್ಯಮತದವನ ಶವವನ್ನು ತೆಗೆಯುವುದರಿಂದ ಅವನ ಜಾತಿ ಹೋದೀತೆಂಬ ಪೀಕಲಾಟವು ಹುಟ್ಟದು. ಇತ್ತಲಾಗಿ ಮಂಗಳೂರಲ್ಲಿ ಪ್ಲೇಗ್ ವ್ಯಾಧಿಯಿಂದ ಅನೇಕರು ಸತ್ತಾಗ ಕ್ರಿಸ್ತೀಯರೂ ಮುಸಲ್ಮಾನರೂ ಅನೇಕರ ಶವಗಳನ್ನು-ಬ್ರಾಹ್ಮಣರೆನ್ನಿಸಿದವರ ಶವಗಳನ್ನು—ಸಹಾ ತೆಗೆದು ಗತಿ ಕಾಣಿಸಿದರು. ಜಾತಿ ಹೋಯಿತೆಂಬ ಪೀಕಲಾಟವು ಹುಟ್ಟಲಿಲ್ಲ. ಅವರು ಇಂತಹ ಕಷ್ಟಕಾಲದಲ್ಲಿ ಸಹಾಯಕ್ಕೆ ಬಾರದೆ ಇರುವುದಾದರೆ ಅದು ಜಾತಿ ನಿಯಮದ್ದೆಸೆಯಿಂದಲ್ಲ, ಬೇರೆ ಕಾರಣಗಳಿಂದಲೇ ಸೈ.

11. **ಜಾತಿನಿಯಮವು ಮನುಷ್ಯ ಪ್ರಾಣಿಗಳು ಮೃಗಗಳಿಗಿಂತ ಹೀನ ಪ್ರಾಣಿಗಳೆಂದು ತೋರಿಸುತ್ತದೆ:** ತ್ರಾವಣಕೂರಿನಲ್ಲಿ ಒಂದು ಜಾತಿಯವರಿದ್ದಾರೆ, ಅವರು ಒಬ್ಬ ಬ್ರಾಹ್ಮಣನಿದ್ದ ಸ್ಥಳದಿಂದ ೭೪ 'ಕದಮ್' ದೂರವಿರಬೇಕು. ಮಲೆಬಾರಿನಲ್ಲಿ ನಾಯಾಡಿ ಎಂಬ ಒಂದು ಜಾತಿಯವರಿದ್ದಾರೆ. ಅವರು ಬ್ರಾಹ್ಮಣರಿದ್ದ ಪೇಟೆಯಲ್ಲಿ ಕಾಲಿಡಲೇ ಕೂಡದು-ಗುಂಡ್ಡಗಳಲ್ಲೇ ತಿರುಗಾಡಬೇಕು. ಹತ್ತಿರ ಬಂದರೆ ಭ್ರಷ್ಟತ್ವ ಉಂಟಾಗುತ್ತದೆ. ಆದರೆ ಒಂದು ನಾಯಿ ಅಥವಾ ಕತ್ತೆಯು ಎಷ್ಟು ಸಮೀಪಿಸಿ ಬಂದರೂ ಮೈ ಮುಟ್ಟಿದರೂ ಚಿಂತೆ ಇಲ್ಲ! ನಾಯಾಡಿಯು ಈ ಮೃಗಗಳಿಗೂ ಕಡೆ.

12. **ಜಾತಿನಿಯಮವು ಅಹಂಕಾರವನ್ನೂ ಗರ್ವವನ್ನೂ ಹುಟ್ಟಿಸುತ್ತದೆ:** ಅಹಂಕಾರಿಗಳೂ ಸ್ವಾಭಿಮಾನಿಗಳೂ ಎಲ್ಲಾ ಊರುಗಳಲ್ಲೂ ಇರಬಹುದು. ಆದರೆ ಬ್ರಾಹ್ಮಣರ ಅಹಂಕಾರ ಮತ್ತು ಸ್ವಾಭಿಮಾನಗಳ ವಿಧವು ಬೇರೆ-ಇವುಗಳ ಕಾರಣವು ಜಾತಿನಿಯಮ ಪ್ರಕಾರ ತಾವೇ ಶ್ರೇಷ್ಠರೆಂಬುದೇ. ತಾವೇ ವೇದವನ್ನೋದುವುದಕ್ಕೆ ಯೋಗ್ಯರು, ಮತ್ತ್ಯಾರೂ ಅಲ್ಲ! ಬ್ರಾಹ್ಮಣನ ಸಿಟ್ಟೆಂದರೆ ಮಹಾದ್ಭುತವಾದುದು! ದೇವತೆಗಳನ್ನು ಸಹ ಶಪಿಸಿ, ಹೆದರಿಸಿ, ಹೊಡೆದು, ತುಳಿದು ಹಾಕಿದರು! ಒಬ್ಬನು (ಬೃಹಸ್ಪತಿ) ಚಂದ್ರನನ್ನು ಮಸಿಕೆಂಡನ್ನಾಗಿ ಮಾಡಿದನು! ಇನ್ನೊಬ್ಬನು(ವಿಶ್ವಕರ್ಮ) ಸೂರ್ಯನನ್ನು ಹನ್ನೆರಡು ತುಂಡುಗಳನ್ನಾಗಿ ಮಾಡಿದನು! ಮತ್ತೊಬ್ಬನು (ಅಗಸ್ತ್ಯ) ಇಡೀ ಸಾಗರವನ್ನೇ ಕುಡಿದು ಆ ನೀರನ್ನು ಮೂತ್ರವಾಗಿ ಹೊರಗೆ ಬಿಟ್ಟನು!

ಈ ಅಪ್ಪಿ ಕಥೆಗಳ ಸಾಮ್ಯಾರ್ಥಗಳು ಬೇರೆಯೇ ಇದ್ದರೂ ಜಾತಿಗೆ ಪೇಚಾಡುವ ಬ್ರಾಹ್ಮಣರು ತಾವೇ ಪೂಜ್ಯರೆಂದು ಅಹಂಕರಿಸುವುದಕ್ಕೆ ಆಧಾರವಾಗಿ ಇವುಗಳನ್ನು ಉಪಯೋಗಿಸಿಕೊಂಡರು.

13. **ಜಾತಿನಿಯಮವು ಸದ್ಧಾರ್ಮಿಕ ಚಿತ್ತವೃತ್ತಿಯನ್ನಡಗಿಸಿ ಡಂಭಾಚಾರಕ್ಕೆ ಉತ್ತೇಜನ ಕೊಡುತ್ತದೆ** : ಹೇಗೆಂದರೆ ನಿಯಮ ವಿರುದ್ಧವಾದ ಅನ್ನಪಾನ ವಿವಾಹ. ಈ ತಪ್ಪಿತಗಳಿಗೆ ಜಾತಿ ಬಹಿಷ್ಕಾರದ ಶಿಕ್ಷೆ ಇದೆ. ಆದರೆ ರಂಡೀಬಾಜಿ, ಸುಳ್ಳು ಪ್ರಮಾಣ, ಕಳವು, ನರಹತ್ಯ ಇಂತಹ ತಪ್ಪಿತಗಳನ್ನು ಮಾಡುವುದರಿಂದ ಜಾತಿಗೆ ಯಾವ ಕೇಡೂ ಇಲ್ಲ.

೧೧. ಜಾತಿನಿಯಮದಿಂದ ಉಂಟಾದ ದೋಷಗಳು ಇನ್ನೂ ಲೆಕ್ಕವಿಲ್ಲದಷ್ಟಿವೆ. ಅವುಗಳನ್ನು ವಿವರಿಸಿ ಕೊನೆಮುಟ್ಟಿಸುವುದು ಬೇಗದಲ್ಲಿ ಆಗುವ ಕೆಲಸವಲ್ಲ. ಬ್ರಾಹ್ಮಣರು ಜಾತಿನಿಯಮವೆಂಬ ಪಾಶದಿಂದ ಬಂಧಿಸಿದ್ದು ಮನುಷ್ಯ ಮೃಗ ಪಕ್ಷಿಗಳನ್ನು ಮಾತ್ರವಲ್ಲ–ಅವರೇ ನಂಬುವ ದೇವರುಗಳನ್ನು ಸಹ ಹಾಗೆ ಬಂಧಿಸಿದ್ದಾರೆ. ನರಸಿಂಹ ಶಾಸ್ತ್ರಿಯು ಒಂದು ವರುಷದಿಂದ ತೊಳೆಯದಿದ್ದ ಕೊಳಕು ಕೋಮಣವನ್ನು ಧರಿಸಿಕೊಂಡು ಈ ಹೊತ್ತು ಕೋರ್ಟಿನಲ್ಲಿ ಸಾಕ್ಷ್ಯ ಹೇಗೆ ಹೇಳೋಣವೆಂದು ಚಿಂತಿಸುತ್ತಾ ಮಾಡಿದ ಒಡಕಲು ಅಕ್ಕಿಯ ಮುದ್ದೆ ಅನ್ನವನ್ನು ಅವನ ದೇವರು ನೈವೇದ್ಯವೆಂದು ಸ್ವೀಕರಿಸಬಹುದು; ಶ್ರೀಯುತ ರಾಮಯ್ಯ ಪುಂಜಿರು ಸ್ನಾನಮಾಡಿ ನಿರ್ಮಲ ವಸ್ತ್ರವನ್ನು ಧರಿಸಿಕೊಂಡು ಭಕ್ತಿಭಾವದಿಂದಲೂ ಶುದ್ಧ ಮುದ್ರಿಕೆಯಿಂದಲೂ ಮಾಡಿದ ಮೃಷ್ಟಾನ್ನವನ್ನು ಆ ದೇವರು ಸ್ವೀಕರಿಸಕೂಡದು! ಶೂದ್ರ ಸ್ಪರ್ಶವಾದ ಅನ್ನವಲ್ಲವೇ! ಸಾವಿರವೇಕೆ ?–ಅವರು ದೇವಸ್ಥಾನದೊಳಗೆ ಪ್ರವೇಶಿಸಲೇ ಕೂಡದು! ಯಾರ ಜಾತಿ ಹೋಗುತ್ತದೋ ಗೊತ್ತಿಲ್ಲ, ಆ ದೇವರ ಜಾತಿ ಯಾವುದೆಂಬುದು ಸಹ ಗೊತ್ತಿಲ್ಲ! ನಮ್ಮ ಓಂಕಾರೇಶ್ವರ ದೇವಸ್ಥಾನದಲ್ಲಿ ಅಥವಾ ಚೌಡೇಶ್ವರಿಯ ದೇವಸ್ಥಾನದಲ್ಲಿ ಡೇವಿಡ್‌ಸನ್ ದೊರೆಗಳಾಗಲೀ ಬೂಟ ದೊರೆಗಳಾಗಲೀ ಪ್ರವೇಶಿಸಬಹುದೇ? ಛಿ! ಸರ್ವತಃ ಕೂಡದು! ಅವರು "ಮ್ಲೇಚ್ಛರು"! ಅವರು ಪ್ರವೇಶಿಸಿದರೆ ದೇವರಿಗೆ ಬ್ರಹ್ಮ ಕಲಶವೋ ಏನೋ ದೊಡ್ಡ ಪ್ರಾಯಶ್ಚಿತ್ತವಾಗಬೇಕು! ಆದರೆ ಪೆನಲ್‌ಕೋಡ್ ಎಂಬ ಶಿಕ್ಷಾನಿಯಮದಲ್ಲಿ ಹೇಳಿದ ತಪ್ಪುಗಳೆಲ್ಲವನ್ನೂ ಮಾಡಿದ ಒಬ್ಬ "ಬ್ರಾಹ್ಮಣನು" ಪ್ರವೇಶಿಸುವುದರಿಂದ ದೇವರ ಜಾತಿಯಾಗಲೀ ಬೇರೆ ಯಾರೊಬ್ಬನ ಜಾತಿಯಾಗಲೀ ಹೋಗುವುದಿಲ್ಲ.

೧೨. ಜಾತಿನಿಯಮದ ವಿಷಯದಲ್ಲಿ ನಾನು ತಿಳಿದ ಸಂಗತಿಗಳನ್ನು ಅದರ ಗುಣ ದೋಷಗಳನ್ನೂ ಸ್ವಲ್ಪ ಮಟ್ಟಿಗೆ ವಿವರಿಸಿದೆನು. ಮಹನೀಯರಾದ ನೀವುಗಳು

ಅವುಗಳನ್ನು ಕುರಿತು ಆಲೋಚಿಸಿ ಜಾತಿನಿಯಮವು ಶ್ರುತಿ,ಸ್ಮೃತಿ, ಪುರಾಣ.ಲೋಕಾಚಾರ. ಇವುಗಳಲ್ಲಿ ಯಾವುದಕ್ಕಾದರೂ ಸರಿಬೀಳುತ್ತದೋ ಇಲ್ಲವೋ ಎಂಬುದನ್ನು ತಿರ್ಮಾನಿಸುವುದು. ನನ್ನ ಸ್ವಂತ ಅಭಿಪ್ರಾಯವೇನೆಂದರೆ, ಆ ನಿಯಮವು ಯಾವ ನ್ಯಾಯಕ್ಕೂ ಸರಿಬೀಳದ ಲೋಕಕಂಟಕವಾದ ಪದ್ಧತಿ ಎಂಬುದೇ. ಆದರೆ ನನ್ನ ಸ್ವಂತ ಅಭಿಪ್ರಾಯದ ಮಾತು ಹಾಗಿರಲಿ– "ಹಿಂದು ಜನಾಂಗದವರ ಶ್ಯಾರೀರಕ, ವ್ಯವಸಾಯಿಕ, ವೃತ್ಪತ್ತಿಕ (ವಿದ್ಯಾ ಸಂಬಂಧವಾದ), ಸಾಮಾಜಿಕ, ಧಾರ್ಮಿಕ, ಪಾರಮಾರ್ಥಿಕ ವೃದ್ಧಿ ಎಲ್ಲವನ್ನೂ ತಡೆದು ನಿಲ್ಲಿಸಿ ಅವರನ್ನು ಸೊರಗಿದ ಸಿಪ್ಪೆಗಳ ರಾಶಿಯಂತೆ ಹೀನದೆಸೆಗೆ ತಂದಿಟ್ಟಿರುವ ಈ ಜಾತಿನಿಯಮವನ್ನು ನಾವು ಎಷ್ಟು ವೇಗದಲ್ಲಿ ಉಲ್ಲಂಘಿಸಿ ಬಿಟ್ಟುಬಿಡುವೆವೋ ಅಷ್ಟು ಹೆಚ್ಚು ಒಳ್ಳೆಯದು" ಎಂದು ಹಿಂದೂ ಧರ್ಮರಕ್ಷಕಾಗ್ರಗಣ್ಯನೆಂದು ಲೋಕದಲ್ಲೆಲ್ಲಾ ಛಂದೋಬದ್ಧವಾಗಿ ಕೀರ್ತಿಕಲಾಪವನ್ನು ಮೆರೆಯಿಸಿ ನಿರ್ವಾಣ ಪದ್ಧತಿಯನ್ನು ಪಡೆದ ಶ್ರೀಮದ್ವಿವೇಕಾನಂದ ಸ್ವಾಮಿಗಳವರು "ಪ್ರಬುದ್ಧ ಭಾರತ"ವೆಂಬ ಅವರ ಗ್ರಂಥದಲ್ಲಿ ಹೇಳಿದ್ದಾರೆ. ಅವರ ಮಾತಾದರೂ ಹಾಗಿರಲಿ– ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣಸ್ವಾಮಿಯು "ವಿದ್ಯಾ ವಿನಯ ಸಂಪನ್ನನಾದ ಬ್ರಾಹ್ಮಣನಲ್ಲಿಯೂ, ಆಕಳಲ್ಲಿಯೂ, ಆನೆಯಲ್ಲಿಯೂ, ನಾಯಿಯಲ್ಲಿಯೂ, ನಾಯಿಯನ್ನು ಬೇಯಿಸುವ ಚಂಡಾಲನಲ್ಲಿಯೂ, ಬುದ್ಧಿವಂತರು ಸಮದೃಷ್ಟಿಯಿಂದ ನೋಡುವರು" ಎಂದೂ (V 18) "ಸರ್ವಭೂತಗಳಲ್ಲಿ ಸರಿಸಮಾನನೂ, ನಶ್ವರಗಳಲ್ಲಿ ನಾಶರಹಿತನೂ ಆಗಿರುವ ಪರಮೇಶ್ವರನನ್ನು ಯಾರು ನೋಡುತ್ತಾನೋ ಅವನೇ "ನೋಡುತ್ತಾನೆ" ಎಂದೂ (XIII 27) ಹೇಳಿರುವ ವಚನಗಳ ತಾತ್ಪರ್ಯವೇನೆಂದು ನೀವುಗಳೇ ಆಲೋಚಿಸಿ ನೋಡಿರಿ. ಹಾಗೆ ಆಲೋಚಿಸಿ ನೋಡಿದರೆ ಈ ವರೆಗೆ ನಾವು ಈ ಜಾತಿನಿಯಮದ್ದೆಸೆಯಿಂದ ದುರ್ಗತಿಯಲ್ಲಿದ್ದುದೇ ಸಾಕು, ಇನ್ನಾದರೂ ವಿಮುಕ್ತರಾಗೋಣವೆಂದು ನಿಮಗೆ ಮನಸ್ಸು ಹುಟ್ಟದೆ ಇರದೆಂದು ನಾವು ನಂಬುತ್ತೇನೆ.

ನಿರ್ವಾಹವಿಲ್ಲದೆ ಸ್ವಲ್ಪ ಉದ್ದವಾದ ಉಪನ್ಯಾಸವನ್ನು ನೀವುಗಳು ಮನಸ್ಸುಕೊಟ್ಟು ಕೇಳಿದ್ದಕ್ಕಾಗಿ ನಾನು ತುಂಬಾ ಉಪಕೃತನಾಗಿದ್ದೇನೆ.

ಟಿಪ್ಪಣಿ : ಕನ್ನಡದ ಮೊಟ್ಟಮೊದಲ ಸ್ವತಂತ್ರ ಕಾದಂಬರಿ 'ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯವು' (೧೮೯೮) ಕೃತಿ ರಚಿಸಿದ ದಿ। ಗುಲ್ವಾಡಿ ವೆಂಕಟರಾಯರು ಮಡಿಕೇರಿಯ 'ಮ್ಯೂಚುಅಲ್ ಇಂಪ್ರೂವ್‌ಮೆಂಟ್ ಸೊಸೈಟಿ'ಯಲ್ಲಿ ೧೯೦೨ ರಲ್ಲಿ ಮಾಡಿದ ಒಂದು ಗಮನಾರ್ಹ ಉಪನ್ಯಾಸ. 'ಅಭಿನವ' ಸಂಚಿಕೆಯಿಂದ ಪುನರ್ಮುದ್ರಿಸಲು ಅನುಮತಿ ಇತ್ತ ಗೆ। ಸಂತೋಷಕುಮಾರ ಗುಲ್ವಾಡಿ ಅವರಿಗೆ ಕೃತಜ್ಞತೆ.

—ಸಂಪಾದಕ

ಬಸವಲಿಂಗ ಸೊಪ್ಪಿಮಠ

ಮೂರು ಕವನಗಳು

೧. ಕ್ರಾಂತಿ ಕಾಯುವದಿಲ್ಲ

ಕಾಯುವದಿಲ್ಲ ಗೆಳೆಯ ಕ್ರಾಂತಿ
ನನ್ನ ನಿನ್ನಂಥ ಬಿಳಿಯಂಗಿಯ
ಶಾಣ್ಯಾಜನಗಳ ತಲೆತಿಂಡಿಗಾಗಿ.

ಕಾಯುತ್ತದೆ ಅದು—
ನಿಗಿ ನಿಗಿ ಉಗಿ ಉಗಿ
ಒಳಗೊಳಗೆ ತೀರ ಒಳಗೆ
ಹಸಿವು ಅವಮಾನದಲ್ಲಿ ಸುಟ್ಟ
ಸುಟ್ಟಷ್ಟು ಸತುವಾದ ಅಶಕ್ತ ಅಸ್ಥಿಯ
ತುಂಡು ಮಾಂಸದೊಳಗೆ
ದೈನ್ಯದಲಿ ಬಣ್ಣ ಹೊಳಪು ಕಳಕೊಂಡ
ಕಣ್ಣಗಾಜಿನ ಗೋಲಿಯೊಳಗೆ

ಇದೋ—
ಲಕ್ಷಲಕ್ಷದಿನಗಳಿಂದಲಕ್ಷಿತ
ಈವರೆಗೆ ಹೇಗೋ ಜೀವವಿಡಿದ
ನಿಮ್ಮ ಬೆಚ್ಚನೆಯ ಮೆಚ್ಚದ ಸಿಮೆಂಟು ಸೂರಿಗೆ
ಬೆವರುಣಿಸಿ ಬೆಂಡಾದ
ನಿಮ್ಮದೇ ಕಾರ್ಖಾನೆ ಕರಗಸದ ತುದಿಯಲ್ಲಿ
ಮೃತ್ಯುಬಾಯಲ್ಲಿ ನಿತ್ಯಹುಟ್ಟಿಬಂದ
ಅನ್ನ, ದಂಗ್ಗಾಣಿ ಹೆಂಡಕ್ಕೆ
ಎಲ್ಲ ನೋವುಗಳ ಮೊರೆತ–ಮರೆತಕ್ಕೆ
ಹಾದಿಬೀದಿಯಲ್ಲಿ ಎಲ್ಲೆಂದರಲ್ಲಿ
ಸಾವಾಗಿ ಹಾಸಿದ ನನ್ನ ಈ ನೆಲದ ಖಾಸಾಜನ
ಈಗ

ಕಂಕಿಯಂಳಿದಂ ಕಾಳಾಗಿ ಸಿಡಿಯುತ್ತಿರುವದು
ಗೊತ್ತಿರಲಿ ಉಳ್ಳವರೇ.

ದನಿ ಎತ್ತಿವರೆ, ಗುಸುಗುಸು ಗುಂಪಾದರೆ
ಸೊಕ್ಕಿನಲಿ ಮಾತಾಡಿದ
ನಿಮ್ಮ ಬಂದೂಕಿನ ನಳಿಕೆಗಳು
ಬೂಟುಗಳು, ರಾಕ್ಷಸ ನಾಯಿಗಳಂ
ಸ್ವಸ್ಥ ವಿರಾಮ ಹೊಂದುವ ಕಾಲ
ಇನ್ನೇನು ದೂರವಿಲ್ಲ.

ನೆನಪಿರಲಿ ನಮಗೆ
ನಮ್ಮಂಥ ಸಹಸ್ರ ಬಿಳಿಯಂಗಿ ಪುಂಗವರಿಗೆ
ನಾವು ಹೊತ್ತಿಸಿದ ಸಿಗರೇಟು
ನಮ್ಮ ಹೊಟ್ಟೆಯುರಿ ಹೆಚ್ಚಿಸಿದ ಮದ್ಯ, ಕೋಳಿ
ನಮ್ಮೆಲ್ಲ ಸೈದ್ಧಾಂತಿಕ ಗೊಂದಲಪುರದೊಳಗೆ
ಅಂತ್ಯ ಕಾಣುವದರೊಳಗೇ
ಕೋಟಿ ಕೋಟಿ ಕಪ್ಪುದೇಹದ ಕೋಮಲ ಜೀವಿಗಳ
ನಿಟ್ಟುಸಿರಿನಾಕ್ರೋಶದಲಿ
ಎಲ್ಲ ನಿಶ್ಚಿಂತವಾಗಿರುತ್ತದೆ.

೨. ಅನ್ಯೃತನುತಿಯು ವಿರಹಗೀತ

ನಡಿರಾತ್ರಿ ಹಾಡಿ ಮನ ಕದ್ದ ಧೀರ
ನಿನಗಾರು ಸರಿಯು ದೊರೆಯೆ
ಹುಚ್ಚಿಡಿದು ಓಡಿ ಬಂದಿಹೆನು ಬಾಲಿ
ಒಲ್ಲೆನ್ನಬ್ಯಾಡ ಸಿರಿಯೆ.

ಮಲಗಿರುವ ಭೂಪ ಮಲಗಿಹನು ಅಲ್ಲೆ
ನೀ ಚಿಂತಿ ಬ್ಯಾಡ ನೋಡ
ನನ್ನೆಲವು ಮುರಿದು ಹೊಸಚೌಕ ಮಾಡಿ
ಅದರಾಗ ನೀನ ಕೂಡ,

ಕತ್ಲ ಕಾವಾಗಿ ಕೊಡೆಯು ಹಿಡಿದೈತಿ
ದೂರ್‍ಯಾಕ ನನ್ಗ–ನಿನ್ಗ
ಒಳಗಿದ್ದ ನಾಗ ಹೆಡೆಯೆತ್ತಿ ಬಡಿದು
ಕುಣಿಧಾಂಗ ಧಂಗ-ಧಂಗ

ತುಂಬಿರುವ ಹರೆಯು ತುಳುಕೈತಿ ರಾಜ
ನೀ ಮುರಿಯೊ ಮೈಯು ಮುಲಕ
ಕತ್ಲಾನ ಗವಿಗೆ ಬೆಳಕಾಗಿ ಬಂದು
ನೀ ತೆಗೆಯೊ ಕನಸ ಚಿಲಕ.

ಮಾತೆಲ್ಲ ಬ್ಯಾಡ ಇದು ಅಲ್ಲ ವ್ಯಾಳೆ
ಕರದೈತಿ ಮಂಚ ಮುಲಗ
ಕುಂಡಾರ ರಾಯ ಚೆಲ್ಯಾನು ಚರಗ
ತಡಬೇಡ ಕುಂದುರಿ ಏರ.

೩. ಚುಳುಕು

ಕರಿಯುಂ ಕನ್ನಡಿಯೊಳಗೆ
ವಿಶ್ವ ಲಿಂಗಮುಖದೊಳಗೆ
ಅಡಗಿ ತೋರುವದಾದರೆ
ಕಾಲುಶತಕ ಬೇಸಿಗೆಗಳು
ಪುಟ್ಟ ಹಾಳೆಯು ಈ ನಾಲ್ಕು ಪಾದಗಳಲ್ಲಿ
ಉಡುಗಿ ಒಡೆದಿರುವದು ಹೇಗೆ ಸುಳ್ಳೆನ್ನುತ್ತೀರಿ ?

[ಬಸವಲಿಂಗ ಸೊಪ್ಪಿಮಠ ಅವರ ಪ್ರಥಮ ಕವನ ಸಂಕಲನ **ಬತ್ತದ ನೆನಪಿಗೆ ಬಾಡದ ಕಾವ್ಯ** (೧೯೮೩) ದಿಂದ ಆಯ್ದ ಕವನಗಳಿವು.

ಕನ್ನಡ ಆಡಳಿತ ಭಾಷೆ: ಮುಂದಿನ ಗುರಿ, ಹೊಣೆ†

ದೇಶಹಳ್ಳಿ ಜಿ. ನಾರಾಯಣ

ಗೋಕಾಕ್ ವರದಿ ಚಳವಳಿಯಿಂದ ಕನ್ನಡ ಜನತೆ ಎಚ್ಚೆತ್ತುಕೊಳ್ಳುವಂತಾದುದು ಒಂದು ದೊಡ್ಡ ಉಪಕಾರ. ಎಚ್ಚೆತ್ತ ಕನ್ನಡಿಗರನ್ನು ಒಂದುಗೂಡಿಸಿ ಅವರಲ್ಲಿ ಮತ್ತಷ್ಟು ಸ್ಫೂರ್ತಿಯನ್ನು ತುಂಬಿ ಕನ್ನಡದ ಸಮಸ್ಯೆಗಳ ನಿವಾರಣೆಗೆ ಅವರು ಎದ್ದು ನಿಲ್ಲುವಂತೆ ಮಾಡಬೇಕಾದುದು ಇಂದಿನ ಮುಖ್ಯ ಕರ್ತವ್ಯ. ಕರ್ನಾಟಕಕ್ಕೂ ಇತರ ಪ್ರಾಂತಗಳಿಗೂ ಒಂದು ವ್ಯತ್ಯಾಸವಿದೆ. ಇತರ ರಾಜ್ಯಗಳಲ್ಲಿ ಅಲ್ಲಿಯ ಭಾಷೆ ಪ್ರಶ್ನೆ ಬಂದಾಗ ಅಲ್ಲಿಯ ಎಲ್ಲ ರಾಜಕೀಯ ಪಕ್ಷಗಳು ಯಾವ ಭಿನ್ನಾಭಿಪ್ರಾಯವೂ ಇಲ್ಲದೆ ಒಂದುಗೂಡಿ ತಮ್ಮ ಭಾಷಾ ಸಮಸ್ಯೆಯನ್ನು ಬಗೆಹರಿಸಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ಅದಕ್ಕೆ ತದ್ವಿರುದ್ಧ ವಾತಾವರಣ ಇಲ್ಲಿ ಯಾವುದೇ ರಾಜಕೀಯ ಪಕ್ಷಗಳು ಕನ್ನಡದ ಪರವಾಗಿ ಮಾತನಾಡುವುದಿಲ್ಲ; ಕನ್ನಡಕ್ಕಾಗಿ ಹೋರಾಡುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಕನ್ನಡದ ಮತ್ತು ಕನ್ನಡಿಗರ ಸಮಸ್ಯೆಗಳನ್ನು ಬಗೆಹರಿಸುವವರು ಯಾರು ? ಈ ಪ್ರಶ್ನೆಗೆ ಉತ್ತರ ಹುಡುಕಬೇಕಾಗಿಲ್ಲ. ಎಚ್ಚೆತ್ತ ಕನ್ನಡಜನ ಆ ಕೆಲಸ ಮಾಡಬೇಕಾಗಿದೆ. ಗೋಕಾಕ್ ವರದಿ ಜಾರಿಗೆ ಬರಲು ಯಾರ್ಯಾರು ಮುಂದೆ ನಿಂತರೋ ಆ ಜನ, ಶಿಕ್ಷಕರು, ವಿದ್ಯಾರ್ಥಿಗಳು, ಕನ್ನಡ ಸಂಘ-ಸಂಸ್ಥೆಗಳು, ರೈತಸಂಘಗಳು ಮತ್ತು ಕಾರ್ಮಿಕರು ಕನ್ನಡದ ಸಮಸ್ಯೆಗಳನ್ನು ಬಗೆಹರಿಸಲು ಈಗ ಕಂಕಣತೊಟ್ಟು ನಿಲ್ಲಬೇಕಾಗಿದೆ. ರಾಜಕೀಯ ಪಕ್ಷಗಳನ್ನೂ ಒಲಿಸಿಕೊಳ್ಳಬೇಕಾಗಿದೆ.

ನಮ್ಮ ಸಮಸ್ಯೆಗಳು

ಯಾವ ಉದ್ದೇಶಗಳಿಗಾಗಿ ಕರ್ನಾಟಕ ಪ್ರಾಂತ ರಚನೆಯಾಗಬೇಕೆಂದು ನಮ್ಮ ಜನ

† ಕನ್ನಡ ಜಾಗೃತಿ ಪರಿಷತ್ತು, ಬೆಂಗಳೂರು ಇವರ ಈ ಪ್ರಕಟನೆಯ ಪುನರ್ಮುದ್ರಣಕ್ಕೆ ಅನುಮತಿಯಿತ್ತ ಜಿ. ನಾರಾಯಣ ಅವರಿಗೆ ಕೃತಜ್ಞತೆ. – ಸಂ.

ಬಯಸಿದ್ದರೊ ಆ ಉದ್ದೇಶಗಳಲ್ಲಿ ಇಲ್ಲಿಯ ಮಾತೃಭಾಷೆಯಾದ ಕನ್ನಡಕ್ಕೆ ಎಲ್ಲ ಸ್ಥಾನ ಮಾನಗಳನ್ನು ದೊರಕಿಸಿಕೊಡುವುದೂ ಒಂದಾಗಿತ್ತು. ಕರ್ನಾಟಕ ಸರ್ಕಾರ ಕನ್ನಡದ ಹೆಸರಿನಲ್ಲಿ ಪ್ರತಿ ವರ್ಷ ಕೋಟ್ಯಂತರ ರೂ. ಗಳನ್ನು ಖರ್ಚು ಮಾಡುತ್ತಿದ್ದರೂ ನಿಜವಾಗಿ ಕನ್ನಡಕ್ಕೆ ಸಲ್ಲಬೇಕಾದ ಸ್ಥಾನ ಕರ್ನಾಟಕದಲ್ಲಿ ಇದುವರೆಗೂ ದೊರೆಯದಿರುವುದು ಕನ್ನಡಿಗರ ದೌರ್ಭಾಗ್ಯವೆಂದೇ ಹೇಳಬೇಕು. ಇದರಿಂದ ಭಾಷಾವಾರು ಪ್ರಾಂತಗಳ ರಚನೆಯ ಉದ್ದೇಶವೇ ವಿಫಲವಾದಂತಾಗಿದೆ. ಕರ್ನಾಟಕವಾದ ಮೇಲೂ ಕನ್ನಡಕ್ಕಾಗಿ ಈ ನಾಡಿನಲ್ಲಿ ಅನೇಕ ವರ್ಷಗಳಿಂದ ಹೋರಾಟ ನಡೆಯುತ್ತಿದೆ.

ಆಡಳಿತದಲ್ಲಿ, ಶಿಕ್ಷಣದಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಕನ್ನಡದ ಬಳಕೆ ಇನ್ನೂ ಜಾರಿಗೆ ಬಂದಿಲ್ಲ. ಇಂಗ್ಲಿಷ್ ಮಾಧ್ಯಮದ ಶಾಲೆಗಳು ಹೆಚ್ಚುತ್ತಿವೆ. ಸರ್ಕಾರಿ ಉದ್ಯೋಗದಲ್ಲಿ ಹಾಗೂ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಆದ್ಯತೆ ಕಡಿಮೆ ಆಗುತ್ತಿದೆ. ಸಾರ್ವಜನಿಕ ಸೇವಾ ಆಯೋಗ ಕನ್ನಡ ಬಲ್ಲವರಿಗೆ ಸರಿಯಾಗಿ ಪುರಸ್ಕಾರ ನೀಡುತ್ತಿಲ್ಲ ಸಾಕಷ್ಟು ಜನ ಕನ್ನಡ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರಿದ್ದರೂ ಅವರಿಗೆ ಉದ್ಯೋಗ ದೊರೆಯುತ್ತಿಲ್ಲ. ಕರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರದಲ್ಲಿ ಹಾಗೂ ನಾಡಿನ ಇತರ ಭಾಗಗಳಲ್ಲಿ ಕನ್ನಡದ ವಾತಾವರಣ ನಶಿಸಿಹೋಗುತ್ತಿದೆ. ಸಮೂಹ ಮಾಧ್ಯಮಗಳಲ್ಲಿ ಕನ್ನಡಕ್ಕೆ ಸಿಗಬೇಕಾದ ಸ್ಥಾನ ಸಿಗುತ್ತಿಲ್ಲ ಅಲ್ಪ ಸಂಖ್ಯಾಂತರ ಹೆಸರಿನಲ್ಲಿ ಬಹುಸಂಖ್ಯಾತರಾದ ಕನ್ನಡಿಗರಿಗೆ ಎಲ್ಲ ಕ್ಷೇತ್ರಗಳಲ್ಲೂ ಅನ್ಯಾಯವಾಗುತ್ತಿದೆ. ಗಡಿ ವಿಷಯ ಇನ್ನೂ ಇತ್ಯರ್ಥವಾಗಿಲ್ಲ. ರಾಷ್ಟ್ರ ಮಟ್ಟದಲ್ಲಿ ಕನ್ನಡಿಗರ ಪ್ರಭಾವ ಕಡಿಮೆಯಾಗುತ್ತಿದೆ— ಇತ್ಯಾದಿ ನಾನಾ ಸಮಸ್ಯೆಗಳು ದಿನದಿಂದ ದಿನಕ್ಕೆ ಪ್ರಬಲಗೊಳ್ಳುತ್ತಿವೆ. ಇವುಗಳ ಬಗ್ಗೆ ನಾಡಿನ ಜನರಲ್ಲಿ ಜಾಗೃತಿ ಉಂಟುಮಾಡಿ, ಭಾರತದ ಹಿತಕ್ಕೆ ಧಕ್ಕೆಯಾಗದಂತೆ, ಭಾರತದ ಅಂಗವಾದ ನಾವೂ ನಮ್ಮ ಸಮಸ್ಯೆಗಳನ್ನು ಒಗ್ಗಟ್ಟಿನಿಂದ ಬಗೆಹರಿಸಿಕೊಳ್ಳದಿದ್ದರೆ ರಾಷ್ಟ್ರ ಜೀವನದಲ್ಲಿ ಕನ್ನಡಿಗರಾದ ನಾವು ತಲೆ ಎತ್ತಿ ನಡೆಯುವುದು ಕಷ್ಟವಾಗುತ್ತದೆ.

ಮುಖ್ಯ ಸಮಸ್ಯೆ

ಈ ಎಲ್ಲ ಸಮಸ್ಯೆಗಳನ್ನು ಒಮ್ಮೆಲೆ ನಾವು ತೆಗೆದುಕೊಳ್ಳುವುದಕ್ಕಿಂತ ಮುಖ್ಯವಾದ ಕೆಲವನ್ನು ಆರಿಸಿಕೊಂಡು ಮೊದಲು ಅವುಗಳ ನಿವಾರಣೆಗೆ ಪ್ರಯತ್ನಪಡಬೇಕು. ಕರ್ನಾಟಕದಲ್ಲಿ ಕನ್ನಡ ಇನ್ನೂ ಆಡಳಿತ ಭಾಷೆಯಾಗಿ ಪೂರ್ಣ ಜಾರಿಗೆ ಬರದಿರುವುದು ನಮ್ಮ ಮುಖ್ಯ ಹಾಗೂ ಮೊದಲ ಸಮಸ್ಯೆ ಎಂಬುದನ್ನು ನಾವು ಗಮನಿಸಬೇಕು. ಬೇರೆ ರಾಜ್ಯಗಳಲ್ಲಿ ಅವರ ಪರ ರಾಜ್ಯಭಾಷೆ ಆಡಳಿತ ಭಾಷೆಯಾಗಿ ವಿಜೃಂಭಿಸುತ್ತಿರು

ವಾಗ ಕರ್ನಾಟಕವಾಗಿ ಕಾಲುಶತಮಾನವಾದರೂ ಕನ್ನಡ ಆಡಳಿತ ಭಾಷೆಯಾಗಿ ಜಾರಿಯಾಗಬೇಕೆಂದು ಹೋರಾಟ ನಡೆಸಬೇಕಾದುದು ನಮ್ಮ ದುರ್ದೈವ.

ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೯೦ ರಷ್ಟು ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಇವರಲ್ಲಿ ರೈತರು, ದೀನದಲಿತರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇವರೆಲ್ಲರಿಗೂ ಕನ್ನಡ ಅರ್ಥವಾಗುತ್ತದೆ. ಇವರಲ್ಲಿ ನೂರಕ್ಕೆ ಐದು ಜನರಿಗೆ ಸುಮಾರಾಗಿ ಇಂಗ್ಲಿಷ್ ಬರಬಹುದು. ಈ ಸನ್ನಿವೇಶದಲ್ಲಿ ಆಡಳಿತ ವ್ಯವಹಾರ ನಡೆದರೆ ಶೇಕಡಾ ೯೫ ರಷ್ಟು ಜನರ ಗತಿ ಏನಾಗಬೇಕು? ಇಷ್ಟು ಜನರು ಇಂಗ್ಲಿಷ್‌ನ ಗುಲಾಮರಾಗಿ ಬಾಳ ಬೇಕಾಗಿದೆ. ಆಡಳಿತ ಭಾಷೆ ಕನ್ನಡವಾದರೆ ಈ ದಾಸ್ಯ ತಾನೇ ತಾನಾಗಿ ಹೋಗುತ್ತದೆ. ಜನರ ಭಾಷೆ ಸರ್ಕಾರದ ಭಾಷೆ ಎರಡೂ ಒಂದೇ ಆದಾಗ ಮಾತ್ರ ಎಲ್ಲವೂ ಸುಲಭವಾಗಿ ಪ್ರಜಾಪ್ರಭುತ್ವದ ಉದ್ದೇಶ ಸಫಲವಾಗುತ್ತದೆ.

ಕನ್ನಡದಲ್ಲಿ ಆಡಳಿತ ನಡೆಯಬೇಕು ಎಂದರೆ ಆಡಳಿತ ನಡೆಸುವ ಅಧಿಕಾರ ವರ್ಗ, ನೌಕರ ವರ್ಗ ಎಲ್ಲರೂ ಕನ್ನಡವನ್ನು ಬಲ್ಲವರೇ ಆಗಿರಬೇಕಾಗುತ್ತದೆ. ಆಗ ಹೆಚ್ಚು ಮಂದಿ ಕನ್ನಡಿಗರಿಗೆ ಉದ್ಯೋಗ ತಾನೇತಾನಾಗಿ ದೊರೆಯುತ್ತದೆ. ಉದ್ಯೋಗ ವಿನಿಮಯ ಕೇಂದ್ರ, ಸಾರ್ವಜನಿಕ ಸೇವಾ ಆಯೋಗ ಇಲ್ಲೆಲ್ಲ ಕನ್ನಡ ಬಲ್ಲವರೇ ಇದ್ದು, ಕನ್ನಡ ಬಲ್ಲವರಿಗೇ ಉದ್ಯೋಗ ಅವಕಾಶ ಒದಗಿಸಬೇಕಾಗುತ್ತದೆ. ಆಗ ಇಂಗ್ಲಿಷ್ ಬಲ್ಲ ಜನ ಕರ್ನಾಟಕದಲ್ಲಿ ಸರ್ಕಾರಿ ಉದ್ಯೋಗಕ್ಕೆಂದು ಹೊರಗಡೆಯಿಂದ ವಲಸೆ ಬರುವುದು ಕಡಿಮೆ ಆಗುತ್ತದೆ. ಅದೇ ರೀತಿ ಕಾರ್ಖಾನೆಗಳಲ್ಲೂ ಕನ್ನಡಕ್ಕೆ ಆದ್ಯತೆ ದೊರೆತಲ್ಲಿ ಎಲ್ಲ ಕಾರ್ಮಿಕರು ಕನ್ನಡಿಗರಿರುತ್ತಾರೆ. ಅಥವಾ ಯಾರಾದರೂ ಹೊರಗಡೆಯಿಂದ ಬಂದಲ್ಲಿ ಅವರು ಕೂಡಲೆ ಕನ್ನಡ ಕಲಿಯುತ್ತಾರೆ. ಸರ್ಕಾರದ ಎಲ್ಲ ಹಂತಗಳಲ್ಲಿ ಕನ್ನಡ ಜಾರಿಗೆ ಬಂದಾಗ ಅಧಿಕಾರವರ್ಗ, ನೌಕರವರ್ಗ, ಇನ್ನಿತರ ಸಿಬ್ಬಂದಿ ವರ್ಗ ಎಲ್ಲರೂ ಕನ್ನಡದಲ್ಲಿ ವ್ಯವಹರಿಸಬೇಕಾಗುವುದರಿಂದ ಇವರೆಲ್ಲರ ಮೇಲೆ ಅಧಿಕಾರ ಚಲಾಯಿಸುವ ನಮ್ಮ ಶಾಸಕರು, ಮಂತ್ರಿಗಳು ಕನ್ನಡ ಬಲ್ಲವರೇ ಆಗಿ ಆಗಿ ಕನ್ನಡದಲ್ಲೇ ವ್ಯವಹರಿಸಬೇಕಾಗುತ್ತದೆ. ಆಗ ನಮ್ಮ ಪ್ರತಿನಿಧಿಯಾಗಿ ಸ್ಪರ್ಧಿಸಲು ಬರುವವರಿಗೆ ಕನ್ನಡ ಬರುವುದಿಲ್ಲವೆಂದರೆ ಜನ ಅವರಿಗೆ ತಮ್ಮ ಮತ ಕೊಡುವುದಿಲ್ಲ. ಕನ್ನಡ ಬಾರದೆ ಶಾಸಕನಾಗುವುದು ಕಷ್ಟ, ಮಂತ್ರಿಯಾಗುವುದು ಇನ್ನೂ ಕಷ್ಟ.

ಆಡಳಿತದಲ್ಲಿ ದಕ್ಷತೆ ಹೆಚ್ಚುವುದು ಕನ್ನಡ ಭಾಷೆಯಾದಾಗ ಮಾತ್ರ ಎಂಬುದು ಅನೇಕರಿಗೆ ತಿಳಿದಿಲ್ಲ. ಎಷ್ಟೋ ಜನ ನಮ್ಮ ಅಧಿಕಾರಿಗಳಿಗೆ, ನೌಕರರಿಗೆ ಇಂಗ್ಲಿಷ್ ಸರಿಯಾಗಿ ಬರುವುದಿಲ್ಲ. ತಮ್ಮ ಕಡೆಗೆ ಬರುವ ಫೈಲ್‌ಗಳ ಮೇಲೆ ಇಂಗ್ಲಿಷ್‌ನಲ್ಲಿ

ಯಾವ ರೀತಿ ಟಿಪ್ಪಣಿ ಹಾಕಬೇಕೆಂಬುದು ತಿಳಿಯದೇ ಬಂದ ಫೈಲ್‌ಗಳನ್ನು ಮುಚ್ಚಿಡುತ್ತಾರೆ. ಅಥವಾ ಅದರ ಮೇಲೆ ಯೋಚಿಸಿ ಬರೆಯಲು ತಿಂಗಳುಗಟ್ಟಲೆ ಕಾಲ ತೆಗೆದುಕೊಂಡು ಕಡೆಗೆ ತಪ್ಪು ತಪ್ಪಾಗಿ ಬರೆದು ಕಳುಹಿಸುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಇದರಿಂದ ಕೆಲವು ಅನಾಹುತಗಳು ಸಂಭವಿಸುವುದೂ ಉಂಟು. ಇಂಗ್ಲಿಷಿನ ಬದಲು ಕನ್ನಡವಲ್ಲೇ ಟಿಪ್ಪಣಿ ಹಾಕುವುದಾದರೆ ಅವರಿಗೆ ಕನ್ನಡ ಅರ್ಥವಾಗುವುದರಿಂದ ಸುಲಭವಲ್ಲಿ ಟಿಪ್ಪಣಿ ಬರೆದು ಫೈಲ್ ಬೇಗ ಕಳುಹಿಸುತ್ತಾರೆ. ಇದರಿಂದ ಆಡಳಿತದಲ್ಲಿ ಕೆಲಸ ಚುರುಕಾಗಿ ದಕ್ಷತೆ ಹೆಚ್ಚುತ್ತದೆ.

ಆಡಳಿತದಲ್ಲಿ, ವ್ಯವಹಾರದಲ್ಲಿ ಎಲ್ಲ ಕಡೆಯೂ ಇಂಗ್ಲಿಷ್ ಹೆಚ್ಚಾಗಿ ಬಳಕೆಯಲ್ಲಿರುವುದರಿಂದ ತಮ್ಮ ಮಕ್ಕಳನ್ನು ಇಂಗ್ಲಿಷ್ ಮೀಡಿಯಂ ಶಾಲೆಗಳಿಗೆ ಕಳಿಸಿದರೆ ಹೆಚ್ಚು ಪ್ರಯೋಜನ ಎಂಬುದು ಬಹುಮಂದಿ ತಂದೆತಾಯಿಗಳ ಅಭಿಪ್ರಾಯವಾಗಿದೆ. ಆದ್ದರಿಂದ ಸಾವಿರಾರು ರೂಪಾಯಿ ಡೊನೇಷನ್ ಕೊಟ್ಟು ತಮ್ಮ ಮಕ್ಕಳನ್ನು ಇಂಗ್ಲಿಷ್ ಮೀಡಿಯಂ ಶಾಲೆಗಳಿಗೆ ಸೇರಿಸುತ್ತಾರೆ. ಇಂಗ್ಲಿಷಿನ ಬದಲು ಆಡಳಿತದಲ್ಲಿ ಕನ್ನಡವೇ ಜಾರಿಗೆ ಬಂದರೆ ಇಂಗ್ಲಿಷ್ ಮೀಡಿಯಂ ಶಾಲೆಗಳನ್ನು ಕೇಳುವವರೇ ಇರುವುದಿಲ್ಲ. ಆಗ ತಮ್ಮ ಮಕ್ಕಳನ್ನು ಕನ್ನಡ ಮೀಡಿಯಂ ಶಾಲೆಗಳಿಗೆ ಕ್ಯೂನಲ್ಲಿ ನಿಂತು ಡೊನೇಷನ ಕೊಟ್ಟು ತಾವೇ ಸೇರಿಸುತ್ತಾರೆ.

ಕನ್ನಡ ಆಡಳಿತ ಭಾಷೆಯಾಗುವುದರಿಂದ ಸರ್ಕಾರದಲ್ಲಿ, ಸ್ಥಳೀಯ ಸಂಸ್ಥೆಗಳಲ್ಲಿ, ಸಹಕಾರ ಸಂಸ್ಥೆಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಮತ್ತು ಇತರ ಎಲ್ಲಾ ಕ್ಷೇತ್ರಗಳಲ್ಲಿ ಕನ್ನಡದ ವಾತಾವರಣ ಉಂಟಾಗಿ ಕನ್ನಡ ಸಂಗೀತ, ನಾಟಕ, ಸಿನಮಾಗಳಿಗೂ ಪ್ರೋತ್ಸಾಹ ದೊರೆಯುತ್ತದೆ. ಜನರು ಪತ್ರ ವ್ಯವಹಾರಗಳನ್ನು ಕನ್ನಡದಲ್ಲಿ ನಡೆಸುತ್ತಾರೆ. ಎಲ್ಲೆಲ್ಲೂ ಕನ್ನಡದ ನಾಮಫಲಕಗಳು ಕಾಣಿಸಿಕೊಳ್ಳುತ್ತದೆ. ಕನ್ನಡಿಗರಲ್ಲಿ ಸ್ವಾಭಿಮಾನ ಬೆಳೆದು ಒಗ್ಗಟ್ಟಾಗುತ್ತಾರೆ. ಕನ್ನಡೇತರರೂ ಕನ್ನಡ ಕಲಿತು ನಮ್ಮೊಡನೆ ಅಣ್ಣ ತಮ್ಮಂದಿರಂತೆ ವಾಸಿಸುತ್ತಾರೆ.

ಈ ರೀತಿ ಕನ್ನಡ ನಾಡಿನಲ್ಲಿ ಕನ್ನಡದ ವಾತಾವರಣ ಬೆಳೆದು ಎಲ್ಲರೂ ಕನ್ನಡವನ್ನೇ ಬಳಸುವಂತಾದರೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆಗಳು ಬೆಳೆಯುತ್ತವೆ. ರಾಷ್ಟ್ರಜೀವನದಲ್ಲಿ ಕನ್ನಡಿಗರಾದ ನಾವು ತಲೆ ಎತ್ತಿ ನಡೆಯಲು ಸಾಧ್ಯವಾಗುತ್ತದೆ. ಕನ್ನಡದ ಅನೇಕ ಸಮಸ್ಯೆಗಳಿಗೆ ಕನ್ನಡ ಆಡಳಿತ ಭಾಷೆಯಾಗುವುದೊಂದೇ ಸಿದ್ಧೌಷಧ ಎಂಬುದನ್ನು ನಾವು ಜ್ಞಾಪಕದಲ್ಲಿಡಬೇಕು.

ಈಗ ಕನ್ನಡ ಆಡಳಿತ ಭಾಷೆಯಾಗಿ ಪೂರ್ಣಜಾರಿಗೆ ಬರಲು ಏನು ಮಾಡಬೇಕೆಂಬುದು ನಮ್ಮ ಮುಂದಿರುವ ಪ್ರಶ್ನೆ. ಇದು ಗೋಕಾಕ್ ವರದಿ ಜಾರಿಗೆ ಬಂದಷ್ಟು ಸುಲಭವಲ್ಲ. ಇದಕ್ಕೆ ಅಡ್ಡಿ ತರಲು ಅನೇಕ ಹಿತಾಸಕ್ತಿಗಳು ತೆರೆಯ ಮರೆಯಲ್ಲಿ

ಕಾದು ನಿಂತಿವೆ. ನಾವು ಅವುಗಳನ್ನೆಲ್ಲ ಎದುರಿಸಿ, ಕನ್ನಡ ಜಾರಿಗೆ ತರಲು ಹೋರಾಟ ನಡೆಸಬೇಕಾಗಿದೆ. ಮಹತ್ತರವಾದ ಈ ಕಾರ್ಯ ಕೇವಲ ಕೆಲವರಿಂದ ಸಾಧ್ಯವಾಗುವುದಿಲ್ಲ. ಸರ್ಕಾರ ಮನಸ್ಸು ಮಾಡಬೇಕು. ಸಂಘ ಸಂಸ್ಥೆಗಳ ಮತ್ತು ಸಾರ್ವಜನಿಕರ ಸಹಕಾರವೂ ಬೇಕು. ಆಗ ಆದಷ್ಟು ಶೀಘ್ರವಾಗಿ ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ಬರುತ್ತದೆ.

ಸರ್ಕಾರದ ಹೊಣೆ :

ಈಗ ಮೊದಲು ಸರ್ಕಾರ ಮಾಡಬೇಕಾದ ಕೆಲಸ ಯಾವುದು ಎಂಬುದನ್ನು ನೋಡೋಣ. ಕೇಂದ್ರ ಸರ್ಕಾರ ಒಪ್ಪಿರುವ ಹದಿನೇಳು ಅಧಿಕೃತ ಭಾಷೆಗಳಲ್ಲಿ ಕನ್ನಡವೂ ಒಂದು. ಕರ್ನಾಟಕದಲ್ಲಿ ಬಹುಸಂಖ್ಯಾತರ ಭಾಷೆ ಕನ್ನಡ. ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರಲು ಭಾರತದ ಸಂವಿಧಾನ ಅಡ್ಡಿ ಬರುವುದಿಲ್ಲ. ಅಷ್ಟೇ ಅಲ್ಲ, ಪ್ರತಿಯೊಂದು ರಾಜ್ಯಭಾಷೆಯೂ ಚೆನ್ನಾಗಿ ಬೆಳೆಯಬೇಕೆಂಬುದು ಕೇಂದ್ರ ಸರ್ಕಾರದ ನೀತಿಯಾಗಿದೆ. ಇದನ್ನರಿತ ಕರ್ನಾಟಕ ಸರ್ಕಾರ ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿರತಕ್ಕದ್ದು ಎಂಬ ತತ್ತ್ವವನ್ನು ಈಗಾಗಲೆ ಒಪ್ಪಿಕೊಂಡಿದೆ. ಅಲ್ಪಸಂಖ್ಯಾತರಿಗೂ ಅವರವರ ಭಾಷೆಯ ಬೆಳವಣಿಗೆಗೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದೆ. ಕರ್ನಾಟಕದಲ್ಲಿ ೧-೪-೧೯೬೮ ರಿಂದ ತಾಲ್ಲೂಕು ಮಟ್ಟದ ಎಲ್ಲ ಕಚೇರಿಗಳಲ್ಲಿ, ೧-೧೧-೧೯೭೦ ರಿಂದ ಸಬ್‌ಡಿವಿಜನ್ ಮಟ್ಟದ ಕಚೇರಿಗಳಲ್ಲಿ, ೧೫-೮-೧೯೭೨ ರಿಂದ ಜಿಲ್ಲಾ ಮಟ್ಟದ ಕಚೇರಿಗಳಲ್ಲಿ, ೧-೧೨-೧೯೭೪ ರಿಂದ ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡವನ್ನು ಜಾರಿಗೊಳಿಸಬೇಕೆಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ೧೯೭೦ ಕನ್ನಡ ಆಡಳಿತ ಭಾಷಾ ಸಮಿತಿಯನ್ನು ರಚಿಸಿ, ಅದರ ಸಲಹೆಗಳನ್ನು ಕಾರ್ಯಗತಗೊಳಿಸಲು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದಕ್ಕಾಗಿ 'ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ' ಎಂಬ ಪ್ರತ್ಯೇಕ ಇಲಾಖೆಯೇ ರೂಪುಗೊಂಡಿದೆ. ಕೆಲಸದ ನಿಯತಕಾಲಿಕ ಪರಾಮರ್ಶೆಗಾಗಿ ಖಾಸಗೀ ಸದಸ್ಯರನ್ನೊಳಗೊಂಡ ಒಂದು ಉಚ್ಚಮಟ್ಟದ ಸಮಿತಿ, ರಾಜ್ಯ ಅಧಿಕಾರಿ ಮಟ್ಟದ ಸಮಿತಿ ಹಾಗೂ ಜಿಲ್ಲಾ ಮಟ್ಟದ ಸಮಿತಿಗಳು ರಚನೆಯಾಗಿವೆ.

ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸಲು ಅಗತ್ಯವಾದ ಆಡಳಿತ ಶಬ್ದಕೋಶ, ಕಾನೂನು ಪದಕೋಶ ಇತ್ಯಾದಿ ಪ್ರಕಟಣೆಗಳು ಅಚ್ಚಾಗಿವೆ. ಅಲ್ಲದೆ ಸರ್ಕಾರಿ ನೌಕರರಿಗೆ ಕನ್ನಡ ಶೀಘ್ರಲಿಪಿ ಮತ್ತು ಕನ್ನಡ ಬೆರಳಚ್ಚು ತರಬೇತಿ, ಕನ್ನಡೇತರರಿಗೆ ಕನ್ನಡ ತರಗತಿ, ಸರ್ಕಾರಿ ಮತ್ತು ನೌಕರರಿಗೆ ಆಡಳಿತ ಭಾಷಾ ಕಲಿಕೆ ತರಬೇತಿ

ಇತ್ಯಾದಿ ತರಬೇತಿ ಶಿಬಿರಗಳನ್ನು ಸರ್ಕಾರ ನಡೆಸುತ್ತಿದೆ. ಕನ್ನಡದಲ್ಲಿ ಉತ್ತಮ ತೀರ್ಪು ನೀಡಿದ ನ್ಯಾಯಾಧೀಶರಿಗೆ, ಕಚೇರಿಗಳಲ್ಲಿ ಕನ್ನಡವನ್ನು ಬಳಸುವಲ್ಲಿ ಅಧಿಕಾರಿಗಳು ಮತ್ತು ನೌಕರರಿಗೆ ಬಹುಮಾನಗಳನ್ನು ನೀಡಲಾಗುತ್ತಿದ. ಸಭೆಗಳು ಗೋಷ್ಠಿಗಳು ನಡೆಯುತ್ತಿವೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರನ್ನು ನೇಮಿಸಲಾಗಿದೆ. ಈ ಎಲ್ಲ ಕೆಲಸಗಳಿಗಾಗಿ ವರ್ಷಕ್ಕೆ ಐವತ್ತುಲಕ್ಷ ರೂಪಾಯಿಗಳಿಗಿಂತ ಹೆಚ್ಚು ವೆಚ್ಚ ತಗಲಬಹುದು.

ಇಷ್ಟಾದರು ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡವನ್ನು ಪೂರ್ಣವಾಗಿ ಜಾರಿಗೆ ತರಲು ಸಾಧ್ಯವಾಗಿಲ್ಲ. ಆಡಳಿತ ಭಾಷೆ ವಿಷಯದಲ್ಲಿ ಸರ್ಕಾರ ಹೆಚ್ಚು ಗಮನ ಹರಿಸದಿರುವುದು ಒಂದು ಮುಖ್ಯ ಕಾರಣವಾದರೆ ಅಧಿಕಾರಿಗಳ ಉದಾಸೀನ ಮನೋಭಾವವೂ ಒಂದು ಕಾರಣ. ಅಧಿಕಾರಿಗಳ ವಿಷಯದಲ್ಲಿ ಸರ್ಕಾರದ ಸಡಿಲ ನೀತಿ, ತೂಕಡಿಸುವವರಿಗೆ ಹಾಸಿಗೆ ಹಾಸಿಕೊಟ್ಟಂತಾಗಿದೆ. ಈ ಸಂದರ್ಭದಲ್ಲಿ ಸರ್ಕಾರ ಸ್ವಲ್ಪ ಕಠಿಣವಾಗಿ ವರ್ತಿಸಿದ ಹೊರತು ಆಡಳಿತದಲ್ಲಿ ಕನ್ನಡ ಜಾರಿಗೆ ಬರುವುದಿಲ್ಲ.

೧. ಏನೇ ಆಗಲಿ, ವಿಶ್ವ ಕನ್ನಡ ಸಮ್ಮೇಳನ ನಡೆಯುವುದರೊಳಗೆ ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡ ಪೂರ್ಣ ಜಾರಿಗೆ ಬರುವಂತೆ ಸರ್ಕಾರ ಘೋಷಿಸಿ ಅದರಂತೆ ಕಾರ್ಯ ಪ್ರವೃತ್ತವಾಗಬೇಕು.

೨. ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರುವ ವಿಷಯದಲ್ಲಿ ಈವರೆಗೆ ಹೊರಡಿಸಿರುವ ಆದೇಶಗಳು, ಪೂರಕ ಸಾಹಿತ್ಯ ಇದನ್ನೆಲ್ಲ ಇಲಾಖೆ ಮುಖ್ಯಾಧಿಕಾರಿಗಳಿಗೆ ಮತ್ತೊಮ್ಮೆ ಜ್ಞಾಪಿಸಿ, ಕೂಡಲೆ ಕನ್ನಡ ಜಾರಿಗೆ ತರದಿದ್ದರೆ ಶಿಸ್ತಿನ ಕ್ರಮ ಕೈಗೊಳ್ಳುವುದಾಗಿ ಸುತ್ತೋಲೆ ಕಳುಹಿಸಬೇಕು.

೩. ಮುಖ್ಯ ಮಂತ್ರಿಗಳೂ ಸೇರಿದಂತೆ ಎಲ್ಲ ಮಂತ್ರಿಗಳೂ ಉನ್ನತ ಅಧಿಕಾರಿಗಳೂ ತಮ್ಮಲ್ಲಿಗೆ ಬರುವ ಫೈಲುಗಳ ಮೇಲೆ ಕನ್ನಡದಲ್ಲಿ ಟಿಪ್ಪಣಿ ಇರದಿದ್ದಲ್ಲಿ ಅವುಗಳನ್ನು ಗಮನಿಸುವುದಿಲ್ಲವೆಂದೂ ಕನ್ನಡದಲ್ಲಿ ಬರೆಯದಿರುವವರ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದೂ ಆದೇಶ ಹೊರಡಿಸಬೇಕು. ಹಾಗೆಯೆ ಎಲ್ಲ ಅಧಿಕಾರಿಗಳೂ ಮಂತ್ರಿಗಳೂ ಟಿಪ್ಪಣಿಗಳನ್ನೂ ತೀರ್ಮಾನಗಳನ್ನೂ ಕನ್ನಡದಲ್ಲೇ ಬರೆಯಬೇಕು. ರಾಜ್ಯದಿಂದ ಹೊರಗಡೆ ಹೋಗುವ ಕಾಗದ ಪತ್ರಗಳನ್ನು ಹಿಂದೀ ಅಥವಾ ಇಂಗ್ಲೀಷ್‌ನಲ್ಲಿ ಬರೆಯಬಹುದು.

೪. ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರುವಲ್ಲಿ ಸಹಕರಿಸುವ ಅಧಿಕಾರಿಗಳು ಮತ್ತು ನೌಕರರಿಗೆ ಬಹುಮಾನ ರೂಪದಲ್ಲಿ ಹಣ ಕೊಡುವುದನ್ನು ನಿಲ್ಲಿಸಿ,

ಕನ್ನಡವನ್ನು ಆಡಳಿತ ಭಾಷೆಯಾಗಿ ತರುವುದು ಸರ್ಕಾರದ ಎಲ್ಲ ಅಧಿಕಾರಿಗಳು ಮತ್ತು ನೌಕರರ ಕರ್ತವ್ಯವೆಂದು ತಿಳಿಸಿ, ಇದಕ್ಕೆ ಗಮನ ಕೊಡದಿರುವವರಿಗೆ ಇಂಕ್ರಿಮೆಂಟ್, ಬಡ್ತಿ ನಿಲ್ಲಿಸುವ ಶಿಕ್ಷೆಯನ್ನು ವಿಧಿಸಬೇಕು.

೫ ಕರ್ನಾಟಕಕ್ಕೆ ಎರವಲು ಸೇವೆಯ ಮೇಲೆ ಬರುವ ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳೂ ಕನ್ನಡವನ್ನು ಕಡ್ಡಾಯವಾಗಿ ಕಲಿತು, ಕನ್ನಡದಲ್ಲೇ ವ್ಯವಹರಿಸಬೇಕು. ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ಬರಲು ಕೆಲವು ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳು ಅಡ್ಡಿಯಾಗಿದ್ದಾರೆಂಬ ದೂರುಗಳು ಕೇಳಿ ಬರುತ್ತಿವೆ. ಅಂತಹ ಅಧಿಕಾರಿಗಳನ್ನು ಪತ್ತೆ ಹಚ್ಚಿ ವಾಪಸ್ಸು ಕಳುಹಿಸಬೇಕು.

೬. ತಾಲ್ಲೂಕು, ಸಬ್ ಡಿವಿಜನ್, ಜಿಲ್ಲಾ, ಹಾಗೂ ರಾಜ್ಯ ಮಟ್ಟದಲ್ಲಿ ಸಾರ್ವಜನಿಕರಿಂದ ಬರುವ ಅರ್ಜಿಗಳು ಕನ್ನಡದಲ್ಲಿದ್ದರೆ, ಅವುಗಳ ಕಡೆ ಅಧಿಕಾರಿಗಳು ಗಮನ ಕೊಡುವುದಿಲ್ಲವೆಂಬ ದೂರುಗಳು ಕೇಳಿ ಬರುತ್ತಿವೆ. ಕನ್ನಡದಲ್ಲಿ ಬರುವ ಅರ್ಜಿಗಳಿಗೇ ಆದ್ಯತೆ ನೀಡಬೇಕೆಂದೂ ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ಶಿಕ್ಷೆಗೊಳಗಾಗುತ್ತಾರೆಂದು ಸರ್ಕಾರ ಕೂಡಲೇ ಆಜ್ಞೆ ಹೊರಡಿಸಬೇಕು.

೭. ಗ್ರಾಮಪಂಚಾಯಿತಿಗಳಿಗೆ, ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ, ರೈತರಿಗೆ, ವ್ಯಾಪಾರಗಾರರಿಗೆ ಸರ್ಕಾರದ ನಾನಾ ಇಲಾಖೆಗಳಿಂದ ಹೋಗುವ ಕೆಲವು ಕಾಗದ ಪತ್ರಗಳು, ಆದೇಶಗಳು, ಅರ್ಜಿಗಳು, ಬಿಲ್‌ಗಳು. ಆಹ್ವಾನ ಪತ್ರಿಕೆಗಳು ಇಂಗ್ಲಿಷ್‌ನಲ್ಲಿ ಹೋಗುತ್ತಿವೆಯೆಂದು ಆಗಾಗ ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ. ಇಂತಹವುಗಳೆಲ್ಲ ಕನ್ನಡದಲ್ಲೇ ಹೋಗುವಂತೆ ಇಲಾಖಾ ಮುಖ್ಯಸ್ಥರಿಗೆ ಬರೆದು ಎಚ್ಚರಿಸಬೇಕು.

೮. ಎಲ್ಲ ಹಂತಗಳಲ್ಲಿ ಕನ್ನಡ ಜಾರಿಗೆ ಬರತಕ್ಕದೆಂದು ಸರ್ಕಾರದ ಆಜ್ಞೆ ಹೊರಟಿದ್ದರೂ ಕೆಲವು ಇಲಾಖೆಗಳಿಗೆ ಇದು ಅನ್ವಯಿಸುವಂತೆ ಕಾಣುವುದಿಲ್ಲ. ಇದು ತಪ್ಪು. ಸರ್ಕಾರದ ಎಲ್ಲ ಇಲಾಖೆಗಳಿಗೂ ಈ ಆಜ್ಞೆ ಅನ್ವಯಿಸುವಂತೆ ಹೊಸ ಆಜ್ಞೆ ಹೊರಡಿಸಬೇಕು.

೯. ಕನ್ನಡಬಾರದ ಕೆಲವು ಜನರ ಅನುಕೂಲಕ್ಕಾಗಿ ಸರ್ಕಾರ ಅನೇಕ ವರ್ಷಗಳಿಂದ ಕೆಲವು ಅರ್ಜಿ ಫಾರಂಗಳನ್ನು, ಬಿಲ್‌ಗಳನ್ನು, ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಗಳಲ್ಲೂ ಮುದ್ರಿಸುತ್ತಿದೆ. ಎಷ್ಟು ವರ್ಷವಾದರು ಇದೇ ರೀತಿ ಮುಂದುವರಿಸುವುದು ಸರಿಯಲ್ಲ. ಇನ್ನು ಮೇಲಾದರೂ ಕನ್ನಡದ ಜತೆ ಇಂಗ್ಲಿಷ್‌ನಲ್ಲಿ ಅಚ್ಚು ಮಾಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಕನ್ನಡೇತರರು ಎಷ್ಟು ವರ್ಷವಾದರು ಕನ್ನಡ ಕಲಿಯುವುದಿಲ್ಲ. ಕನ್ನಡ ಆಡಳಿತದಲ್ಲಿ ಜಾರಿಗೆ ಬರುವುದಿಲ್ಲ.

೧೦. ಎಲ್ಲ ಹಂತಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಜಾರಿಗೆ ತರುವುದರಿಂದ ಅದಕ್ಕೆ ತಕ್ಕ ಪ್ರಮಾಣದಲ್ಲಿ ಎಲ್ಲ ಕಡೆಯೂ ಕನ್ನಡ ಬೆರಳಚ್ಚುಗಾರರು ಮತ್ತು ಕನ್ನಡ ಶೀಘ್ರಲಿಪಿಗಾರರು ಬೇಕಾಗುತ್ತಾರೆ. ಈಗ ರಾಜ್ಯದಲ್ಲಿ ಸಾವಿರಾರು ಜನ ಕನ್ನಡ ಬೆರಳಚ್ಚುಗಾರರೂ, ನೂರಾರು ಜನ ಕನ್ನಡ ಶೀಘ್ರಲಿಪಿಗಾರರು ನಿರುದ್ಯೋಗಿಗಳಾಗಿದ್ದಾರೆ. ಸರ್ಕಾರಿ ಕಚೇರಿಗಳಲ್ಲಿ, ಸಚಿವಾಲಯಗಳಲ್ಲಿ, ಸಹಕಾರ ಸಂಸ್ಥೆಗಳಲ್ಲಿ ಕಾರ್ಖಾನೆಗಳಲ್ಲಿ ಕೂಡಲೆ ಇವರನ್ನು ನೇಮಿಸಿಕೊಳ್ಳಬೇಕು.

೧೧. ಇಂಗ್ಲಿಷ್‌ನಿಂದ ಕನ್ನಡಕ್ಕೆ ತರ್ಜುಮೆ ಮಾಡಿದ ಕೆಲವು ಶಾಸನಗಳನ್ನು, ವಿಧಿ ನಿಯಮಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುವುದರಿಂದ ಇನ್ನು ಮುಂದೆ ಮಾಡಬಹುದಾದ ಎಲ್ಲ ಶಾಸನಗಳನ್ನೂ ವಿಧಿ ನಿಯಮಗಳನ್ನೂ ಮೂಲದಲ್ಲೇ ಕನ್ನಡದಲ್ಲಿ ಮಾಡಬೇಕು.

೧೨. ಸರ್ಕಾರವು ತನ್ನಿಂದ ಅನುದಾನ ಪಡೆಯುವ ಸಂಸ್ಥೆಗಳು (ಖಾಸಗಿ ಕಾಲೇಜುಗಳು, ವಿಶ್ವವಿದ್ಯಾನಿಲಯಗಳು, ಅಕಾಡೆಮಿಗಳು ಇತ್ಯಾದಿ) ರಾಜ್ಯದೊಳಗೆ ಕಳಿಸುವ ಎಲ್ಲ ಕಾಗದ ಪತ್ರಗಳನ್ನು ಕನ್ನಡದಲ್ಲಿ ಬರೆಯತಕ್ಕದೆಂದು ಷರತ್ತನ್ನು ವಿಧಿಸಬೇಕು. ಅವುಗಳು ಅಚ್ಚು ಮಾಡಿಸುವ ಫಾರಂಗಳೂ ಕನ್ನಡದಲ್ಲೇ ಇರಬೇಕು,

೧೩. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿನ ಸಮಾರಂಭಗಳು ಮತ್ತು ಪ್ರಕಟಣೆಗಳು ಹೊರತಾಗಿ ಯಾವುದೇ ಸಂದರ್ಭದಲ್ಲಿ ರಾಜ್ಯದ ಮುಖ್ಯ ಮಂತ್ರಿಗಳೂ, ಮಂತ್ರಿಗಳೂ ಕಳುಹಿಸುವ ಸಂದೇಶಗಳು ಕನ್ನಡ ಭಾಷೆಯಲ್ಲಿಯೇ ಇರತಕ್ಕದ್ದು.

೧೪. ಮುಖ್ಯಮಂತ್ರಿಗಳಾಗಲಿ, ಮಂತ್ರಿಗಳಾಗಲಿ ಭಾಗವಹಿಸುವ ಸಮಾರಂಭಗಳಲ್ಲಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾರ್ಯಕ್ರಮಗಳ ಹೊರತಾಗಿ, ಭಾಷಣಗಳು ಕನ್ನಡದಲ್ಲಿರಬೇಕೆಂದು ಅವರು ಷರತ್ತು ಹಾಕತಕ್ಕದ್ದು. ಇದನ್ನು ಯಾವುದೇ ಕೋಮಿನ ಧಾರ್ಮಿಕ ಸಂದರ್ಭಗಳಿಗೆ ಅನ್ವಯಿಸದಿರಬಹುದು.

೧೫. ಲೋಕಸೇವಾ ಆಯೋಗದ ಮೂಲಕ ಅಥವಾ ಬೇರೆ ಯಾವ ಸಮಿತಿಗಳ ಮೂಲಕವಾಗಲಿ ನಡೆಯುವ ನೇಮಕಾತಿ ಪರೀಕ್ಷೆ ಮತ್ತು ಸಂದರ್ಶನಗಳಲ್ಲಿ ಕನ್ನಡದಲ್ಲಿ ಪ್ರಶ್ನೆ ಹಾಕಿ, ಕನ್ನಡದಲ್ಲೇ ಉತ್ತರ ಪಡೆಯಬೇಕು. ಇದಕ್ಕೆ ಸಂಬಂಧಪಟ್ಟ ಸಮಿತಿಗಳನ್ನು ರಚಿಸುವಾಗ, ಚೆನ್ನಾಗಿ ಕನ್ನಡ ಬಲ್ಲ ಕನ್ನಡಾಭಿಮಾನಿಗಳನ್ನು ಸಮಿತಿಯ ಸದಸ್ಯರನ್ನಾಗಿ ತೆಗೆದುಕೊಳ್ಳಬೇಕು.

೧೬. ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರದ ಕಚೇರಿಗಳು ತಮ್ಮ ವ್ಯವಹಾರದಲ್ಲಿ ಇಲ್ಲಿನ ರಾಜ್ಯ ಭಾಷೆಯಾದ ಕನ್ನಡವನ್ನು ಬಳಸಲೇಬೇಕೆಂದು ಕೇಂದ್ರದ ಆದೇಶ ವಿದ್ದರೂ ಅದು ಇಲ್ಲಿ ಇನ್ನೂ ಜಾರಿಗೆ ಬಂದಂತಿಲ್ಲ. ರಾಜ್ಯ ಸರ್ಕಾರ ಕೂಡಲೇ ಆ ಎಲ್ಲ ಕಚೇರಿ ಮುಖ್ಯಸ್ಥರಿಗೂ ಸುತ್ತೋಲೆ ಕಳುಹಿಸಿ ಕೂಡಲೆ ಕನ್ನಡವನ್ನು ಜಾರಿಗೆ ತರುವಂತೆ ಒತ್ತಾಯಪಡಿಸಬೇಕು.

೧೭. ಕರ್ನಾಟಕದಲ್ಲಿರುವ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳು, ಖಾಸಗಿ ಸ್ವಾಮ್ಯದ ಕಾರ್ಖಾನೆಗಳಲ್ಲಿ ನೇಮಕಾತಿಗಳನ್ನು ಮಾಡುವ ಸಮಿತಿಗಳಲ್ಲಿ ಕನ್ನಡಿಗರಿಗ ನ್ಯಾಯ ವಾದ ಪ್ರಾತಿನಿಧ್ಯವಿಲ್ಲದೆ ಆ ಎಲ್ಲ ಕಾರ್ಖಾನೆಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಕನ್ನಡಿ ಗರಿಗೇ ಅನ್ಯಾಯವಾಗುತ್ತಿದೆ. ಕರ್ನಾಟಕ ಸರ್ಕಾರ ಅಂತಹ ಕಾರ್ಖಾನೆಗಳನ್ನು ಗುರುತಿಸಿ ಎಲ್ಲ ನೇಮಕಾತಿ ಸಮಿತಿಗಳಲ್ಲಿ ಕನ್ನಡಿಗರಿಗೆ ಸಾಕಷ್ಟು ಪ್ರಾತಿನಿಧ್ಯ ನೀಡು ವಂತೆ ಎಚ್ಚರಿಕೆ ಕೊಡಬೇಕು.

೧೮. ಕರ್ನಾಟಕ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೊರ ರಾಜ್ಯಗಳವರು ಕರ್ನಾಟಕದಲ್ಲಿ ತಪ್ಪು ವಿಳಾಸಗಳನ್ನು ಕೊಟ್ಟು ತಮ್ಮ ಹೆಸರುಗಳನ್ನು ದಾಖಲು ಮಾಡಿಸಿಕೊಳ್ಳುತ್ತಿರುವುದಾಗಿ ದೂರುಗಳು ಕೇಳಿಬರುತ್ತಿವೆ. ಅಂತಹವರನ್ನು ಪತ್ತೆ ಹಚ್ಚಿ ಶಿಕ್ಷಿಸಬೇಕಲ್ಲದೆ, ಅಂತಹ ಘಟನೆಗಳಿಗೆ ಅವಕಾಶ ಕೊಡುವ ಅಧಿಕಾರಿಗಳನ್ನೂ ಶಿಕ್ಷಿಸಬೇಕು.

೧೯. ಹೊಸದಾಗಿ ಸರ್ಕಾರಿ ಉದ್ಯೋಗಕ್ಕೆ ಸೇರಬಯಸುವ ಕೆಲವು ಕನ್ನಡೇತರರು ಮತ್ತು ಈಗಾಗಲೆ ಕೆಲಸಕ್ಕೆ ಸೇರಿರುವ ಕನ್ನಡಬಾರದ ಕೆಲವರು ಖಾಸಗಿ ಸಂಸ್ಥೆಗಳಲ್ಲಿ ತಾವು ಕನ್ನಡ ಕಲಿತಿರುವುದಾಗಿ ಹೇಳಿ ಸುಳ್ಳು ಅರ್ಹತಾ ಪತ್ರಗಳನ್ನು ತರುತ್ತಿದ್ದಾ ರೆಂದು ಗೊತ್ತಾಗಿದೆ. ಇದರಿಂದ ನಿಜವಾಗಿ ಕನ್ನಡ ಬಲ್ಲವರಿಗೆ ಸಿಗುವ ಅವಕಾಶ ತಪ್ಪಿ ಹೋಗುತ್ತದೆ. ಆದ್ದರಿಂದ ಸರಿಯಾಗಿ ಕನ್ನಡ ಓದಲು ಬರೆಯಲು ಬಾರದವ ರಿಗೆ ಯಾವ ಸಂಸ್ಥೆಯೇ ಆಗಲಿ ಅರ್ಹತಾ ಪತ್ರಗಳನ್ನು ನೀಡಬಾರದು. ಈ ರೀತಿ ಸುಳ್ಳು ಅರ್ಹತಾ ಪತ್ರ ತರುವವರನ್ನು ಪತ್ತೆಹಚ್ಚಿ ಸಂಬಂಧಪಟ್ಟ ಇಲಾಖೆ ಮುಖ್ಯಸ್ಥರಿಗೆ ತಿಳಿಸಬೇಕು

೨೦. ಕರ್ನಾಟಕ ರಾಜ್ಯದಲ್ಲಿರುವ ಕೇಂದ್ರ ಸರ್ಕಾರಿ ಕಾರ್ಯಾಲಯಗಳಲ್ಲಿ ಸ್ಟಾಫ್ ಸೆಲೆಕ್ಷನ್ ಸಮಿತಿ, ರೈಲ್ವೇ ಸರ್ವಿಸ್ ಕಮಿಷನ್, ಬ್ಯಾಂಕಿಂಗ್ ಸರ್ವಿಸ್ ಕಮಿಷನ್ ಇತ್ಯಾದಿಗಳ ಮೂಲಕ ನೇಮಕಾತಿ ಮಾಡುವಾಗ ಕನ್ನಡಿಗರಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂದು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒತ್ತಾಯ ತರಬೇಕು.

೨೧. ಬೆಂಗಳೂರು ನಗರ ಹಾಗೂ ಕರ್ನಾಟಕದ ಕೆಲವು ಮುಖ್ಯ ನಗರಗಳಲ್ಲಿ ಕೆಲವು

ಅನಧಿಕೃತ ಬಡಾವಣೆಗಳಿಗೆ, ರಸ್ತೆಗಳಿಗೆ, ಸರ್ಕಲ್‌ಗಳಿಗೆ ಇಷ್ಟಬಂದಂತೆ ಹೆಸರುಗಳನ್ನು ಇಡಲಾಗಿದೆ. ಅವುಗಳನ್ನು ಬದಲಾಯಿಸಿ, ರಾಷ್ಟ್ರ ನಾಯಕರ, ಕನ್ನಡ ಸಾಹಿತಿಗಳ, ಕವಿಗಳ, ಕಲಾದವಿರ, ಮಹಾಪುರುಷರ ಹೆಸರುಗಳನ್ನಿಡಲು ಸರ್ಕಾರ ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಆದೇಶ ನೀಡಬೇಕು.

೨೨. ಶಾಲಾ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮವನ್ನು ಕಡ್ಡಾಯವಾಗಿ ಜಾರಿಗೆ ತರದೆ ಆಡಳಿತದಲ್ಲಿ ಕನ್ನಡ ಜಾರಿಗೆ ತರುವುದು ಕಷ್ಟ. ಈಗ ಶಾಲಾಕಾಲೇಜುಗಳಲ್ಲಿ ಓದುತ್ತಿರುವವರೇ ಮುಂದೆ ಆಡಳಿತದಲ್ಲಿ ಪ್ರವೇಶಿಸತಕ್ಕವರು. ಇವರಿಗೆ ಮೊದಲ ಕನ್ನಡ ಸರಿಯಾಗಿ ಬರವಿದ್ದರೆ ಮುಂದೆ ಕನ್ನಡದಲ್ಲಿ ಸರಿಯಾಗಿ ವ್ಯವಹರಿಸಲಾರರು. ಆದ್ದರಿಂದ ಸರ್ಕಾರ ರಾಜ್ಯದ ಎಲ್ಲ ಕಡೆಯೂ ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆಯಬೇಕು. ಹೊಸದಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯಲು ಅವಕಾಶ ಕೊಡಕೂಡದು. ಇರುವ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಕನ್ನಡ ಮಾಧ್ಯಮ ಶಾಲೆಗಳಾಗಿ ಪರಿವರ್ತಿಸಬೇಕು. ಯಾವ ವಿಷಯವನ್ನೇ ಆಗಲಿ, ಮಕ್ಕಳ ತನ್ನ ಮಾತೃ ಭಾಷೆಯಲ್ಲಿ ತಿಳಿಯುವಷ್ಟು ಸುಲಭವಾಗಿ ಬೇರೆ ಭಾಷೆಯಲ್ಲಿ ತಿಳಿಯಲ ಸಾಧ್ಯವಿಲ್ಲ. ಮಾತೃ ಭಾಷೆಯಲ್ಲಿ ಕಲಿಯುವುದೂ ಕಲಿಸುವುದೂ ಎರಡೂ ಸುಲಭ ಕಾಲದ ಅಪವ್ಯಯ ಮತ್ತು ಖರ್ಚು ಕಡಿಮೆ. ಇದು ಪೋಷಕರಿಗೆ ಗೊತ್ತಿದ್ದರೂ ಸಮೀಪದಲ್ಲಿ ಒಳ್ಳೆಯ ಗುಣ ಮಟ್ಟದ ಕನ್ನಡ ಮಾಧ್ಯಮ ಶಾಲೆಗಳಿಲ್ಲದಿರುವುದರಿಂದ ಬಹು ಮಂದಿ ತಂದೆ ತಾಯಿಗಳು ವಿಧಿಯಿಲ್ಲದೆ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಾರೆ. ಇದು ನಿಲ್ಲಬೇಕಾದರೆ ಸರ್ಕಾರ ಕನ್ನಡ ಮಾಧ್ಯಮ ಶಾಲೆಗಳಿಗೆ ಸರಿಯಾದ ಕಟ್ಟಡ, ಸಲಕರಣೆ, ಸಿಬ್ಬಂದಿ, ಒದಗಿಸಿ ಶಾಲೆಗಳ ಗುಣಮಟ್ಟವನ್ನು ಹೆಚ್ಚಿಸಬೇಕು.

೨೩. ಉನ್ನತ ನ್ಯಾಯಾಲಯವೂ ಸೇರಿದಂತೆ ಎಲ್ಲ ನ್ಯಾಯಾಲಯಗಳಲ್ಲೂ ಕನ್ನಡ ನಿರಾತಂಕವಾಗಿ ಬಳಕೆಯಾಗುವಂತೆ ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು.

ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಪಾತ್ರ

ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ಬರುವಲ್ಲಿ ಶಾಲಾ ಕಾಲೇಜುಗಳ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಹೊಣೆ ಹೆಚ್ಚಾಗಿದೆ. ಶಿಕ್ಷಕರಿಗಾಗಲಿ ವಿದ್ಯಾರ್ಥಿಗಳಿಗಾಗ ಶಾಲಾ ಮುಖ್ಯಸ್ಥರಿಂದ ಬರುವ ಕಾಗದ ಪತ್ರಗಳು ಕನ್ನಡದಲ್ಲೇ ಇರುವಂ ಒತ್ತಾಯಿಸಬೇಕು ಹಾಗೆ ತಾವೂ ಮೇಲಧಿಕಾರಿಗಳಿಗೆ ಕನ್ನಡದಲ್ಲೇ ಬರೆಯಬೇಕ ಶಾಲಾ ಆವರಣದಲ್ಲಿ ಹಾಕುವ ಎಲ್ಲ ನಾಮಫಲಕಗಳು ಕನ್ನಡದಲ್ಲೇ ಇರುವಂ ಸೂಚನೆ ಕೊಡಬೇಕು.

ಶಾಲಾ ಶಿಕ್ಷಕ ಸಂಘ ಮತ್ತು ವಿದ್ಯಾರ್ಥಿ ಸಂಘಗಳು ಆಡಳಿತ ವರ್ಗಕ್ಕೆ ತಮ್ಮ ಬೇಡಿಕೆಗಳನ್ನು ಸಲ್ಲಿಸುವಾಗ ಆ ಬೇಡಿಕೆಪಟ್ಟಿಯಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರತಕ್ಕದೆಂಬ ಅಂಶವನ್ನೂ ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆಯಬೇಕೆಂಬ ವಿಷಯವನ್ನು ಸೇರಿಸಬೇಕು.

ಕಾರ್ಮಿಕರ ಹೊಣೆ

ಕನ್ನಡಿಗರಿಗೇ ಅಥವಾ ಕನ್ನಡ ಬಲ್ಲವರಿಗೇ ಕಾರ್ಖಾನೆಗಳಲ್ಲಿ ಉದ್ಯೋಗ ದೊರೆಯಬೇಕೆಂಬ ನಿಜವಾದ ಕಳಕಳಿ ಕಾರ್ಮಿಕರಿಗೆ ಇರುವುದಾದರೆ ಅಂಥ ಕಾರ್ಖಾನೆಗಳಲ್ಲಿ ಕನ್ನಡದ ವಾತಾವರಣ ನಿರ್ಮಿಸಲು ಮೊದಲು ಗಮನಕೊಡಬೇಕು. ಕಾರ್ಮಿಕ ಸಂಘಗಳಲ್ಲಿ ಆಗುವ ಚರ್ಚೆ, ನಿರ್ಣಯ, ಭಾಷಣ, ಮೇಲಧಿಕಾರಿಗಳೊಡನೆ ನಡೆಸುವ ಮಾತುಕತೆ, ಪತ್ರವ್ಯವಹಾರ ಉಭಯತಾಪಿ ಎಲ್ಲವು ಕನ್ನಡದಲ್ಲೇ ಆಗಬೇಕು. ಕಾರ್ಖಾನೆಯ ಆವರಣದಲ್ಲಿ ಕಾಣುವ ಎಲ್ಲ ನಾಮಫಲಕಗಳೂ ಕಾರ್ಖಾನೆಯ ವಾಹನಗಳ ಮೇಲೆ ಬರೆಯುವ ಹೆಸರುಗಳೂ ಕನ್ನಡದಲ್ಲೇ ಇರಬೇಕು.

ಕಾರ್ಖಾನೆಯ ಮುಖ್ಯಸ್ಥರ ಮುಂದೆ ಕಾರ್ಮಿಕ ಸಂಘಗಳು ಇಡುವ ಬೇಡಿಕೆಗಳ ಪಟ್ಟಿಯಲ್ಲಿ ತಾವು ಕೆಲಸ ಮಾಡುತ್ತಿರುವ ಕಾರ್ಖಾನೆಯಲ್ಲಿ ಹಾಗೂ ಸರ್ಕಾರದ ಆಡಳಿತದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಕೂಡಲೆ ಜಾರಿಗೆ ಬರಬೇಕೆಂಬ ಅಂಶವೂ ಸೇರ್ಪಡೆಯಾಗಬೇಕು.

ರೈತ ಸಂಘಗಳ ಜವಾಬ್ದಾರಿ

ರೈತ ಬೆಳೆದ ಪದಾರ್ಥಗಳಿಗೆ ಸರಿಯಾದ ಬೆಲೆ ದೊರೆಯದಿರುವುದು, ಅವನು ಕೊಳ್ಳುವ ಎಲ್ಲ ಪದಾರ್ಥಗಳ ಬೆಲೆ ಏರಿರುವುದು, ತೆರಿಗೆ ಹೊರೆ ಇತ್ಯಾದಿ–ಇವಿಷ್ಟೇ ಇಂದು ರೈತರ ಸಮಸ್ಯೆಗಳಲ್ಲ. ದಿನಬೆಳಗಾದರೆ ರೈತ ಒಂದಲ್ಲ ಒಂದು ಕಾರಣಕ್ಕಾಗಿ ಪ್ರತಿದಿನ ಸರ್ಕಾರಿ ಕಚೇರಿಗಳ ಮೆಟ್ಟಿಲು ಹತ್ತಬೇಕಾಗಿದೆ. ಅಲ್ಲಿ ಇವನಿಗೆ ದೊರೆಯುವ ಸ್ವಾಗತ ಇಂಗ್ಲಿಷಿನಲ್ಲಿ. ಕರ್ನಾಟಕದಲ್ಲಿ ಶೇಕಡ ೭೦ ಕ್ಕಿಂತ ಹೆಚ್ಚುಭಾಗ ರೈತರಿದ್ದಾರೆ. ಇವರೆಲ್ಲರಿಗೂ ಕನ್ನಡ ಬರುತ್ತದೆ. ರಾಜ್ಯಭಾಷೆಯು ಕನ್ನಡವೇ ಆಗಿದೆ. ಆದರೂ ಸರ್ಕಾರದ ಅನೇಕ ವ್ಯವಹಾರಗಳು ಇನ್ನೂ ಇಂಗ್ಲಿಷಿನಲ್ಲಿಯೇ ನಡೆಯುತ್ತಿರುವುದರಿಂದ ಬರೀ ಕನ್ನಡಬಲ್ಲ ರೈತವರ್ಗ ಅನ್ಯರ ಆಶ್ರಯಪಡೆದು ತನಗೆ ತಿಳಿಯದ ಇಂಗ್ಲಿಷ್ ಭಾಷೆಯ ಮೂಲಕ ವ್ಯವಹರಿಸಬೇಕಾಗಿದೆ. ಇಂಗ್ಲಿಷಿನ ಈ ಗುಲಾಮಗಿರಿಯಿಂದ ಪಾರಾದ ಹೊರತು ನಮ್ಮ ರೈತರಿಗೆ ಮೋಕ್ಷವಿಲ್ಲ. ಕನ್ನಡ ಭಾಷೆಯಲ್ಲಿಯೇ ರೈತನಿಗೆ ಸಂಬಂಧಪಟ್ಟ ಎಲ್ಲ ವ್ಯವಹಾರಗಳು ನಡೆಯುವುದಾದರೆ ಭಾಷೆ ಗೊತ್ತಿರುವುದರಿಂದ ತನ್ನ ಸಮಸ್ಯೆಗೆ ಪರಿಹಾರೋಪಾಯವನ್ನು ತಾನೇ ಸುಲಭವಾಗಿ ಕಂಡು ಹಿಡಿದು ಕೊಳ್ಳುತ್ತಾನೆ ಇದು ರೈತರ ಸಮಸ್ಯೆ ಅಹುದೋ ಅಲ್ಲವೋ ?

ಆದುದರಿಂದ ಕರ್ನಾಟಕದಲ್ಲಿ ರೈತರ ಏಳಿಗೆಗಾಗಿ ಶ್ರಮಿಸುತ್ತಿರುವ ಎಲ್ಲ ರೈತ ಸಂಘಗಳು ಆಡಳಿತ ಭಾಷೆಯಾಗಿ ಕನ್ನಡ ಕೂಡಲೇ ಜಾರಿಗೆ ಬರತಕ್ಕದೆಂದು ಮತ್ತು ಇನ್ನು ಮುಂದೆ ಎಲ್ಲ ಪತ್ರವ್ಯವಹಾರಗಳು ಕಡ್ಡಾಯವಾಗಿ ಕನ್ನಡದಲ್ಲೇ ನಡೆಯು ತಕ್ಕದೆಂದೂ ತಮ್ಮ ಬೇಡಿಕೆಗಳಲ್ಲಿ ಸೇರಿಸಬೇಕು.

ರಾಜಕೀಯ ಪಕ್ಷಗಳ ಮಾಡಬೇಕಾದುದೇನು ?

ಕರ್ನಾಟಕದಲ್ಲಿರುವ ರಾಜಕೀಯ ಪಕ್ಷಗಳು ತಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆ ಯಲ್ಲಿ ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಅನುಷ್ಠಾನಕ್ಕೆ ತರಲು ತಮ್ಮ ಪಕ್ಷ ನಿಷ್ಠೆಯಿಂದ ದುಡಿಯುವುದಾಗಿ ಘೋಷಿಸಬೇಕು. ಮತ್ತು ಕನ್ನಡ ಬಲ್ಲವರನ್ನೇ ಉಮೇದುವಾರರನ್ನಾಗಿ ನಿಲ್ಲಿಸಬೇಕು.

ಕನ್ನಡ ಸಂಘ ಸಂಸ್ಥೆಗಳ ಕರ್ತವ್ಯ

ಕನ್ನಡ ಜಾರಿಗೆ ಬರಲು ಸರ್ಕಾರ ಮಾಡಬೇಕಾದ ಕೆಲಸಗಳ ಒಂದು ಪಟ್ಟಿ ಯನ್ನು ಮೇಲೆ ಕೊಟ್ಟಿದೆ. ಇದು ಸಂಪೂರ್ಣ ಪಟ್ಟಿ ಅಲ್ಲ. ಸಂಘ ಸಂಸ್ಥೆಗಳು ಕನ್ನಡ ಆಡಳಿತ ಭಾಷೆ ಸಮಸ್ಯೆಯನ್ನು ಇನ್ನಷ್ಟು ಕೂಲಂಕಷವಾಗಿ ಅರ್ಥಮಾಡಿ ಕೊಂಡು ಸಂಘಟನೆಯಿಂದ ಕಾರ್ಯಪ್ರವೃತ್ತರಾಗಬೇಕು.

೧. ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಹೊಸದಾಗಿ ಸಮಿತಿಗಳನ್ನು ರಚಿಸಿ ಅಥವಾ ಹಾಲಿ ಇರುವ ಕನ್ನಡ ಸಂಘ ಸಂಸ್ಥೆಗಳೆ ಜವಾಬ್ದಾರಿ ವಹಿಸಿಕೊಂಡು ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರುವಲ್ಲಿ ಈವರೆಗೆ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ, ಸುತ್ತೋಲೆಗಳ ಒಂದೊಂದು ಪ್ರತಿಯನ್ನು **ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೪-೩ಅ, ನೃಪತುಂಗ ರಸ್ತೆ, ಬೆಂಗಳೂರು -೫೬೦೦೦೨** ಇವರಿಗೆ ಬರೆದು ತರಿಸಿಕೊಳ್ಳಬೇಕು.

೨. ಸರ್ಕಾರದ ಆದೇಶದ ಪ್ರಕಾರ ಅಧಿಕಾರಿಗಳು ಕನ್ನಡವನ್ನು ಜಾರಿಗೆ ತರುವಲ್ಲಿ ಆಯಾ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕ್ರಮ ತೆಗೆದುಕೊಂಡಿದ್ದಾರೆಯೇ ? ಇಲ್ಲವೆ ? ಎನ್ನುವುದನ್ನು ಪತ್ತೆ ಹಚ್ಚಬೇಕು. ರೈತರು, ವ್ಯಾಪಾರಿಗಳು, ಕಾರ್ಮಿಕರು ಹಾಗೂ ಇನ್ನಿತರ ಕ್ಷೇತ್ರದ ಜನರನ್ನು ಭೇಟಿ ಮಾಡಿ, ಸರ್ಕಾರದ ಆದೇಶದಂತೆ ಕನ್ನಡದಲ್ಲಿ ವ್ಯವಹಾರ ನಡೆದಿದೆಯೇ ಇಲ್ಲವೇ ಎಂಬುದನ್ನು ಕಂಡುಹಿಡಿದು, ಅದು ನಡೆಯದಿದ್ದಲ್ಲಿ ಸಂಬಂಧ ಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕು. ತಾಲ್ಲೂಕು ಮಟ್ಟದಲ್ಲಿ ತಾಸೀಲ್ದಾರರು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಬಳಿಗೆ ಜಾಥಾ ಹೋಗಿ ನಿಜಸ್ಥಿತಿ ತಿಳಿಸಬೇಕು.

೩. ಬಹಿರಂಗ ಸಭೆಗಳನ್ನು ಏರ್ಪಡಿಸಿ, ಕನ್ನಡವನ್ನು ಜಾರಿಗೊಳಿಸುವ ಬಗ್ಗೆ ಸರ್ಕಾರದ ಆದೇಶ, ಅಧಿಕಾರಿಗಳ ಕರ್ತವ್ಯ ಇವುಗಳನ್ನು ಒತ್ತಿ ಹೇಳಿ ಕನ್ನಡ ಜಾರಿಗೆ ಬರಲು ಜನರ ಸಹಕಾರ ದೊರೆಯುವಂತೆ ಮಾಡಬೇಕು.

೪. ನಮ್ಮ ನಾಡಿನಲ್ಲಿ ಅಧಿಕ ಸಂಖ್ಯೆಯಲ್ಲಿ ರೈತರು ಮತ್ತು ಕಾರ್ಮಿಕರು ಇರುವು ದರಿಂದ ಆಡಳಿತ ಭಾಷೆ ಕನ್ನಡ ಆಗುವುದರಿಂದ ಅವರಿಗೆ ಆಗುವ ಪ್ರಯೋಜನವನ್ನು ತಿಳಿಸಿ ಹೇಳಿ ಅವರ ಸಹಕಾರವನ್ನು ಪಡೆದು, ಅವರಲ್ಲಿ ಸಂಘಟನೆ ಉಂಟು ಮಾಡಬೇಕು.

೫. ಕನ್ನಡದ ವಾತಾವರಣ ನಿರ್ಮಿಸುವುದರಲ್ಲಿ ಕನ್ನಡ ನಾಮಫಲಕಗಳ ಪಾತ್ರ ದೊಡ್ಡದು. ಕನ್ನಡ ವಿಶ್ವ ಸಮ್ಮೇಳನ ನಡೆಯುವುದರೊಳಗೆ ಬೆಂಗಳೂರು ನಗರದಲ್ಲಿ ಹಾಗೂ ಕರ್ನಾಟಕದ ಎಲ್ಲ ಭಾಗಗಳಲ್ಲಿ ಕನ್ನಡ ನಾಮ ಫಲಕಗಳು ಗೋಚರಿಸುವಂತೆ ಆಯಾ ಪ್ರದೇಶಗಳ ಸಂಘ ಸಂಸ್ಥೆಗಳು ಸೇರಿ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ರೂಪಿಸಬೇಕು.

೬. ಕನ್ನಡಿಗರಾಗಲೀ ಕನ್ನಡೇತರರಾಗಲೀ ಕನ್ನಡ ನಾಡಿನಲ್ಲಿ ನಿಜವಾದ ಕನ್ನಡಿಗ ರಾಗಿ ಬಾಳಲು ಪತ್ರ ವ್ಯವಹಾರ, ಮಾತುಕತೆ ಎಲ್ಲದರಲ್ಲೂ ಕನ್ನಡಕ್ಕೇ ಪ್ರಾಶಸ್ತ್ಯ ನೀಡಬೇಕೆಂದು ಮನವಿ ಮಾಡಿಕೊಳ್ಳಬೇಕು.

ಹೀಗೆ ಕನ್ನಡ ಆಡಳಿತಭಾಷೆಯಾಗಿ ಜಾರಿಗೆ ಬರಲು ಒಂದು ನಿರ್ದಿಷ್ಟವಾದ ಯೋಜ ನೆಯನ್ನು ತಯಾರಿಸಿ ಕಾರ್ಯಪ್ರವೃತ್ತರಾದಲ್ಲಿ ಆದಷ್ಟು ಬೇಗ ಕನ್ನಡ ಎಲ್ಲ ಕಡೆಯೂ ವಿಜೃಂಭಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಕನ್ನಡದ ವಾತಾವರಣ ಮೂಡಿಸಲು ಎಲ್ಲ ಸಂದರ್ಭಗಳಲ್ಲು ಕಾನೂನೇ ಕೆಲಸ ಮಾಡಲಾರದು. ಕನ್ನಡದ ನಿಷ್ಠೆ ಇದ್ದರೆ ಸಾಕು, ಕನ್ನಡಕ್ಕಾಗಿ ಕೆಲಸ ಮಾಡುವ ಸಂಘ ಸಂಸ್ಥೆಗಳು ಕನ್ನಡ ಹಿತರಕ್ಷಣೆಯ ಸೇನಾನಿಗಳುತಿದ್ದು, ಕನ್ನಡದ ಪರವಾಗಿ ಜನಾಭಿಪ್ರಾಯ ರೂಢಿಸುವ ಜವಾಬ್ದಾರಿ ವಹಿಸಬೇಕು. ●

ಬರಗಾಲದ ಹಾಡು

ಜಂಬಣ್ಣ ಅಮರಚಿಂತ

೧

ಹುಯ್ಯೋ ಹುಯ್ಯೋ ಮಳೆರಾಯ
ಹುಯ್ಯೋ ಮತ್ತೊಮ್ಮೆ ಮಳೆರಾಯ
ನೀ ಹೊಯ್ದ್ದರೆ ಮಣ್ಣಿನ ಜೀವ ತೊಯ್ದಾವ
ಆದಾವು ಧಗಿವಡಾಯ–ಮಳೆರಾಯ

೨

ಬೆಟ್ಟೆಂಬು ಬ್ಯಾಸಿಗಿ ಮಳೆರಾಯ
ತಲಿ ಚಿಟ್ಟಂತ ಸಿಡ್ದಾವ ಮಳೆರಾಯ
ಕಾದ ಹಂಚಿನ ವಾಗ್ಯ ಕಾಳುರುಂಧಂಗ
ಬಾಳೆಲ್ಲ ಉರುಂದಾವ ಮಳೆರಾಯ

೩

ಹಸ್ರು ಹೆಸ್ರಿಗಿಲ್ಲ ಮಳೆರಾಯ
ದುಸ್ರು ಧೂಳೊಂದೈತಿ ಮಳೆರಾಯ
ಪಿಟ್ಟ ಪಿಡಂಗಲೆ ದನಗೋಳು ಸತ್ತಾವ
ಹದ್ದೀನ ಗದ್ದಲ ಮಳೆರಾಯ

೪

ಬಂತಪ್ಪ ಬರಬಂತು ಮಳೆರಾಯ
ಆ'ಡೋಗಿ' ಬರ ಬಂತು ಮಳೆರಾಯ
ನಾಡೆಂಬ ನಾಡ ನಡು ಮುರುದ್ಯೈತಿ
ಜನ ಗೂಳೆ ಹೊಂಟೈತಿ ಮಳೆರಾಯ

೫

ಒಕ್ಕಲು ಮಕ್ಕಳು ಮಳೆರಾಯ
ಅವ್ರು ಬಿಕ್ಕೆ ಬೇಡುತಾರ ಮಳೆರಾಯ
ಅಂಬಲಿ ಕೊಡೋನು ಅರದೇಶಿ ಪರದೇಶಿ
ನಾಕ ದೇಶದ ಕೋಶ ಮಳೆರಾಯ.

೬

ಗಂಡುಳ್ಳ ಬಾಲೇರು ಮಳೆರಾಯ
ಅವ್ರು ಸಡಕಿಗೆ ನಿಂತಾರ ಮಳೆರಾಯ
ಅಂದ ಚಂದದ ಬದುಕು ಮಳೆರಾಯ
ಆಯುಷ್ಯ ಒತ್ತಿಟ್ಟ ವಸ್ತ ಮಳೆರಾಯ.

೭

ಸಣ್ಣಾನ ಚುಕ್ಕೋಳು ಮಳೆರಾಯ
ಅವ್ರು ಸುಣ್ಣಾಗಿ ಸವ್ದಾರ ಮಳೆರಾಯ
ಆ ಸುಣ್ಣನ್ನ–ಬಣ್ಣಂತ ಬಲ್ತ ಮಂದಿ
ಮನೆ ಮನೆಗೆ ಬಳುದಾರ ಮಳೆರಾಯ.

೮

ಅನ್ನ ಬರುವಲ್ಲಿ ಮಳೆರಾಯ
ಒಂದು ಗಿದ್ನ ಬರ್ಲಿಲ್ಲ ಮಳೆರಾಯ
ಎದ್ದು ಹಾರ್ಯಾದ ಹದ್ದು ಧಾರಿಣಿ
ಬದುಕು ಗೆದ್ಲ ಪಾಲು ಮಳೆರಾಯ.

೯

ಬಂದ ಬರಕ್ಕಿಂತ ಮಳೆರಾಯ
ತಂದ ಬರವೇ ಹೆಚ್ಚು ಮಳೆರಾಯ
ದುಡ್ಡಿದ್ದವ ದುನಿಯಾ ನಂದಂದ
ಬಡವ ಮಸಂಟಿಗೆ ಮಳೆರಾಯ

೧೦

ಹತ್ತು ಕಡೆಗೀನೂ ಮಳೆರಾಯ
ಕಿತ್ತು ತಿನ್ನೋ ನೋವು ಮಳೆರಾಯ
ಹದ್ದು ಯಾವುದು ? ಮನಿಷ ಯಾವನು ?
ಒಂದೂ ತಿಳಿವಲ್ದು ಮಳೆರಾಯ.

೧೧

ಕೊಟ್ಟಾರೆ ಕೊಟ್ಟೆವು ಮಳೆರಾಯ
ನಿನಗೆ ಕೊಡಲೇನಿಲ್ಲ ಮಳೆರಾಯ
ಕೊಟ್ಟೇವೆಂದ್ರೂ ತುಂಬಿ ಕಣ್ಣೀರು
ಕಣ್ಣಾಗ ನೀರಿಲ್ಲ ಮಳೆರಾಯ.

೧೨

ಕಪ್ಪಾನ ಮೈಬಣ್ಣ ಮಳೆರಾಯ.
ನಿನ್ಗ ಕಾಣೀಕಿ ಕೊಟ್ಟೇವು ಮಳೆರಾಯ
ಮೈಯಾನ ಬೆವರು ಧಾರಿ ಎರೆದೇವು
ಬಾ; ನಮ್ಮ ತಬ್ಬಿಕೋ ಮಳೆರಾಯ

೧೩

ಹೊಟ್ಯಾನ ಸಿಟ್ಟು ಮಳೆರಾಯ
ಸಿಡ್ಲು ಮಾಡಿಕೊಟ್ಟೇವು ಮಳೆರಾಯ
ಉಗಿಯಾಗಿ ಎದ್ದ ಬಡವರ ಬದುಕು
ಮೋಡ ಮಾಡಿಕೋ ಮಳೆರಾಯ.

೧೪

ಹುಯ್ಯೋ ಹುಯ್ಯೋ ಮಳೆರಾಯ
ಹುಯ್ಯೋ ಮುತ್ತೊಮ್ಮೆ ಮಳೆರಾಯ
ನೀ ಹೊಯ್ದ್ರೆ ಮಣ್ಣಜೀವ ತೊಯ್ದಾವು
ಆದಾವು ಧಗಿಮಾಯ ಮಳೆರಾಯ.

ಶಾಂತರಸರ 'ಬಡೇಸಾಬು ಪುರಾಣ'

ಒಂದು ಪರಿಶೀಲನೆ

ಎಸ್. ಶಿವಾನಂದ

ಶಾಂತರಸರ 'ಬಡೇಸಾಬು ಪುರಾಣ' ಕಥಾ ಸಂಕಲನದಲ್ಲಿನ ಐದೂ ಕತೆಗಳು [ಸಂಕ್ರಮಣ ಪ್ರಕಾಶನ, ಧಾರವಾಡ] ಮೇಲ್ನೋಟಕ್ಕೆ ಹಾದರದ ಕತೆಗಳು ಎಂಬಂತೆ ಗೋಚರಿಸುತ್ತವೆ. ಆದರೆ ಗಂಭೀರವಾಗಿ ಪರಿಶೀಲಿಸಿದರೆ, ಊಳಿಗಮಾನ್ಯ ಸಂಸ್ಕೃತಿಯೊಳಗಿನ ಗಂಡು–ಹೆಣ್ಣಿನ ವಿಲಕ್ಷಣ ಸಂಬಂಧಗಳ ಸ್ವರೂಪವನ್ನು ಈ ಕತೆಗಳು ಕಟ್ಟಿಕೊಡುತ್ತವೆ.

ಮೊದಲ ಕತೆ 'ಮಾಯಿ ಅಂದ್ರೆ ಮಾಯಿ'ಯಲ್ಲಿ ಇದು ನಿಚ್ಚಳವಾಗಿ ಒಡಮೂಡಿದೆ. ಮುದಿಗೌಡನ ಮೂರನೆಯ ಹೆಂಡತಿಯಾಗಿ ಬರುವ ರಾಜಮ್ಮ, ಗೌಡನ ಅಂತಸ್ತು, ವೇದಾಂತದ ಬಡಿವಾರಗಳನ್ನು ಧಿಕ್ಕರಿಸಿ, ಅವನ ಮುದಿತನಕ್ಕೆ ಮತ್ತು ಕಾಮುಕ ಹಿಂಸೆಗೆ ಒದ್ದು, ತನ್ನ ಹೃದಯದ ಸಹಜ ಸ್ಪಂದನಕ್ಕೆ ಓಗೊಟ್ಟು ಓಡಿಹೋಗುತ್ತಾಳೆ. ಸ್ಥೂಲವಾಗಿ ಇದಿಷ್ಟು ಕತೆಯ ವಸ್ತು. ಗೌಡ ಹದಿ ಹರೆಯದ ರಾಜಮ್ಮಗೆ 'ರಾಕ್ಷಸ'ನಾಗಿ ಕಾಣುತ್ತಾನೆ [ಪುಟ ೨೩, ೪೪, ೪೫]; ಹಾಗೆಯೇ ಗಂಗಣ್ಣನನ್ನು ತನ್ನ ಏಕಾಂತತೆಯ ತೀವ್ರ ಕ್ಷಣಗಳಲ್ಲಿ ಹಂಬಲಿಸುತ್ತಾಳೆ [ಪುಟ ೨೩, ೨೭, ೩೮]: "ಗಂಗ್ಯಾ, ನಿನ್ನ ಮದ್ವಾಗಿದ್ರೆ ಎಷ್ಟ ಚೆಲೋ ಇತ್ತಲ್ಲೋ ? ಎಲ್ಲಿಗ್ಹೋದೋ ? ಹ್ಯಾಂಗಿರ್ಲೀ ನಿನ್ನ ಬುಟ್ಟು." ಗಂಗಣ್ಣ– ಏಳು ಸಮುದ್ರ ದಾಟಿ ಬಂದು, 'ರಾಕ್ಷಸ'ನ ಭದ್ರ ಕೋಟೆಯಿಂದ ರಾಜಮ್ಮನನ್ನು ಬಿಡುಗಡೆ ಮಾಡಿ, ಸುಖದ ತಾಣಕ್ಕೆ ಕರೆದೊಯ್ಯುವ 'ರಾಜಕುಮಾರ'ನಾಗಿ ಬರುತ್ತಾನೆ. ಅಜ್ಜೀ ಕತೆಗಳಲ್ಲಿ ಬರುವ ಇಂಥ ವಿನ್ಯಾಸ (Pattern) ಇಲ್ಲಿ ಗೋಚರಿಸುತ್ತದೆ. ಹೆಣ್ಣನ್ನು ಕುರಿತು ಪ್ಯೂಡಲ್ ಧೋರಣೆ-ವರ್ತನೆಗಳಿಗೆ ಗೌಡನ ಪಾತ್ರ ಒಂದು ಘನೀಭೂತ ಗನ್ನಡಿಯಾಗಿದೆ. ಅವನಿಗೆ ಹೆಣ್ಣು ಕಾಮದ ಒಂದು ಉಪಕರಣ ಹಾಗೂ ಪ್ರತಿಷ್ಠೆಯ ವಸ್ತು: ಅವನ

'ಆಸ್ತಿ'ಗೆ ಮತ್ತೊಂದು ಸೇರ್ಪಡೆ. "ಅದೇನು ಹೆಣ್ಣು, ಹೇಳಿದಂಗ ಕೇಳಿಕೊಂಡು ಬಿದ್ದಿ ಬೇಗಕಾದದು"–ಗೌಡನ ಇಂಥ ಮಾತು ಗಂಡು-ಹೆಣ್ಣಿನ ನಡುವಣ ಊಳಿಗ ಶಾಹೀ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ.

ಲೈಂಗಿಕ ಸಂಬಂಧಗಳ ವಿಕೃತ ಹಿಡಿತಗಳಿಂದ ಪಾರಾಗಿ, ತನ್ನ ಪ್ರೀತಿಯ ಆಪ್ತನೆಲೆಯನ್ನು ಕಂಡುಕೊಳ್ಳುವ ಇಲ್ಲಿನ ರಾಚಮ್ಮನ ಹೊಯ್ದಾಟ ಜೀವಪರ ಧೋರಣೆಯನ್ನು ಪ್ರಕಟಿಸುತ್ತದೆ. ಆದರೆ ಕತೆಯ ಪ್ರಾರಂಭದಲ್ಲಿ ಬರುವ ಸಿದ್ಲಿಂಗನ ಪ್ರಕರಣ ಅವಳ ಲೈಂಗಿಕ ವಿಕ್ಷಿಪ್ತತೆಯನ್ನು ಪ್ರಕಟಿಸಿದರೂ, ಮುಂದಿನ ಅವಳ ಮತ್ತು ಗಂಗಣ್ಣನ ನಡುವಿನ ಬೆಚ್ಚನೆಯ ಸಂಬಂಧದ ಬೆಳವಣಿಗೆಯ ದೃಷ್ಟಿಯಿಂದ ಅಷ್ಟೇನೂ ಔಚಿತ್ಯ ಎನ್ನಿಸುವುದಿಲ್ಲ. ಕಾಮಪಿಪಾಸುವಾಗಿ ತನ್ನ ಮೇಲೆ ಆಕ್ರಮಣ ನಡೆಸುವ ಗೌಡನನ್ನು ಅತ್ತ ತುಚ್ಛೀಕರಿಸಿ, ಇತ್ತ ಅಡಿಗೆಯಾಳು ಸಿದ್ಲಿಂಗನೊಡನೆ ತಾನೂ ಕಾಮ ಪಿಪಾಸುವಿನಂತೆ ವರ್ತಿಸುವುದು ಮತ್ತು ಸಿದ್ಲಿಂಗ ಅವಳನ್ನು ನಿರಾಕರಿಸುವುದು: ಇಡೀ ಪ್ರಕರಣ ಕೇವಲ anti-climaxನ್ನು ವೈಭವೀಕರಿಸುವುದಕ್ಕೋಸ್ಕರ ಬರುತ್ತದೆ. ಪುಟಗಟ್ಟಲೆ ತೋಡಿಕೊಳ್ಳುವ ಪಾತ್ರಗಳ ಸ್ವಗತ, ಫ್ಲಾಶ್‌ಬ್ಯಾಕ್ ಮತ್ತು ಕತೆಗಾರರ ಉದ್ದುದ್ದ ನಿರೂಪಣೆ ಹಾಗೂ ಸಂಭಾಷಣೆಯಲ್ಲೇ ಅಭಿವ್ಯಕ್ತಿ ಗಿರಕಿ ಹೊಡೆಯುವಿಕೆ ಇಂತಹ ಸರಳ ರೂಪದ ತಂತ್ರಗಳಿಂದಾಗಿ ಕತೆ ದೊಡ್ಡದಾಗಿ ಉಬ್ಬಿಕೊಂಡಿದೆ. ಸಾಮಾನ್ಯವಾಗಿ ಇಲ್ಲಿನ ಎಲ್ಲಾ ಕತೆಗಳಲ್ಲೂ ಇವು ಎದ್ದು ಕಾಣುವ ದೌರ್ಬಲ್ಯಗಳು.

'ಕಿಡಿ' ಕತೆ ಗಂಡು-ಹೆಣ್ಣಿನ ಸಂಬಂಧಗಳ ಮತ್ತೊಂದು ರೂಪವನ್ನು ತೆರೆಯುತ್ತದೆ. ಫ್ಯೂಡಲ್ ಸಂಸ್ಕೃತಿಯಲ್ಲಿ ಕಟ್ಟಿಕೊಂಡವಳಿಗಿಂತ ಇನ್ನೊಬ್ಬಳನ್ನು ಇಟ್ಟುಕೊಳ್ಳುವುದೇ 'ಪ್ರತಿಷ್ಠೆ'ಯ ಮೌಲ್ಯವಾಗಿ ಪರಿಣಮಿಸಿರುತ್ತದೆ. ಪ್ರಸ್ತುತ ಕತೆಯಲ್ಲಿ ತನಗಿಷ್ಟನಾದ ಗಂಡಸನ್ನೇ ಹಠತೊಟ್ಟು ಇಟ್ಟುಕೊಳ್ಳುವ ಸೂಗಮ್ಮ ಇಂಥ ಮೌಲ್ಯದ ಅಸ್ತಿತ್ವ ಇರುವುದರಿಂದಲೇ. ಅದರಿಂದಾಗೇ ಬುದ್ಧಿವಂತೆಪ್ಪನ ಹೆಂಡತಿಯ ಚಕಾರ ಕತೆಯಲ್ಲಿ ಕೇಳಿ ಬರುವುದೇ ಇಲ್ಲ; ಹಾಗೂ ಸೂಗಮ್ಮನ ಗಂಡ ರಾಚಪ್ಪನಾಗಲಿ, ಬಾಲವ್ವನ ಗಂಡ ಬುಡ್ಡೆಪ್ಪನಾಗಲಿ ದುರ್ಬಲರಾಗಿ, ಅಸಹಾಯಕರಾಗಿ ಉಳಿಯುತ್ತಾರೆ. ಇವರಿಂದ ಹೊಮ್ಮುವ ಅಂಶವೆಂದರೆ ವೈವಾಹಿಕ ಸಂಬಂಧಗಳು ನೀರಸವಾಗಿಯೂ, ನಿಸ್ಸತ್ವವಾಗಿಯೂ ಪರಿಣಮಿಸಿ, ವಿವಾಹೇತರ ಸಂಬಂಧಗಳೇ ಬೆಚ್ಚನೆಯ ತೀಟೆ-ಕ್ರಿಯೆಗಳಾಗುವುದನ್ನು ಸೂಚಿಸುತ್ತದೆ. ಬಲವುಳ್ಳವರ ಇಂಥ ಮೌಲ್ಯದಡಿಯಲ್ಲಿ ಬಾಲವ್ವ ಮತ್ತು ಆಕೆಯ ಗಂಡ ಬುಡ್ಡೆಪ್ಪನಂತಹವರು ಬಲಿಪಶುಗಳಾಗಿ ಉಳಿಯುತ್ತಾರೆ. ಇಡೀ ಊರೇ ಹಾದರಕ್ಕೆ ಜೊಲ್ಲು ಸುರಿಸುತ್ತದೆ; ಹೆಣ್ಣು-ಹೆಂಡ-ಹಾದರ-ಜಗಳಗಳ ಜಗತ್ತು ಕತೆಯಲ್ಲಿ ವಿಜೃಂಭಿಸುತ್ತದೆ.

ಆದರೆ ಕತೆಯ ವಸ್ತುವಿನಲ್ಲಿ ಗಹನತೆ ಇಲ್ಲದಿರುವುದರಿಂದಾಗಿ ವಿಪರೀತ ಬೋಜಿ ಕೊಳ್ಳುತ್ತ ಬೆಳೆದಿದೆ. ಕಥಾರಚನೆಯಲ್ಲಿ, ಮೊದಲಿನ ಕತೆಯಂತೆಯೇ, ಸಡಿಲತನ ಹಾಸಿಕೊಂಡಿದೆ. ಕತೆ ಐದು ಭಾಗಗಳಲ್ಲಿ ಹರಿದಿದ್ದರೂ, ಮೊದಲ ಭಾಗದಲ್ಲಿ ಶುರುವಾದ ಕತೆ ಐದನೇ ಭಾಗದಿಂದ ಮಾತ್ರ ಚಾಲೂ ಆಗುತ್ತದೆ; ನಡುವಿನ ೨, ೩, ೪ ನೇ ಭಾಗಗಳಲ್ಲಿ ಬರೀ ಫ್ಲಾಶ್ ಬ್ಯಾಕ್ ತಂತ್ರ ಹರಡಿಕೊಂಡಿದೆ ವಿವರಗಳ ಸರಕು ಪ್ರಾದೇಶಿಕತೆಗೆ ಮೆರಗು ಕೊಟ್ಟರೂ, ಕತೆಯ ಒಟ್ಟಂದಕ್ಕೆ ದುಡಿಯದೇ ಇದ್ದಾಗ ಕತೆಗಾರಿಕೆಯಲ್ಲಿ ಶಿಸ್ತು ಕಾಣಿಸುವುದಿಲ್ಲ.

ಹಾಗೆ ನೋಡಿದರೆ, ಸಂಕಲನದಲ್ಲಿ ಮನ ಸೆಳೆಯುವ ಒಂದು ಉತ್ತಮ ಕತೆ ಎಂದರೆ 'ಮಲ್ಕವ್ವ'. ಹಾದರಕ್ಕೆಳೆಯುವ ಗಂಡ ಮತ್ತು ಸಮಾಜದ ನಡುವೆ ಇದ್ದು ಕೊಂಡೇ ತನ್ನ ದುರ್ಭರ ಸನ್ನಿವೇಶಗಳಲ್ಲೂ ಮಲ್ಕವ್ವ ನೈತಿಕ ಗಟ್ಟಿತನ ಪಡೆಯುತ್ತ ಹೋಗುತ್ತಾಳೆ. ಕತೆಯಲ್ಲಿ ಬರುವ ಸನ್ನಿವೇಶ–ಘಟನೆಗಳು ವಾಸ್ತವತೆಯ ಪರಿ–ಸ್ಥಿತಿಗಳಲ್ಲಿ ಉಜ್ಜಿಕೊಳ್ಳುತ್ತ ಬೆಳೆಯುತ್ತಾ ಹೋಗುವ ಪರಿ ಕತೆಗಾರಿಕೆಯಲ್ಲಿನ ಸಂಯಮವನ್ನು ತೋರಿಸುತ್ತದೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಆರ್ಥಿಕ ಶೋಷಣೆ–ಕ್ರೌರ್ಯ ಲೈಂಗಿಕ ಶೋಷಣೆಯನ್ನೂ ತಳುಕು ಹಾಕಿಕೊಂಡಿರುತ್ತದೆ ಎಂಬ ಅಂಶವನ್ನು ಕತೆ ಬಯಲಿಗಿಡುತ್ತದೆ. ಸಾಲದ ಬೇಬಾಕಿಗಾಗಿ ಅವಳನ್ನು ಭೋಗಿಸಲು ಬರುವ ಗುರಪ್ಪ, ಸಂಗಪ್ಪ, ಕುಂಟಲಗಿತ್ತಿ ಈರವ್ವ ಮತ್ತು ಗಂಡ— ಇವರೆಲ್ಲ ಅಸಹಾಯಕ ಹೆಣ್ಣಿನ ಮೇಲೆ ಆಕ್ರಮಣ ನಡೆಸುವ ಶಕ್ತಿಗಳಾಗಿ ನಿಲ್ಲುತ್ತಾರೆ ಇವರಿಗೆ ಆಕೆ ಕೇವಲ 'ಭೋಗವಸ್ತು'ವಾಗಿ ಕಾಣಿಸುತ್ತಾಳೆ; ಆದರೆ ಬೂದ್ಯಣ್ಣನ ಅಂತರಂಗಕ್ಕೆ ಆಪ್ತಳಾಗುತ್ತಾ ಹೋಗುತ್ತಾಳೆ. ಬೂದ್ಯಣ್ಣನದು ಹಾಗಂತ ಆದರ್ಶ ಪಾತ್ರವಾಗಿ ಪ್ರದರ್ಶಿತಗೊಳ್ಳದೆ, ಅಂತಃಕರುಣೆಯ ಮೂಲಕ ಗಟ್ಟಿಗೊಳ್ಳುತ್ತಾನೆ. ಮಲ್ಕವ್ವನ ಸಂಗಡ ಅವನ ನಡವಳಿಕೆ ಗುರೆಪ್ಪನಂಥವರ ವರ್ತನೆಗಿಂತ ಭಿನ್ನ ವಾದದ್ದು ಎಂಬುದನ್ನು ಇಲ್ಲಿ ಗಮನಿಸಬೇಕು. ಮಲ್ಕವ್ವ ಕೊನೆಯಲ್ಲಿ ಬೂದೆಪ್ಪನ ಸೂಳೆಯಾಗಿ ಕಾಣಿಸದೆ, ಜೀವನ ಪ್ರೀತಿಯ ಸಂಗಾತಿಯಾಗಿ ನಿಲ್ಲು ತ್ತಾಳೆ; ತನ್ನ ಸುತ್ತಣ ಜನಗಳ ಸಣ್ಣತನ ಮತ್ತು ಬದುಕಿನ ನಿಷ್ಠುರತೆಗಳನ್ನು ಗೆದ್ದು ನಿಲ್ಲುತ್ತಾಳೆ.

ಸಂಕಲನದಲ್ಲಿ 'ರೋಗಿ' ಕತೆ ಒಂದು ದೃಷ್ಟಿಯಲ್ಲಿ ವಿಭಿನ್ನ ಸೇರ್ಪಡೆಯಂತೆ ಭಾಸ ವಾಗುತ್ತದೆ. ಉಳಿದೆಲ್ಲಾ ಕತೆಗಳು, ಲೇಖಕರೇ ಹೇಳಿಕೊಂಡಿರುವಂತೆ, ಸ್ವಾತಂತ್ರ್ಯ ಪೂರ್ವ ಕಾಲಘಟ್ಟವನ್ನು ಒಳಗೊಂಡಿದ್ದರೆ, ಪ್ರಸ್ತುತ ಕತೆ ಇತ್ತೀಚಿನ ಕಾಲ ಪರಿಸರ ವನ್ನು ಹೊಂದಿರುವಂಥಾದ್ದು. ಅಲ್ಲದೆ ಬೇರೆಲ್ಲಾ ಕತೆಗಳು ಗ್ರಾಮೀಣ ಬದುಕಿನ ಕಥಾ ದ್ರವ್ಯವನ್ನು ಒಳಗೊಂಡಿದ್ದರೆ, ಈ ಕತೆ ನಗರ ಜೀವನದ ದ್ರವ್ಯವನ್ನು

ಹೊಂದಿರುವಂಥಾದ್ದು. ಆದರೆ ಮೇಲ್ನೋಟಕ್ಕೆ ಹೀಗೆ ವಿಭಿನ್ನವಾಗಿ ಕಾಣಿಸಿದರೂ, ಕತೆಯ ಜೀವಾಳ ಗಂಡು–ಹೆಣ್ಣಿನ ಸಂಬಂಧಗಳನ್ನು ಸುಶಿಕ್ಷಿತ ನಗರ ಜೀವನದ ಒಳಗಿಟ್ಟು ಪರಿಶೋಧಿಸಲು ತೊಡಗಿರುವುದನ್ನು ಗಮನಿಸಬಹುದು. ಮಾನಸಿಕ ಅಸ್ವಾಸ್ಥ್ಯದಿಂದ ಬಳಲುವ ಹೆಣ್ಣನ್ನು ಗುಣಪಡಿಸಲು ಬರುವ ವೈದ್ಯ, ಕೊನೆಯಲ್ಲಿ ದೈನೇಸಿ ಲೈಂಗಿಕ ಅಸ್ವಾಸ್ಥ್ಯಕ್ಕೆ ತಾನೇ ಗುರಿಯಾಗುವ ವ್ಯಂಗ್ಯ ಈ 'ರೋಗಿ' ಕತೆಯಲ್ಲಿ ನಿಚ್ಚಳವಾಗಿ ಫಲಿಸಿವೆ. ಗಂಡ ನಾಗೇಶ 'ಡೆವಲಪ್‌ಮೆಂಟ್ ಆಫೀಸರ್' ಆಗಿದ್ದರೂ ಹೆಣ್ಣನ್ನು ಕುರಿತಂತೆ 'ಮಡಿವಂತಿಕೆ'ಯ ಧೋರಣೆ ಉಳ್ಳವನು; ಹೆಣ್ಣಿನ ಸ್ವಾತಂತ್ರ್ಯ–ಸ್ವಚ್ಛಂದ ನಡವಳಿಕೆಗೆ ಒಳಗೊಳಗೇ ವಿರೋಧಿ: "ಯಾಕ್ ಬ್ಯಾಡಂತೀರಿ ಅಂದ್ರೆ ಏನೇಳ್ಲಿ, ಗಂಡಸರ ಜತಿಗೆ ಪಾತ್ರ ಮಾಡ್ತಾಳಂತ', 'ಏನ್ ಕಲೆನೋ ಏನೋ ನಮ್ ಸಂಕಟ ಯಾರಿಗ್ಗೊತ್ತು?', 'ಕಂಡಕಂಡವರ ಜತಿಗೆ ತಿರುಗ; ಕಂಡ್‌ಕಂಡವರ ಕೂಡ ವೇಶ ಹಾಕು; ಯಾವದಾದ್ರು ನಾಟಕ್ ಕಂಪನಿ ಸೇರು"—ಸುಶಿಕ್ಷಿತ ಗಂಡ ನಾಗೇಶನ ಇಂಥ ಮಾತುಗಳು ಹೆಣ್ಣನ್ನು (ಹೆಂಡತಿಯನ್ನು) ಕುರಿತು ಶತಶತಮಾನಗಳಿಂದ ಹರಿದು ಬಂದ ಸಾಂಪ್ರದಾಯಿಕ ಕುಬ್ಜ ಮನಸ್ಸನ್ನು ದಾಖಲು ಮಾಡುತ್ತವೆ. ಡಾಕ್ಟರ್ ಸಾಂಬಣ್ಣ ಹೊರಗೆ ಸಭ್ಯಸ್ಥ, ರಮ್ಯಕವಿ ಮತ್ತು ಕಲಾಪ್ರೇಮಿ; ಒಳಗೆ ಫ್ಯೂಡಲ್: "ಏನ್ ಹೆಣ್ಣದು! ಈ ಕಾಲೇಜು ಮಾಸ್ತರನ ಜತಿಗೆ ಹಗ್ಲು ಹಾಡೇ ತಿರಿಗ್ಯಾಡ್ತವ; ನಾಚಿಗಿಲ್ದೆ ಅವುನ್ ಜತಿಗೆ ಪಾತ್ರ ಮಾಡ್ತದ. ನಾಗೇಶಗ ಇದ್ಕಾ ಸಿಟ್ ಬರ್ತಿರ್‌ಬೇಕು. ಆದ್ರೆ ಅವುನ್ ಷಂಡ್; ಕೈಲಾಗದವ. ನಾನಾದ್ರು ಇಷ್ಟತ್ತಿಗೆ ಮೆತ್ತಗ್ ಮಾಡಿ ಹೇಳಿದಂಗ ಕೇಳಂಗ ಮಾಡ್ತಿದ್ದೆ"—ಡಾ. ಸಾಂಬಣ್ಣನ ಈ ಮಾತುಗಳು ಹೆಣ್ಣಿನ ಬಗೆಗಿನ ಊಳಿಗಶಾಹೀ ಧೋರಣೆಯನ್ನು ದಾಖಲಿಸುತ್ತವೆ. ಆಧುನಿಕ ಗಂಡಸು ಹೆಣ್ಣನ್ನು ತನ್ನ 'ಸ್ವಾಧೀನ' ಎಂದು ತಿಳಿಯುವ ಫ್ಯೂಡಲ್ ಧೋರಣೆ ಗಂಡ ನಾಗೇಶ ಮತ್ತು ಡಾ. ಸಾಂಬಣ್ಣನವರ ವರ್ತನೆಗಳಲ್ಲಿ ವ್ಯಕ್ತವಾಗುತ್ತವೆ. ಸಾವಿತ್ರಿಯ ಸ್ವಚ್ಛಂದ ನಡವಳಿಕೆ ದಾಂಪತ್ಯ ಜೀವನದಲ್ಲಿ ವಿಷಮ ಸನ್ನಿವೇಶಗಳನ್ನು ಎದುರು ನಿಲ್ಲಿಸಲು ಕಾರಣವಾದರೂ ಮತ್ತು ಡಾ. ಸಾಂಬಣ್ಣನಲ್ಲಿ ವಿಕೃತ ದೈನೇಸಿ ಕಾಮವನ್ನು ಪ್ರಚೋದಿಸಲು ಕಾರಣವಾದರೂ, ಈ ದುರಂತಕ್ಕೆ ಆಧುನಿಕ ಗಂಡಿನ ಸಂಕುಚಿತ–ಸಾಂಪ್ರದಾಯಿಕ ಮನಸ್ಸಿನ ದೌರ್ಬಲ್ಯಗಳೇ ಮೂಲ ನೆಲೆಯಾಗಿವೆ ಎಂಬುದನ್ನು ಈ ಕತೆ ಅರ್ಥಪೂರ್ಣವಾಗಿ ಸೂಚಿಸುತ್ತದೆ. ಕತೆಯ ಸಂರಚನೆ ಸಂಭಾಷಣೆಯ ಸರಮಾಲೆಯಲ್ಲಿಯೇ ಮೂವತ್ತು ಪುಟಗಳ ವರೆಗೆ ಹೆಣೆದುಕೊಂಡಿರುವುದರಿಂದ, ಇದೊಂದು ನಾಟಕರೂಪದ ಕತೆ ಎನ್ನಿಸುತ್ತದೆ.

ಮೇಲ್ನೋಟಕ್ಕೆ 'ಬಡೇಸಾಬು ಪುರಾಣ' ಚಾರಿತ್ರಿಕ ಸನ್ನಿವೇಶವೊಂದನ್ನು ಪುನರ್ರೂಪಿಸುವ ಕತೆ. ಒಬ್ಬ ಸಾಮಾನ್ಯ ವ್ಯಕ್ತಿ ಬಡೇಸಾಬು ಊರಲ್ಲಿ ತಳವೂರಿ, ಬೇರೆ

ಯುವರ ದೌರ್ಬಲ್ಯಗಳನ್ನು ಚಾಲೂಕಾಗಿ ದುಡಿಸಿಕೊಳ್ಳುತ್ತ ಊರಿನ ದೊಡ್ಡ ಕುಳವಾಗಿ ಬೆಳೆಯುವುದನ್ನು ಮತ್ತು ಆ ಮೂಲಕ ಊರಿನ ವಾತಾವರಣ ಕಲಕುವುದನ್ನು ಮೊದಲ ಕಾಂಡದಲ್ಲಿ ಚಿತ್ರಿಸಲಾಗಿದೆ. ಎರಡನೇ ಕಾಂಡದಲ್ಲಿ ಕತೆ ಚಾರಿತ್ರಿಕ ಸನ್ನಿವೇಶವನ್ನು ಒಳಗೊಳ್ಳುವ ಮೂಲಕ ಹೊಸ ತಿರುವು ಪಡೆಯುತ್ತದೆ. ೧೯೪೭-೪೮ರಲ್ಲಿ ಹೈದ್ರಾಬಾದ್ ಸಂಸ್ಥಾನದಲ್ಲಿ ಭುಗಿಲೆದ್ದ ರಜಾಕಾರರ ಹಾವಳಿ ಈ ಊರಿಗೂ ತಲುಪಿ, ಬಡೇಸಾಬು ರಜಾಕಾರರ ಪ್ರತಿನಿಧಿಯಾಗುತ್ತಾನೆ; ಹಲ್ಲೆ, ಲೂಟಿ, ಬಲಾತ್ಕಾರ, ಮಾನಭಂಗ, ಮತಾಂತರಗಳಿಂದ ಊರು ತತ್ತರಿಸುತ್ತದೆ. ಮೂರನೆಯ ಕಾಂಡದಲ್ಲಿ ರಜಾಕಾರರ ದಾಳಿ ಒಮ್ಮೆಲೆ ಅಡಗುವುದರ ಬೆನ್ನಲ್ಲಿಯೇ ಬಡೇಸಾಬುನ ಮೇಲೆ ಪ್ರತ್ಯಾಕ್ರಮಣ ನಡೆದು, ಊರು ಪೂರ್ವಸ್ಥಿತಿಗೆ ಮರಳುತ್ತದೆ. ಸ್ಥೂಲವಾಗಿ ಇದಿಷ್ಟು ಕತೆಯ ಹಂದರ

ಒಂದು ರೀತಿಯಲ್ಲಿ ಈ ಕತೆ ಉಳಿದ ಕತೆಗಳು ಹೊಮ್ಮಿಸುವ ಆಶಯಗಳಿಂದ ಬೇರೆಯಾಗಿ ನಿಲ್ಲುತ್ತದೆ. ಪ್ರವೃತ್ತಿಗಳ ಪಾತಳಿಯಲ್ಲಿ ಮನುಷ್ಯ ಮೃಗೀಯ ಸ್ವರೂಪ ತಾಳುವುದನ್ನು ಈ ಕತೆ ಹೇಳುವಂತಿದೆ. ಬಡೇಸಾಬು, ಪೋಲಿಸ್‌ಗೌಡ, ಬುಡ್ಡೆಮ್ಮ, ಸಿಂಗಿ, ಪಿರುಪಾಕ್ಷಿ. ಬಸಣ್ಣ, ಸಾಬಣ್ಣ — ಕತೆಯಲ್ಲಿನ ಎಲ್ಲಾ ಪಾತ್ರಗಳೂ ಮತ್ತು ಘಟನಾವಳಿಗಳು ಪ್ರವೃತ್ತಿಗಳ ಮಟ್ಟದಲ್ಲಿ ಮನುಷ್ಯ ಪರಿಸ್ಥಿತಿಯ ಕೈಗೊಂಬೆಯಂತೆ ವರ್ತಿಸುವುದನ್ನು ಸೂಚಿಸುತ್ತವೆ. ರಜಾಕಾರ ವೇಷ ತೊಟ್ಟ ಬಡೇಸಾಬು ಮತ್ತವನ ತಂಡದ ವರ್ತನೆ ಮೃಗೀಯವಾಗಿ ವಿಜೃಂಭಿಸಿದರೆ, ರಜಾಕಾರರ ಹಾವಳಿ ಅಡಗಿದ ಕೂಡಲೆ ಮೇಲೆದ್ದು ನಿಲ್ಲುವ ಗೌಡ ಮತ್ತಿತ್ತರ ವರ್ತನೆ ಪ್ರತೀಕಾರದ ಪ್ರವೃತ್ತಿಗಳನ್ನು ಪರಾಕಾಷ್ಠೆಗೆ ಒಯ್ಯುವಂಥಾದ್ದು. ಮಸೀದಿಯನ್ನು ಧ್ವಂಸ ಮಾಡಲು ಬಡೇಸಾಬನನ್ನು ಬಲಿಪಶುವನ್ನಾಗಿ ಮುಂದೆ ಮಾಡುವ ಪ್ರಸಂಗ, ಶ್ರೀ ಕಾಳೇಗೌಡರು ಗುರುತಿಸಿರುವಂತೆ, ವ್ಯವಸ್ಥೆಯಲ್ಲಿನ ಸತತ ಕ್ರೌರ್ಯದ ಪ್ರತೀಕ ವಾಗಿ ಕಾಣುತ್ತದೆ. ಈ ಘಟನೆಯ ತೆಕ್ಕೆಯಲ್ಲೇ ಜರುಗುವ ಮತ್ತೊಂದು ಪ್ರಸಂಗ ಕತೆಗೆ ಮಾರ್ಮಿಕ ವ್ಯಂಗ್ಯವನ್ನು ಹಾಗೂ ಅರ್ಥಪೂರ್ಣವಾದ ಅಂತ್ಯವನ್ನು ದಕ್ಕಿಸಿಕೊಟ್ಟಿದೆ. ಬಡೇಸಾಬುನ ಭೋಗದ ವಸ್ತುಗಳಾಗಿದ್ದ ಬುಡ್ಡೆಮ್ಮ-ಸಿಂಗಿಯರನ್ನು ಹಂಚಿಕೊಳ್ಳಲು ಜೊಲ್ಲು ಸುರಿಸುವ ಊರಕುಳಗಳ ಕಚ್ಚೇ ಹರುಕತನವನ್ನೂ ಮತ್ತು ಇಬ್ಬರನ್ನೂ ಲಪಟಾಯಿಸುವ ಗೌಡನ ಗೌಡಿಕೆಯನ್ನೂ ತೋರಿಸುತ್ತದೆ; ಊರು ಪೂರ್ವಸ್ಥಿತಿಗೆ–ಮುಂಚಿನ ತಿಟಿ–ತೆವಲು–ಗೌಡಿಕೆಗಳಿಗೆ ಮರಳುವುದನ್ನು ಈ ಪ್ರಸಂಗ ಧ್ವನಿಸುತ್ತದೆ. ಈ ಕತೆ ಚಾರಿತ್ರಿಕ ಸನ್ನಿವೇಶವನ್ನು ಒಳಗೊಂಡಿದ್ದರೂ ಕತೆಯು ಉದ್ದೇಶ ಚಾರಿತ್ರಿಕ ಪರಿಣಾಮವನ್ನು ಉಂಟು ಮಾಡುವುದಲ್ಲ; ಮನುಷ್ಯಪ್ರವೃತ್ತಿಗಳ ಪ್ರಮಾಣವನ್ನು ತೋರಿಸುವಂತಿದೆ. ರಜಾಕಾರರ ಹಾವಳಿ-ಆಗಲೇ ಬೇರಿಳಿಸಿ ಚಿಗುರುತ್ತಿದ್ದ ಬಡೇಸಾಬುನ ಫ್ಯೂಡಲ್ ವ್ಯಕ್ತಿತ್ವವನ್ನು (ಸಾಹುಕಾರಿಕೆ. ದರ್ಪ-

ದೌರ್ಜನ್ಯ, ಜಬರ್) ಪರಾಕಾಷ್ಠೆಗೆ ಒಯ್ಯಲು ವೇಗವರ್ಧಕವಾಗಿ ಕತೆಯಲ್ಲಿ ಬರುತ್ತದೆ. ಹಾಗಾಗಿ ಬಡೇಸಾಬುನ ಪಾತ್ರ ಮತ್ತು ಚಾರಿತ್ರಿಕ ಸನ್ನಿವೇಶ ಅನ್ಯೋನ್ಯ ವೆಂಬಂತೆ ಮಿಳಿತಗೊಂಡಿವೆ. ಇದೇ ಕಾರಣಕ್ಕಾಗಿ ಕತೆಯಲ್ಲಿ ಬಡೇಸಾಬುನ ಪಾತ್ರ ವೊಂದೇ ಬೆಳೆಯುತ್ತ ವಿಜೃಂಭಣೆ ಪಡೆದಂತಿದೆ, ಇತರೆಲ್ಲಾ ಪಾತ್ರಗಳು ಬಡೇಸಾ ಬುನ ಒಟ್ಟು ವ್ಯಕ್ತಿತ್ವದ ಸ್ವರೂಪವನ್ನು ಹೊರಗೆಡಹಲು ಬರುವ ಉಪಕರಣ ಗಳಂತೆ ತೋರುತ್ತವೆ. ಬುಡ್ಡಮ್ಮ ಮತ್ತು ನಿಂಗಿ ಪಾತ್ರಗಳು ಮತ್ತು ತತ್ಸಂ ಬಂಧೀ ಘಟನೆಗಳಂತೂ 'ಕಿಡಿ' ಕತೆಯ ಸೂಗಮ್ಮ ಮತ್ತು ಬಾಲವ್ವನ ಪಾತ್ರ–ಘಟನಾವಳಿಗಳ ಪುನರಾವೃತ್ತಿಯಂತೆ ಕಾಣಿಸುತ್ತವೆ. ವಿವರಗಳ ಸರಕಿನ ಭಾರ ದಿಂದಾಗಿ ಕತೆ ಕೆಲವು ಕಡೆ ವರದಿಯ ವಾಚ್ಯಸ್ತರಕ್ಕೆ ಜಗ್ಗುತ್ತದೆ.

ಶಾಂತರಸರ ಶೈಲಿ ಇಲ್ಲಿನ ಕತೆಗಳಲ್ಲಿ ದಕ್ಕಿಸಿಕೊಳ್ಳಬಹುದಾಗಿದ್ದ ಅನೇಕ ಶಕ್ತಿ ಸಾಧ್ಯತೆಗಳನ್ನು ಕುಗ್ಗಿಸಿದೆ. 'ಮಲ್ಕಮ್ಮ' ಮತ್ತು 'ರೋಗಿ' ಕತೆಗಳು ಇಂಥ ಶೈಲಿಯ ಚೌಕಟ್ಟಿನಲ್ಲೂ ಯಶಸ್ವಿಯಾಗಿರುವುದು ವಸ್ತುವಿನ ಸಂಯಮಶೀಲ ನಿರ್ವ ಹಣೆಯಿಂದಾಗಿಯೆ ಎನ್ನಬಹುದು. ಶಾಂತಸರ ಶೈಲಿ 'ಬಡೇಸಾಬು ಪುರಾಣ' ಕತೆಯಲ್ಲಿ ಸತ್ವ ಕಳೆದುಕೊಂಡಿರುವುದನ್ನು ಗಮನಿಸಬಹುದು, ಹಾಗಾಗಿಯೇ ಒಂದು ಉತ್ತಮ ಕತೆಯಾಗಬಹುದಾಗಿದ್ದ ಶಕ್ತಿಸಾಧ್ಯತೆಗಳನ್ನು ಒಡಲಲ್ಲಿ ಇಟ್ಟುಕೊಂಡಿ ದ್ದರೂ ಶಿಲ್ಪದ ಸಡಿಲುತನದಿಂದಾಗಿ ವಸ್ತು ಮತ್ತು ಆಶಯಗಳ ನಿರ್ವಹಣೆ ಜಾಳು ಗೊಂಡಿದೆ.

ಕಥಾಶಿಲ್ಪದ ಶಿಸ್ತು, ಸಂಯಮಗಳನ್ನು ತೋರಿಸಿದಲ್ಲಿ ಶಾಂತರಸರು ಸುಂದರವಾದ ಮತ್ತು ಗಹನವಾದ ಉತ್ತಮ ಕತೆಗಳನ್ನು ನೀಡಬಲ್ಲವರಾಗಿದ್ದಾರೆ.

●

ಪ್ರಥಮ ಸಂಕಲನದ ಕವಿ

ರವಿ ಬೆಳಗೆರೆ

ಎರಡು ಕವನಗಳು

೧ ಕೊಳಕು ಗೀತೆ

ಹೌದು ಸಾರ್. ನಾನು ಹಾಡೋದೇ ಕೊಳಕು ಗೀತೆ.
ನಾನು ನಗಲಾರೆ ಸಾರ್!

ಶೃಂಗೇರಿಯ ಮಠದಲ್ಲೋ, ಶ್ರೀ ಉಡುಪಿಯ ಪೀಠದಲ್ಲೋ
ವೇದಪಾಠವಾದ ಹುಡುಗ
ಜೊಜ್ಜಿಗರಿಸಿ ಬಿಳಿ ಹಲ್ಲಲಿ ಖಿಲಖಿಲನೆ ನಕ್ಕಂತೆ...
ಕಾನ್ವೆಂಟಿನ ಸಿಸ್ಟರುಗಳ ಗಿಳಿಪಾಠ ಕಲಿತ ಹುಡುಗ
ಬಿಳಿ ಚಡ್ಡಿಯ ಬಿಸಿ ತೊಡೆಯಲಿ ಕಿಲಕಿಲನೆ ನಕ್ಕಂತೆ...
ನಾನು ನಗಲಾರೆ ಸಾರ್......
ನಾನು ಹಾಡೋದೇ ಕೊಳಕುಗೀತೆ!

ಅಪ್ಪನಲ್ಲದ ಅಪ್ಪ ಚೆಲ್ಲಿ ಹೋದ ಕಪ್ಪು ವೀರ್ಯಕ್ಕೆ
ಅಮ್ಮನ ಹಸಿದೊಡಲಿನಲ್ಲಿ ಚಿಗುರೊಡೆದ
ಗನೋರಿಯಾ ಕೂಸು ನಾನು.
ಹೇಲು, ಉಚ್ಚೆ, ಎಂಜಲೆಲೆ, ಸುಖರೋಗ, ಉಪ್ಪು ಹನಿ
ಕಾಲೊಡೆತ, ವೈಮುರಿತ–ಬಾಲ್ಯದ ನೆನಪುಗಳಿವು
ಹುಟ್ಟಿನಿಂದ ನೇರವಾಗಿ ಮುಪ್ಪಿಗೆಗರಿದವನು ನಾನು
ನಾನು ನಗಲಾರೆ ಸಾರ್...
ನಾನು ಹಾಡೋದೇ ಕೊಳಕು ಗೀತೆ!

ಫುಟ್‌ಪಾತಿನ ಧೂಳಿನಲಿ ಹಸಿದೊಡಲಿನ ಗೋಳಿನಲಿ
ಬಿಸಿಲಲ್ಲೂ ಬಿಸಿಯಾಗದ ಸರಸತ್ತ ಮೈಯ್ಯಲ್ಲಿ
ಟಾಟಾಗಳ ಎಂಜಲೆಲೆ, ಬಿರ್ಲಾಗಳ ಭಿಕ್ಷಾನ್ನ
ಪೋಲೀಸರ ಬೂಟುಣಿಸಿದ ಮಧ್ಯಾಹ್ನದ ಮೃಷ್ಟಾನ್ನ
ದ ಕೂಟದಲಿ
ಉಣ್ಣದೆಯೇ ತೇಗಿದ ಉಸಿರಾಡದೆ ಬದುಕಿದ
ನಿಮ್ಮೂರಿನ ಮುಳ್ಳು ಬೇಲಿ ನೆರಳಲ್ಲೇ ಹೊರಳಿ ಬೆಳೆದ
ತೊನ್ನು ಹರಿದ ಹಂದಿ ನಾನು
ನಾನಂ ನಗಲಾರೆ ಸಾರ್...
ನಾನು ಹಾಡೋದೇ ಕೊಳಕು ಗೀತೆ !

ನೇತಾಡುವ ತರಡು ಹಿಡಿದು
ನಡೆದಾಡಲು ಪರದಾಡುವ ಎಂಭತ್ತರ ನೇತಾರರು
ಜೋಲು ಮೊಲೆಯ ಮುದುಕಿಯರು
ಐದು ವರ್ಷಕ್ಕೊಮ್ಮೆ
ಭಾಯಿಯೋ...ಔರ ಬೆಹನೋ,
ಸೋದರ ಸೋದರಿಯರೆ,
ಮತದಾರ ಬಾಂಧವರೇ...ಹಿಂದೂಗಳೇ,
ಕಾಮ್ರೇಡ್ಸ್...
ಎಂದೆಲ್ಲಾ ಕಿರುಚಾಡಿದಾಗ
ಬಿಕ್ಕಿಹತ್ತಿದ ನಮ್ಮೂರಿನ ಹಸಿದೊಡಲಿನ ಮುಗ್ಧರು
ಕಿವಿ ಹರಿಯೆ ಚಪ್ಪಾಳೆ ತಟ್ಟಿದಾಗ,
ಉಸಿರುಗಟ್ಟಿ ಅವರಿವರ ಭಾಷಣಗಳ ಕುಡಿದಾಗ
ನಿಟ್ಟುಸಿರುಗಳ ಹೂಸಿದಾಗ
ಎದೆಯುಬ್ಬಿಸಿ ಫೋಟಕ್ಕೆ ಪೋಜು ಕೊಟ್ಟಾಗ...
ಎಲ್ಲ ಮುಗಿದ ಮೇಲೆ ಕಪ್ಪು ಬಾಕ್ಸಿನಲ್ಲಿ
ಬಿಳಿಯ ಬ್ಯಾಲೆಟ್ ತುರುಕಿ
ರಹಸ್ಯವಾಗಿ ಲುಚ್ಚಾಗಳನ್ನಾರಿಸಿ ಕಳಿಸಿ
ಕುಂಡಿ ಝಾಡಿಸಿಕೊಂಡು ಮನೆಗಳೆಂಬ
ಗೋರಿಗಳತ್ತ ನಡೆದಾಗ...
ಸಾರ್....ಬಲು ಜೋರಾಗಿ ನಗುತ್ತೇನೆ !

೨. ಕ್ಷಮೆ

ಉಂಡೆ ತಿನ್ನಲು ಮತ್ತೆ ಕುಂಡೆ
ತೊಳೆಯಲು ಮಾತ್ರ ಬಳಸುವ ಕೈಗಳನ್ನು
ಮನೆಯೆಂಬ ಸುಡುಗಾಡಿನಿಂದ
ಶಾಲೆಯೆಂಬ ಗೋರಿಯೊಳಕ್ಕೆ ನೇರವಾಗಿ
ಸಾಗಲು ಮಾತ್ರ ಬಳಸುವ ಕಾಲ್ಗಳನ್ನು
ಗಾಳಿಗೆ ತೂರುವ ಫ್ಲೈಯಿಂಗ್ ಕಿಸ್ಸು ಎಂಜಲು ಸಿಗರೇಟಿನ ಫಿಲ್ಟರು
ಗಳಿಗಷ್ಟೇ ಮೀಸಲಾದ ಕುಷ್ಠ ತುಟಿಗಳನ್ನು
ಒಮ್ಮೆಯಾದರೂ ರೇಗಿ ಒರಲದೆ ಇರಲು ಗೋಲ್ಡ್ ಕವರಿಂಗ್ ಸರ
ಕಾಶೀದಾರದ ತಾಯಿತಗಳನ್ನು ನೇತಾಡಿಸಿಕೊಳ್ಳುವ
ನಿಮ್ಮ ಕುತ್ತಿಗೆಗಳನ್ನು
ಬಿಸಿಲಿಗೆ, ಸೆಕ್ಸ್ ಬುಕ್ಕಿನ ಬಿಸಿಗೆ ಮಾತ್ರ
ಬೆವರಿ ಪ್ಯಾಂಟು ಲಂಗಗಳ ಪದರುಗಳಲ್ಲಿ ಇಂಗಿ
ಹೋಗುವ ನಿಮ್ಮ ದರಿದ್ರ ಗೆದ್ದಲುಂಡ ತೊಡೆಗಳನ್ನು
ಒಂದಿಷ್ಟು ವರ್ಷ ಬಡಿದುಕೊಂಡು
ನಂತರ ಗಪ್ಪನೆ ನಿಂತು ಹೋಗುವ ನಿಮ್ಮ
ಷಂಡ ಎದೆ ಗುಂಡಿಗೆಗಳನ್ನು
ಆಗೊಮ್ಮೆ ಈಗೊಮ್ಮೆ ಷೇಪು ಬದಲಿಸುತ್ತಾ ನೇತಾಡುವ
ಸಂದಿಗಳ ಕತ್ತಲಲ್ಲಿ
ಸುಖರೋಗ ಸವರಿಕೊಳ್ಳುವ ವೃಷಣಗಳನ್ನು
ಟೂತ್ ಪೇಸ್ಟು ಮತ್ತು ಅಮ್ಲೆಟ್ಟಿನ ರುಚಿಯಷ್ಟೇ ಕಂಡು
ಬಲು ಹೊಲಸಾಗಿ ನಗುವ ನಿಮ್ಮ ಕಾ
ಲ್ಗೇಟ್ ಹಲ್ಲುಗಳನ್ನು
ಓ ಕರುಣಾಮಯನಾದ ತಂದೆಯೇ !
ಇಲ್ಲಿ ಮೊಳೆ ಹೊಡೆಸಿಕೊಂಡು ಸತ್ತು
ಅಲ್ಲಿ ಪರಲೋಕದಲ್ಲಿ ವಾಸಿಸುತ್ತಿರುವ—ಓ...
ಮೂರ್ಖ ದೇವ ಪುತ್ರನೇ...
ಇವ್ಯಾವುಗಳನ್ನೂ ನಾನು ಕ್ಷಮಿಸಲಾರೆ !
ನಿನ್ನ ಕ್ಷಮೆ ನಿನ್ನ ಶಿಲುಬೆಯೊಂದಿಗೇ ಸಾಯಲಿ
ಆಮೆನ್ !

[ರವಿ ಬೆಳಗೆರೆ ಅವರ **ಅಗ್ನಿಕಾವ್ಯ** (೧೯೮೩)
ಸಂಕಲನದಿಂದ ಆಯ್ದುಕೊಂಡ ಪದ್ಯಗಳಿವು.]

ಬಾಯಿ ಮುಚ್ಚಿಕೋ ಸೀತಾ

ಸ. ಉಷಾ

ಬಾಯಿ ಮುಚ್ಚಿಕೋ ಸೀತಾ
ಬಾಯಿ ಮುಚ್ಚಿಕೋ
ಈ ನೆಲದವ್ವನ ಮಡಿಲಲ್ಲಿ
ನೀನಿನ್ನೂ ಮಣ್ಣಾಗದೆ
ಕುಹೂ ಕುಹೂ ಅನ್ನುವುದು
ಯಾಕಾಗಿ
ಅಶ್ವಮೇಧಕ್ಕೆ ಹೊನ್ನಿನ ಪ್ರತಿಮೆ
ಹೊಟ್ಟೆತುಂಬ ಬೈದ ಮನೋರಮೆ
ಒಗತನಗಡುಗ ಗೌತಮರು
ಬುದ್ಧಿ ಹೇಳಿದ ರಾಮರುಗಳೆಲ್ಲ
ಒಟ್ಟಾಗಿ ಮಣ್ಣೆರಚಿದ್ದಾರೆ
ಅನಾರ್ಕಲಿಯ ಸಮಾಧಿಯ ಮೇಲೆ.

ನೆಲದೊಡಲಿಂದ
ಪಿಂಡ ಕಾಣದ ಪ್ರೇತದ ಹಾಗೆ
ಕೂಗಬೇಡ.
ಕರಗು ಈ ನೆಲದ ಕಣಕಣದಲ್ಲಿ
ಒಡೆದು ಚಿಗುರಿನಲಿ
ಅರಳಿ ಹೂವಿನಲಿ
ಕರ್ಣಕುಂಡಲದ ಬೀಜದ
ಹಾಗೆ ಪಟಪಟ
ನೆತ್ತಿ ನೀರೊಡೆದು
ನೆಲಕೆ ಬಿದ್ದು
ಮೊಳೆತು ಬಲಿಯುವ ತನಕ
ಬಾಯಿ ಮುಚ್ಚಿಕೋ
ಸೀತಾ
ಬಾಯಿ ಮುಚ್ಚಿಕೋ.

ಒಂದು ಕವನ, ಒಂದು ಮೆಚ್ಚುಗೆ

ಮಾ ನಿಷಾದ

ನನ್ನೆದುರೇ ಸರ್ರನೆ ಬಿದ್ದ ಬಾಣನಾಟಿದ ಕ್ರೌಂಚ
ಬೊಟ್ಟಿಡುವ ಕಡ್ಡಿಯೊಡನೆ ಅಡಿತಪ್ಪಿ ಎತ್ತರದಿಂದ ಜಾರಿದ
ಚಿತ್ತಾರದ ಕುಂಕುಮದ ಭರಣಿಯು ಹಾಗೆ.
ಪ್ರಾಣೋತ್ಕ್ರಮಣದ ನೋವು
ಕೂಡುಹಕ್ಕಿಯು ಚೀತ್ಕಾರದೊಡನೆ ಮೇಳೈಸಿ
ಗಂಗೆಯು ಅಲೆಯಲೆಗಳಲ್ಲಿ ಪ್ರತಿಧ್ವನಿಸಿದಾಗ
ಆಚೀಚೆ ನೋಡಿದೆ, ವ್ಯಾಧ!
ನಿಂತಲ್ಲೆ ನಿಂತೆ ದಂಗಾಗಿ.
"ಮಾ ನಿಷಾದ......"ನನ್ನರಿವನೇ ಮೀರಿ
ಬೈತಿಟ್ಟ ಹಂಬಲವೆ ಕೂಳ್ಕುದಿದು
ತುಟಿ ಬಿಲ್ಲಿನಿಂದ ಚಿಮ್ಮಿತು ಶಾಪಬಾಣವಾಗಿ

ಯಾಕೆ ಆಯಿತು ಹೀಗೆ?
ಆಹ್ನಿಕದಲ್ಲಿಂದು ನಿತ್ಯದೇಕಾಗ್ರತೆಯಿಲ್ಲ
ಹಾಗೆಯೇ ಇದ್ದೆನಲ್ಲವೆ ನಾನೂ ಒಮ್ಮೆ?
ಅದೆಷ್ಟು ಸುಖವಿತ್ತು, ಸಂತೋಷ ನಿರ್ಝರಿಣಿ
ಹೇಗೆ ನೆಗೆನೆಗೆದು ಹರಿದಿತ್ತು ಗತಕಾಲ ಬಂಡೆಗಳಿಂದ!
ಪಕ್ಷಿ ಪ್ರಾಣಿಗಳನ್ನು ತರಿದು
ಗಾಯಕ್ಕೆ ತಂಟಿಯಿಟ್ಟು ಬೆಚ್ಚನೆ ರಕ್ತ ಹೀರುತ್ತ
ಪುಳಕಗೊಳ್ಳುತ್ತಿದ್ದ ದಿನ ನೂರು ನೂರುಗಳು

ಎಂದಿಗೂ ಬೇಡವಾಗದ ಬೇಡರ ಹುಡುಗಿ
ಅವಳಿತ್ತ ಮುದ್ದಿನ ಮಕ್ಕಳು ಗುಡಿಸಲ ತುಂಬ
ತುಂಬಿ ಚೆಲ್ಲಿದ ಕಲಕಲ, ಮುಸು ಮುಸು.
ಚಳಿಗಾಲದ ಮುಸ್ಸಂಜೆಗಳಲ್ಲಿ, ಕಾಯುವ ಕೆಂಡಗಳಲ್ಲಿ
ಹೊಡೆದ ಪ್ರಾಣಿಗಳನ್ನು ಕೆಂಪಗೆ ಹುರಿಯುತ್ತ
ಹೊಮ್ಮುವ ಮಾಂಸದ ಪರಿಮಳದಿಂದ
ಮೂಗಿನ ಹೊರಳೆ ಅರಳುತ್ತಿದ್ದಂತೆ
ಭಿಲ್ಲ ಪುರಂದ್ರಿಯೊಡನೆ ಪಿಸುಂಪಿಸು ಆಡಿದ ದಿನಗಳಿನ್ನೆಲ್ಲಿ?

ಸಪ್ತರ್ಷಿಗಳ ಬೋಧ ತಂಪು ಮಿತಿಮೀರಿ
ಮನಕೊಳದ ಮೇಲ್ಮೈ ನೀರು ಮಂಜುಗಡ್ಡೆ
ಮಿಕ್ಕವರ ಎದುರು ನಾನೀಗ ದೊಡ್ಡ ಋಷಿ
ಕ್ರೌಂಚ ಪಕ್ಷಿಯ ಹನನ ಸುತ್ತಿಗೆಗೆ
ಮಂಜಿನ ಗಡ್ಡೆ ಸೀಳುಬಿಟ್ಟು ತಳತನಕ ನಿಚ್ಚಳ
ಕೊಳದೊಳಗಿನ ನೀರು ನೀರಾಗಿಯೇ
ಅಂದಿನ ಜಲಚರಗಳು ಇಂದಿಗೂ ಜೀವಂತ

ನಾನು ಪಡೆಯುತ್ತಿದ್ದುದನ್ನು
ಇನ್ನೆಂದೂ ಪಡೆಯಲಾಗದ್ದನ್ನು ಆತ ಹೊಂದಿಹನಲ್ಲ!
ನನಗಿಲ್ಲವಾದದ್ದು ಅವನಿಗಾದರು ಏಕೆ?
ಉಸುರಿದ್ದು ಬರಿಯ ಶಾಪವಲ್ಲ, ನನ್ನ ಪರಿತಾಪ.
ನಿತ್ಯಸುಖ
ನೇವರಿಸೆ ಕಣಿವೆ ಬದುಕಿನ ಕುರುಳ
ನೆಲಬಿಟ್ಟು ಏರೇರಿದಂತೆ ಪ್ರಾಣವಾಯು ವಿರಳ.

—ಶ್ರೀಕೃಷ್ಣ ಚೆನ್ನಂಗೋಡ್

ಒಂದು ಮೆಚ್ಚುಗೆ

ಆದೆಷ್ಟು ಚೆನ್ನಾಗಿ ನೀವು ರಾಮಾಯಣದ ಸೂಕ್ಷ್ಮಗಳನ್ನು ಗ್ರಹಿಸಿದ್ದೀರಿ— ಸೀತೆ ಬಗ್ಗೆ, ವಾಲ್ಮೀಕಿ ಬಗ್ಗೆ. **ಮಾ ನಿಷಾದ** ಒಂದು ಗಹನವಾದ ಒಳನೋಟದ ಪದ್ಯ—ಹೊಸ ಅನುಭವದ ಕವನ.

"ನನಗಿಲ್ಲವಾದದ್ದು ಅವನಿಗಾದರು ಏಕೆ ?", "ಉಸುರಿದ್ದು ಬರಿಯ ಶಾಪವಲ್ಲ ನನ್ನ ಪರಿತಾಪ"—ಈ ಮಾತುಗಳಲ್ಲಡಗಿರುವ ಕ್ರೌರ್ಯ, ಪ್ರತೀಕಾರ, ಹಿಂಸೆ ಎಷ್ಟು ಗಮನೀಯ, ಗಂಭೀರ !

ಎರಡು ತುಂಬಾ ಘನವಾದ ಪ್ರತಿಮೆಗಳನ್ನು ಎತ್ತಿ ಹೇಳಬೇಕಾಗಿದೆ—'ಮಂಜು-ಗಡ್ಡೆ'ಯದು, 'ಪ್ರಾಣವಾಯು'ವಿನದು.

"ಋಷಿ ಬೋಧ" ಹೇಗೆ 'ತಂಪು' ತಣ್ಣನೆ Coldness, ಜೀವದ 'ಬಿಸಿ'ಗೆ warmthಗೆ ವಿರುದ್ಧವಾದದ್ದು : ಹೇಗೆ ಅದು **ಸಾವು**, ಬದುಕಲ್ಲ; ಆ ಮಂಜು ಗಡ್ಡೆಯ ಛಳಿಘನ ಕರಗಿದಾಗ ಎಂತಹ ಬೆಚ್ಚನೆಯ ಬಾಳಲೀಲೆ—'ಜಲಚರಗಳು ಇಂದಿಗೂ ಜೀವಂತ'. ಎಷ್ಟು ಮನೋಜ್ಞವಾಗಿ ಕಂಡುಕೊಂಡಿದ್ದೀರಿ ವಾಲ್ಮೀಕಿಯು ಅಂತಃಸತ್ವದ ಅಗ್ನಿಯನ್ನು, ಜೀವಂತಿಕೆಯ ಜ್ವಾಲೆಯನ್ನು, ಬಾಳಿನ ಅದುಮಿಟ್ಟ ಬಿಸಿಯನ್ನು ! ಎಷ್ಟು ಸಾರ್ಥಕವಾದ ರೂಪಕ ಮಂಜುಗಡ್ಡೆ–ತಪಸ್ಸು, ಬೋಧೆ 'ಋಷಿ'ತ್ವ: ಹಾಗೂ ಜೀವಂತತೆಯ ಕಣ್ಣು ಕಟ್ಟುವ ಚೇತನಾ ವಿಶೇಷದ ರೂಪಕ 'ಜಲಚರ'. ಆ 'ಜಲ' ಶಬ್ದದ ಹಾಗೂ 'ಚರ'ದ dynamism, animation– ಆ ಶಬ್ದಗಳಲ್ಲೇ ಅಡಗಿರುವ ಅರ್ಥ, ಧ್ವನಿ : 'ಮಂಜುಗಡ್ಡೆ' ಶಬ್ದದಲ್ಲಿ, ನಾದದಲ್ಲಿ, sound ನಲ್ಲಿ ಎಷ್ಟು **ಜಡವೋ** ಹಾಗೆಯೇ ಜಲಚರ ಶಬ್ದ–ನಾದ–soundನಲ್ಲಿ **ಚೇತನ** ಅಲ್ಲವೇ.

ಮೇಲೇರಿದಂತೆ 'ಅಧ್ಯಾತ್ಮ'ದಲ್ಲಿ asceticism, 'ತಾಪಸತೆ'ಯಲ್ಲಿ ಪ್ರಾಣವಾಯು **'ವಿರಳ'** : 'ಪ್ರಾಣವಾಯು', 'ಗಾಳಿಯ ಗಾಳಿ' ('ಪ್ರಾಣ'ವೆಂದರೇನೆ ಗಾಳಿ, 'ವಾಯು') ಅಂದರೆ ಉಸಿರೇ (ಎರಡೂ ಅರ್ಥದಲ್ಲಿ 'ಗಾಳಿ' ಮತ್ತು 'ಪ್ರಾಣ') ಕಟ್ಟುತ್ತದೆ ! ಮೇಲೇರಿದಂತೆ ಜೀವ ಸಾಯುತ್ತದೆ, ಕೆಳಗಿಳಿದಂತೆ ಜೀವ ಬಲ ಗೊಳ್ಳುತ್ತದೆ—'ಕಣಿವೆ ಬದುಕಿನ ಕುರುಳು' 'ನೇವರಿಸಿ'ದಂತೆ. 'ಪರಿತಾಪ' ಎನ್ನು ವಲ್ಲಿ 'ತಾಪ' (ಬೆಂಕಿ ಎಷ್ಟು ಸಾರ್ಥಕ ಪ್ರಯೋಗ)—ಅದು 'ಮಂಜುಗಡ್ಡೆ'ಯ ಕೆಳಗಿನ ಬೆಂಕಿ, ಹುದುಗಿದ ಬೂದಿ (ತಣ್ಣನೆ ಬೂದಿ) ಮುಚ್ಚಿದ ಕೆಂಡ, ಅಲ್ಲಾ ? **ಬೋಧ ತಂಪು ಮಂಜುಗಡ್ಡೆ** : ಜೀವಂತ **ಪರಿತಾಪ**. ಕವನ ವಾಲ್ಮೀಕಿಯ 'ಪರಿತಾಪ', 'ಅಸೂಯೆ' ಗ್ರಹಿಸುತ್ತದೆ, ಬೇಟೆ ಸುಖ ಗ್ರಹಿಸುತ್ತದೆ. ಬೇಟೆಯ ಹಿಂಸೆ ಅಷ್ಟಾಗಿ ಗಮನಿಸುವುದಿಲ್ಲ. ಒಟ್ಟಿನಲ್ಲಿ ಶೋಕ ಶ್ಲೋಕದ ಬುನಾದಿಯಾದ ಕ್ರೌರ್ಯ ವನ್ನು ಗಮನಿಸುತ್ತದೆ. ಎಷ್ಟೇ ಅಲ್ಪ ಪ್ರಮಾಣದಲ್ಲಾದರೂ—ಅನು ಕಂಪ ಕಾರುಣ್ಯಗಳ ಸುಳ್ಳನ್ನು ಹೊರಗೆಡಹುತ್ತದೆ; ಮುಖ್ಯವಾಗಿ ಎಷ್ಟು ಒಳ್ಳೆಯ ಕವನವೋ ಅಷ್ಟೇ ಗಂಭೀರವಾದ ವಿಮರ್ಶೆಯೂ ಹೌದು, ನಿಮ್ಮ **ಮಾ ನಿಷಾದ.**

—ಪೋಲಂಕಿ ರಾಮಮೂರ್ತಿ

●

ಇತಿಹಾಸದ ಗೆರೆಗಳು

ಡಿ. ಹೊಸಳ್ಳಿ ಶಿವು

ಭೂತಾಯಿಂ ಮಡಿಲಿಂದ
ಮೊಳೆತ ಬೀಜವಾಗಿ ಹೊರಬಿದ್ದಾಗ
ಕುಡಿಯಲು ವ್ವನ ಎದೆಯಾಗೆ ಇರಲಿಲ್ಲ ಹಾಲು.
ಸೂರಿನ ಕಿಂಡಿಗಳ ನಡುವೆ ಆಕಾಶ ದಿಟ್ಟಿಸಿದೆ.
ಮೋಡಗಳಲ್ಲಿ ಹನಿ ಬೀಳುವ
ಸೂಚನೆ ಕಂಡು ಬರಲಿಲ್ಲ.

ತ್ರಾಣ ನೀಗಲು ಸುತ್ತಲೂ ಕಣ್ಣಾಡಿಸಿದೆ :
ಕಗ್ಗತ್ತಲೆಯ ಲೋಕದೊಳಗೆ
ನಿಶ್ಯಕ್ತರಾಗಿ ನಿಂತಿದ್ದ ಕಲ್ಲು ದೇವತೆಗಳು!
'ಕಾಯಕವೆ ಕೈಲಾಸ' 'ದುಡಿಮೆಯೇ ದೇವರು' — ಎಂಬ
ಜನರ ಗುಡಿಸಲುಗಳು
ದಂಡಿಸಿಕೊಂಡವರ ಮಹಲುಗಳು
ಗೊಮ್ಮಟನಷ್ಟೇ ಸತ್ಯವಾಗಿ ನಿಂತಿದ್ದವು !

ಪ್ರಶ್ನಾರ್ಥಕವಾಗಿ ಅವ್ವನ ಮುಖ ನೋಡಿದೆ. ಅಲ್ಲಿ;
ಇತಿಹಾಸದುದ್ದಕ್ಕೂ ಬರೆಹಾಕಿದ್ದ ಗೆರೆಗಳು
ಎದ್ದು ಕಂಡವು ದಪ್ಪನಾಗಿ
ನಾನು, ನನ್ನವ್ವ ಹೆತ್ತ ತಪ್ಪಿಗಾಗಿ
ಕೂತ ಮಹಲಿನಿಂದ ಹೊರಬಿದ್ದ ಶಾಸನವ
ಅಪ್ಪನ ನೇಗಿಲಲ್ಲಿ ಸಾಲು ಸಾಲಾಗಿ ಬರೆದೆ.

ನನ್ನವ್ವನ ಮುಖದ ಗೆರೆಗಳ ಅಳಿಸಲೆಂದು
ಗುದ್ದಲಿ ಹಾರೆ ಪಿಕಾಸಿಗಳೆಲ್ಲ ಬರೆದರೂ
ಮತ್ತದೇ ಗೆರೆಗಳು ದಪ್ಪನಾಗಿ
ಪರಂಪರೆಯಾಗಿ ಗೋಚರಗೊಂಡಾಗ
ಉರಿಯುತ್ತಿದ್ದ ಸೂರ್ಯ ಕಪ್ಪಾದಂತೆ
ನಗುತ್ತಿದ್ದ ಆಕಾಶ ಕೆಂಪಾದಂತೆ ಕಂಡವು.

ಸಂಪಾದಕೀಯ ಲೇಖನಗಳು

ಚಂಪಾ

೧. ಬೆರಳಚ್ಚಿನ ಬ್ರಹ್ಮಚಾರಿ : ಒಂದು ಸಂದರ್ಶನ

ಸಂಕ್ರಮಣ: ೧೩೫–೧೩೬ರ (ಏಪ್ರಿಲ್–ಮೇ ೧೯೮೩) ಸಂಚಿಕೆಯಲ್ಲಿ 'ಕನ್ನಡ ಲಿಪಿ ಮತ್ತು ಅದರ ಸುಧಾರಣೆ' ಕುರಿತ ಲೇಖನ ಹಾಗೂ ಇಂಗ್ಲೀಷ್-ಕನ್ನಡ ದ್ವಿಭಾಷಾ ಬೆರಳಚ್ಚು ಯಂತ್ರ ಕುರಿತು ಅಲ್ಲಿ ಬರೆದ ಪ್ರಸ್ತಾಪ ಈಗಾಗಲೇ ಅನೇಕ ವಲಯಗಳಲ್ಲಿ ಸಾಕಷ್ಟು ಕುತೂಹಲ ಕೆರಳಿಸಿದೆ.

ಈ ಯಂತ್ರದ ಹಾಗೂ ಸರಳ ಕನ್ನಡ ಲಿಪಿಯ ಶಿಲ್ಪಿ ನಿ. ಉಮಾಕಾಂತ ಕೂಡ ಅಷ್ಟೇ ಸರಳ ವ್ಯಕ್ತಿ. ಎರಡೂ ಭಾಷೆಗಳಲ್ಲಿ ಅಷ್ಟೇ ನಿರರ್ಗಳವಾಗಿ ಪಟಪಟ ಅಂತ ಮಾತಾಡುವವರು. ಕರ್ನಾಟಕ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಮೇಲ್ ಮಹಡಿಗೆ ನೀವು ಹೋದರೆ ಯಾವುದಾದರೂ ರೂಮಿನಿಂದ ನಿರಾತಂಕವಾದ, ನಿರ್ಮಲವಾದ ನಗುವಿನ ತೆರೆಗಳು ಬಂದು ನಿಮ್ಮನ್ನು ಅಪ್ಪಳಿಸಿದರೆ ಆ ರೂಮಿನಲ್ಲಿ ಉಮಾಕಾಂತರಿದ್ದಾರೆಂವೇ ನೀವು ತಿಳಿಯಬೇಕು. ಅವರ ರೂಮಿನದು ಸದಾ ತೆರೆದ ಬಾಗಿಲು. ಬಂದವರನ್ನೆಲ್ಲ 'ಬನ್ನಿ ಸ್ವಾಮೀ' ಎಂದು ಅಚ್ಚಗನ್ನಡದಲ್ಲಿ ಸ್ವಾಗತಿಸುತ್ತಾರೆ.

ಭೌತಶಾಸ್ತ್ರ ಸಂಶೋಧನೆಯಲ್ಲಿ ಖ್ಯಾತ ನಾಮರಾದ ಉಮಾಕಾಂತ ಯಾವಾಗಲೂ 'ಏನಾದರೂ ಮಾಡುತಿರು ತಮ್ಮ' ಅನ್ನುವ ಪೈಕೀ ಮನುಷ್ಯ. ತಲೆಯಲ್ಲಿ ಅನೇಕ ಗುಂಗೀ ಹುಳಗಳು; ಹಲವಾರು ಹವ್ಯಾಸಗಳು.

"ಈ ಹುಚ್ಚು ನಿಮಗೆ ಯಾವಾಗಿನಿಂದ ಸುರುವಾಯ್ತು ?"
ನನ್ನ ಪ್ರಶ್ನೆಗೆ ಉತ್ತರವಾಗಿ ಅವರೊಂದು ಕತೆಯನ್ನೇ ಹೇಳಿದರು. ಉಮಾಕಾಂತರ ಸೋದರ ರಾಜಶೇಖರ ಚಿತ್ರದುರ್ಗದಲ್ಲಿ ವ್ಯವಸಾಯ ಮಾಡಿಕೊಂಡಿದ್ದಾರೆ. ಕನ್ನಡ

ವಲ್ಲದೆ ಸಂಸ್ಕೃತ, ತೆಲುಗು, ತಮಿಳು ಇತ್ಯಾದಿ ಕಲಿತಿದ್ದಾರೆ. ಕನ್ನಡ ಹಾಗೂ ತೆಲುಗು ಲಿಪಿಗಳ ಸಾಮ್ಯ ಎಲ್ಲರಿಗೂ ಗೊತ್ತಿರುವ ವಿಚಾರ. ಕನ್ನಡ ಲಿಪಿ ಸಂಸ್ಕರಣದ ಬಗ್ಗೆ ರಾಜಶೇಖರರಿಗಿರುವ ೧೯೪೬ ಕ್ರಮೇಣ ಉಮಾಕಾಂತರಿಗೆ ಸ್ಥಾನಾಂತರ ಹೊಂದಿ ಅದೀಗ ಸಾಧನೆಯ ಒಂದು ಹಂತವನ್ನೇ ತಲುಪಿದೆ.

ಉಮಾಕಾಂತರ ಟೇಬಲ್ಲಿನ ಮೇಲೆ ಸದಾ ಹಾಜರಿರುವ ಟೈಪ್‌ರೈಟರು ಈಗ ಬಹುಶಃ ಪ್ರಪಂಚದ ಪ್ರಪ್ರಥಮ ದ್ವಿಭಾಷಾ ಟೈಪ್‌ರೈಟರಾ ಎಂದೇ ಹೇಳಬೇಕು. ಅದಕ್ಕೂ ಒಂದು ಇತಿಹಾಸವೇ ಇದೆ. ಉಮಾಕಾಂತರ ತಂದೆ ಚಿತ್ರದುರ್ಗದಲ್ಲಿ ಲಾಯರಾಗಿದ್ದಾಗ ಈಗಲ್ಸ್(Eagles) ಎಂಬ ಫಾರೆಸ್ಟ್ ಅಧಿಕಾರಿ ನಿವೃತ್ತಿ ಹೊಂದಿ ಹೋಗುವವರು ಈ ಯಂತ್ರ ಕೊಟ್ಟು ಹೋದರಂತೆ. ಅದು ರಾಯಲ್ ಟೈಪ್‌ರೈಟರು. ಈ ಘಟನೆ ನಡೆದದ್ದು ೧೯೩೭ರಲ್ಲಿ. ನಾಲ್ಕೂವರೆ ದಶಕಗಳ ನಂತರ ಆ ಯಂತ್ರ ಹೊಸ ಅವತಾರ ತಾಳಿದೆ.

ಅಂದಹಾಗೆ ನಿ. ಉಮಾಕಾಂತ ಅವರ ತಂದೆ ಯಾರು ಅಂತ ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಕರ್ನಾಟಕದ ಮಾಜಿ ಮುಖ್ಯಮಂತ್ರಿ ಸಿದ್ದವ್ವನಹಳ್ಳಿ ನಿಜಲಿಂಗಪ್ಪ ಅವರ ಮಕ್ಕಳೇ ಉಮಾಕಾಂತ ಹಾಗೂ ರಾಜಶೇಖರ. ಉಮಾಕಾಂತರನ್ನು ನೋಡಿದಾಗ 'ಇವರನ್ನು ಎಲ್ಲೊ ನೋಡಿದ್ದೇನಲ್ಲ' ಅಂತ ನಿಮಗನ್ನಿಸಿದರೆ ಅದಕ್ಕೆ ಕಾರಣ : ತಂದೆ ಮಕ್ಕಳ ಅದ್ಭುತ ರೂಪಸಾಮ್ಯ. ಅದೇ ದುಂಡು ಮುಖ. ಅದೇ ನಗೆ. ಆದರೆ ಉಮಾಕಾಂತರು ಎಂದಿಗೂ ತಮ್ಮ ತಂದೆಯ ಬಗ್ಗೆ ಹೇಳಿಕೊಳ್ಳುವುದಿಲ್ಲ.

'ನಿಮ್ಮದೊಂದು ಫೋಟೋ ಬೇಕು' ನಾನೆಂದೆ.

'ಅದ್ಯಾಕೆ ? ನಾನೇನೂ ನೋಡಲು ಅಷ್ಟು ಸ್ಮಾರ್ಟ್ ಇಲ್ಲ.'

'ಇಲ್ಲ. ನೀವು ಭಾಳ ಸ್ಮಾರ್ಟ್ ಆದೀರಿ'

'ಈ ಮಾತು ಯಾವ ಹುಡುಗಿಯೂ ನನಗೆ ಹೇಳಿಲ್ಲವಲ್ಲ!'

—ಎನ್ನುತ್ತ ಉಮಾಕಾಂತ ಗಹಗಹಿಸಿ ನಗತೊಡಗಿದರು. ಹೇಳಿ ಕೇಳಿ ಅವರೊಬ್ಬ ಬ್ರಹ್ಮಚಾರಿ. ಭೆಟ್ಟಿಯಾದಾಗೊಮ್ಮೆ ನನ್ನ (ನಾನೊಬ್ಬ ಗೃಹಸ್ಥ !) ಹಾಗೂ ಅವರ ನಡುವೆ ಎರಡೂ 'ಆಶ್ರಮ'ಗಳ ಬಗ್ಗೆ ಸಾಕಷ್ಟು ವಾದ ವಿವಾದ ನಡೆಯುತ್ತದೆ.

'ಮದುವೆ ಆದರೆ creative ಆಗಿ ನೀವೇನೂ ಮಾಡುವುದು ಸಾಧ್ಯವಿಲ್ಲ,' ಎಂದು ಅವರ ವಾದ, 'ಮದುವೆಯಾಗುವುದೇ ಒಂದು creative ಕೆಲಸ'–ಎಂದು ನನ್ನ ವಾದ. ಇಷ್ಟೆಲ್ಲಾ ಇದ್ದರೂ ಚಿಕ್ಕ ಮಕ್ಕಳ ಬಗ್ಗೆ ಅವರಿಗೆ ವಿಪರೀತ ಮೋಹ.

ಇರಲಿ. ಮತ್ತೆ ಯಾಂತ್ರಿಕ ವಿಷಯಕ್ಕೆ ಬರೋಣ

ಕನ್ನಡ ಲಿಪಿ ಸಂಸ್ಕರಣಕ್ಕೂ ಒಂದು ಚರಿತ್ರೆ ಇದೆ. ಬಿ.ಎಂ. ಶ್ರೀಕಂಠಯ್ಯನವರು ಈ ಬಗ್ಗೆ ಗಾಢವಾಗಿ ಯೋಚಿಸಿದ್ದರು. ೧೯೪೬ ರ ಸುಮಾರಿಗೆ ಕ.ಮಾಧವ ಎಂಬುವರು 'ಕನ್ನಡ ಲಿಪಿ ಸುಧಾರಣೆ' ಎಂಬ ಪ್ರಬಂಧವನ್ನು ಬರೆದಿದ್ದರಂತೆ. (ಈ ಕ. ಮಾಧವ ಎಂಬುವರು ರಂ. ರಾ. ದಿವಾಕರರ ಸಂಗಾತಿ ಕಬ್ಬೂರ ಮಾಧವ ರಾಯರೇ ಇರಬೇಕೆಂದು ಉಮಾಕಾಂತ ಹೇಳಿದರು.) ಹೀಗೆ ಅನೇಕ ನೆಲೆಗಳಲ್ಲಿ ಈ ವಿಚಾರ ಬೆಳೆದು ಬಂದಿದ್ದರೂ ಒಂದೇ ಬೆರಳಚ್ಚು ಯಂತ್ರದಲ್ಲಿ ಎರಡೂ ಭಾಷೆಗಳ ಲಿಪಿಗಳನ್ನು ಅಡಕಗೊಳಿಸುವ ಯೋಚನೆ-ಯೋಜನೆಗಳು ಮಾತ್ರ ಉಮಾಕಾಂತರವೇ.

ಭಾಷೆಯ ಧ್ವನಿಗಳ ಬದಲಾವಣೆಗಳನ್ನು ಒಪ್ಪಿಕೊಳ್ಳುವಷ್ಟು ಸಲೀಸಾದ ರೀತಿಯಲ್ಲಿ ಲಿಪಿಯ ಬದಲಾವಣೆಯನ್ನು ಜನ (ಅಂದರೆ ಭಾಷೆಯ ಬಳಕೆಗಾರರು) ಒಪ್ಪಿಕೊಳ್ಳುವುದಿಲ್ಲ. ಇಂಗ್ಲಿಷ್ ಲಿಪಿ ಸಂಸ್ಕರಣದ ಬಗ್ಗೆ ಜಾರ್ಜ್ ಬರ್ನಾರ್ಡ್ ಶಾ ಮಾಡಿದ ವಿಫಲ ಪ್ರಯತ್ನಗಳನ್ನು ಇಲ್ಲಿ ನೆನೆಯಬಹುದು. ಅದಕ್ಕೆಂದೇ ಇಂಥ ಬದಲಾವಣೆಯನ್ನು ಹಂತ ಹಂತವಾಗಿ ನಾವು ಅಜಮಾಸು ಐದು ದಶಕಗಳ ಅವಧಿಯಲ್ಲಿ ಸಾಧಿಸಬಹುದು-ಎನ್ನುತ್ತಾರೆ ಉಮಾಕಾಂತ. ಮೊದಲ ಹಂತದಲ್ಲಿ ಅವರು ಮುಂದೆ ಮಾಡಿದ ಸರಳಗನ್ನಡ ಲಿಪಿಯನ್ನು ಯಾರೇ ಆದರೂ ಒಂದೇ ಒಂದು ಗಂಟೆಯ ಅವಧಿಯಲ್ಲಿ ಕಲಿಯಬಹುದು.! ('ಸರಕಾರಿ ಅಧಿಕಾರಿಗಳು ಕೂಡ!'–ಎಂದು ಉಮಾಕಾಂತ ಹೇಳಿದಾಗ ಆ ಮಾತಿನಲ್ಲಿ ವ್ಯಂಗ್ಯವಿರಲಿಲ್ಲ.)

ಈ ದ್ವಿಭಾಷಾ ಯಂತ್ರ ಯಾಕೆ? ಒಂದು ಪ್ರಶ್ನೆ.

ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಿದೆ. ಅದನ್ನು ಪ್ರಾಮಾಣಿಕವಾಗಿಯೇ ಅನುಷ್ಠಾನಕ್ಕೆ ತರುತ್ತಿದೆ ಸರಕಾರ--ಅಂದುಕೊಳ್ಳೋಣ. ಟೈಪ್‌ರೈಟರುಗಳಿಲ್ಲ–ಎಂಬ ಒಂದು ನೆಪವನ್ನು ಕೆಲವರು ಮುಂದಿಡುತ್ತಿದ್ದಾರೆ ಈಗ ಕಚೇರಿಗಳಲ್ಲಿರುವ ಇಂಗ್ಲಿಷ್ ಟೈಪ್‌ರೈಟರುಗಳನ್ನೇ ಸುಲಭವಾಗಿ ಇಂಗ್ಲಿಷ್ ಕನ್ನಡ ಎಂದು ಬದಲಿಸಿಕೊಳ್ಳಬಹುದು. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ಮಾಡಲೇಬೇಕಾದ ವಾಣಿಜ್ಯ ಸಂಸ್ಥೆಗಳು ಎರಡೂ ಭಾಷೆಗಳನ್ನು ಬಳಸಲೇಬೇಕಾಗುತ್ತದೆ. ಅವರಿಗೆ ಈ ದ್ವಿಭಾಷಾಯಂತ್ರ ತುಂಬ ಅನುಕೂಲವಾಗುತ್ತದೆ. ಲೈನೋ ಟೈಪ್ ಹಾಗೂ ಮೋನೋಟೈಪ್ ಮುದ್ರಣ ಯಂತ್ರಗಳನ್ನು ಕೂಡ ಹೀಗೆ ಮಾರ್ಪಾಡಿಸಿಕೊಳ್ಳಬಹುದೆಂದು ಉಮಾಕಾಂತರ ಸಲಹೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವರು ಹೇಳುತ್ತಾರೆ: ಇಂಗ್ಲಿಷ್ ಹಾಗೂ ಯಾವುದೇ ಒಂದು ಭಾರತೀಯ ಭಾಷೆಯ ಲಿಪಿಗಳನ್ನು ಹೀಗೆ ಒಂದೇ ಯಂತ್ರದಲ್ಲಿ

ಅಳವಡಿಸುವುದು. ಸಾಧ್ಯ. ಈಗ ಭಾರತದ ಇತರ ಭಾಷೆಗಳ ಲಿಪಿಗಳನ್ನೂ ಅವರು ವೈಜ್ಞಾನಿಕವಾಗಿ ಅಭ್ಯಾಸ ಮಾಡುತ್ತಿದ್ದಾರೆ; ಭಾರತದ ಎಲ್ಲ ಲಿಪಿಗಳಿಗೆ ಮೂಲವಾದದ್ದು ಬ್ರಾಹ್ಮೀಲಿಪಿ; ಆದ್ದರಿಂದ ಈ ಕೆಲಸ ಸುಲಭ. (ಸಂಸ್ಕೃತಕ್ಕೆ ತನ್ನದೇ ಆದ ಸ್ವಂತ ಲಿಪಿ ಎಂಬುದೇ ಇರಲಿಲ್ಲ; ಅನಂತರದ ಒಂದು ಮಧ್ಯಂತರದ ಅವಧಿಯಲ್ಲಿ ಅದು ದೇವನಾಗರಿಯನ್ನು ಹೊಂದಿತಂತೆ.)

ಏಪ್ರಿಲ್ ೧೬ರಂದು ಮುಖ್ಯಮಂತ್ರಿ ಹೆಗಡೆಯವರು ವಿಶ್ವಕನ್ನಡ ಮೇಳ ಕುರಿತು ಕರೆದ ಸಾಹಿತಿ, ಕಲಾವಿದರ ಸಭೆಯಲ್ಲಿ ಉಮಾಕಾಂತರ ದ್ವಿಭಾಷಾ ಸಾಹಸದ ಪ್ರಸ್ತಾಪ ಬಂದಿತು. ಕೂಡಲೇ ವಿಷಯ ಕೈಗೆತ್ತಿಕೊಂಡ ಸರಕಾರ 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ'ಯ ಸ್ಥಳೀಯ ಅಧಿಕಾರಿಗಳ ಮುಖಾಂತರ ಉಮಾಕಾಂತರನ್ನು ಸಂಪರ್ಕಿಸಿದೆ. ಕನ್ನಡ ಪರವಾದ ಕಾರ್ಯಕ್ರಮಗಳ ಮೂಲಕ ತನ್ನ ನೆಲೆಯನ್ನು ಭದ್ರ ಪಡಿಸಿಕೊಳ್ಳಬೇಕಾಗಿರುವ ಹೆಗಡೆ ಸರಕಾರ ಈ ದಿಸೆಯಲ್ಲಿ ನಿರ್ಣಾಯಕ ಹೆಜ್ಜೆ ಇಡಬೇಕಾಗಿದೆ.

ಕೇವಲ ಕೆಲವೇ ಕೆಲವು ಬದಲಾವಣೆಗಳನ್ನು ಹೊಂದಿರುವ ಈ ಸರಳಗನ್ನಡ ಲಿಪಿಯನ್ನು ಸರಕಾರವಾಗಲಿ, ಸಾರ್ವಜನಿಕರಾಗಲಿ ಒಪ್ಪದೆ ಇರಲು ಯಾವ ಕಾರಣವೂ ಇರಬೇಕಾಗಿಲ್ಲ ಎಂದು ಉಮಾಕಾಂತರ ಅಭಿಪ್ರಾಯ, ಮುಖ್ಯವಾಗಿ 'ತಾಂತ್ರಿಕ'ವಾಗಿರುವ ಈ ಯೋಜನೆಯನ್ನು ಒಂದು 'ವಿವಾದ'ದ ಪ್ರಶ್ನೆಯಾಗಿ ಮಾಡಬಾರದು. ವಿಷಯ ಬಲ್ಲ ತಜ್ಞರ ಸಮಿತಿಯೊಂದು ಇದನ್ನು ಪರಿಶೀಲಿಸಿ ಸರಕಾರಕ್ಕೆ ಸರಿಯಾದ ದಾರಿ ತೋರುವುದು ಅವಶ್ಯ.

"ನಾನು ಮಾತಾಡಿದ್ದನ್ನೆಲ್ಲ ಬರೆಯ ಗಿರಿವೀರಿ ಮತ್ತೆ! ನಾನೊಬ್ಬ ಒಳ್ಳೇ ಬ್ರಹ್ಮಚಾರಿ ಅಂದುಕೊಂಡಿದ್ದೇನೆ," ಅಂದರು ನಗುತ್ತ.

"ಬ್ರಹ್ಮಚಾರಿಗಳೂ ಒಳ್ಳೆಯವರಿರುತ್ತಾರೆ ಎಂದು ಜನ ನಂಬುವ ಹಾಗೆ ಬರೆಯುತ್ತೇನೆ, ಆಯಿತೇ?" ಎಂಬ 'ಆಶ್ವಾಸನೆ' ಕೊಟ್ಟು ನಾನು ಅವರ ಸಂದರ್ಶನ ಮುಗಿಸಿ ಹೊರಬಂದೆ.

೨. ವೃತ್ತಿ ರಂಗಭೂಮಿ: ಒಂದು ಚಿಂತನೆ

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರಕ್ಕೆ ನೀವು ಯಾವುದೇ ಸಂಜೆ ಹೋದರೂ ಅಲ್ಲಿಯ ಆವರಣ ಗಿಜಿಗಿಜಿ ಅನ್ನುತ್ತಿರುತ್ತದೆ. ಯಾವುದೋ ಹವ್ಯಾಸಿ ತಂಡದ ನಾಟಕ ಪ್ರೇಕ್ಷಕರು ಕ್ಯೂವಲ್ಲಿ ನಿಂತು ತಿಕೇಟು ಪಡೆದು ಶಿಸ್ತಿನಿಂದ ವರ್ತಿಸಿ ನೋಡಿ ಆನಂದಿಸುತ್ತಾರೆ. ಹವ್ಯಾಸಿ ರಂಗಭೂಮಿ ಕಳೆದ ಒಂದೂವರೆ ದಶಕದಲ್ಲಿ

"ಜನಪ್ರಿಯತೆ"ಯ ಒಂದು ಚಿತ್ರ ಇದು, ಇದು ನಮ್ಮ ರಾಜಧಾನಿಯ ಒಂದು ಚಿತ್ರ ಎಂಬುದನ್ನು ಮರೆಯುವಂತಿಲ್ಲ

ಇತ್ತ-ಹುಬ್ಬಳ್ಳಿ, ದಾವಣಗೆರೆ, ಬಿಜಾಪುರ, ಗದಗು, ಬೆಳಗಾವಿ ಮುಂತಾದ ಉತ್ತರ ಕರ್ನಾಟಕದ ಜಿಲ್ಲಾ ಕೇಂದ್ರಗಳಲ್ಲಿ ಕಂಪನಿ ನಾಟಕಗಳ ಥೇಟರಿನ ಎದುರಿಗೂ ಅದೇ ದೃಶ್ಯ. ಜಾತ್ರೆಯ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ನೋಡಬೇಕು. ಹಳ್ಳಿ ಹಳ್ಳಿಗಳಿಂದ ಬಂದ ನಾಟಕಪ್ರೇಮಿಗಳ ಚಕ್ಕಡಿಗಳು ಸಾಲು ಸಾಲಾಗಿ ನಿಂತಿರುತ್ತವೆ. ನಾಟಕ ಯಾವುದೇ ಆಗಿರಬಹುದು-ಪೌರಾಣಿಕ. ಸಾಮಾಜಿಕ, ಐತಿಹಾಸಿಕ-ಜನ ತಾಸುಗಟ್ಟಲೆ ಕುಂತು ನಾಟಕದ ಪ್ರತಿಯೊಂದು ಕ್ಷಣದಲ್ಲೂ ಪಾಲ್ಗೊಂಡು ಆನಂದಿಸುತ್ತಾರೆ. ಜನಪ್ರಿಯತೆಯ ಇನ್ನೊಂದು ಚಿತ್ರವಿದು,

ಈ ಎರಡು ಚಿತ್ರಗಳು ಧ್ವನಿಸುವ ಕರ್ನಾಟಕ ರಂಗಭೂಮಿಯ ಒಟ್ಟು ಸಮಕಾಲೀನ ಸನ್ನಿವೇಶ ಮಾತ್ರ ವಿಚಿತ್ರವಾಗಿದೆ. ಯಾವುದೇ ಸಮಾಜದ ಸಮಷ್ಟಿ ಬದುಕಿನಲ್ಲಿ ಸಾಹಿತ್ಯದ ಉಳಿದ ಪ್ರಕಾರಗಳಿಗಿಂತ "ನಾಟಕ" ಮಾಧ್ಯಮವು ಆಡುವ ಪಾತ್ರ ವಿಶಿಷ್ಟವಾದುದು. ಏಕೆಂದರೆ ಕಾವ್ಯ, ಕತೆ, ಕಾದಂಬರಿಗಳು ಕೇವಲ ಓದುಗ-ಕೇಂದ್ರಿತ ಅನುಭವಗಳಾಗಿದ್ದರೆ, ರಂಗಪ್ರಯೋಗ ಪಡೆಯುವ ನಾಟಕ ಮಾತ್ರ ಇಡೀ ಸಮಷ್ಟಿಯನ್ನೇ ಒಳಗೊಂಡಿರುತ್ತದೆ. ಹೀಗಾಗಿ ರಂಗಭೂಮಿಗೆ ಹಲವಾರು ಮಗ್ಗಲುಗಳಿದ್ದರೂ—ಉದಾ. ವೃತ್ತಿ, ಹವ್ಯಾಸಿ, ಜಾನಪದ ಮುಂತಾದವುಗಳು. ಅವೆಲ್ಲ ಪರಸ್ಪರ ಪೂರಕವಾಗಿ ತಮ್ಮ ತಮ್ಮ ಬೆಳವಣಿಗೆ ಸಾಧಿಸುವುದು ಅಪೇಕ್ಷ-ಣೀಯ.

ಕರ್ನಾಟಕದಲ್ಲಿ ಈ ಪರಿಸ್ಥಿತಿ ಸದ್ಯ ಇಲ್ಲ. ಮೊದಲ ಹಂತಗಳಲ್ಲಿ ಕರ್ನಾಟಕದಿಂದ ಸಾಕಷ್ಟು ಸ್ಫೂರ್ತಿ ಪಡೆದ ಮರಾಠಿ ರಂಗಭೂಮಿ ಇಂದಿಗೂ ಹೆಚ್ಚುಕಡಿಮೆ ಸಮಗ್ರ ವಾಗಿಯೇ ಮುಂದುವರಿಯುತ್ತಿದೆ. ನಾಟಕ ಯಾವುದೇ ಇರಲಿ, ಎಲ್ಲ ಸಾಮಾಜಿಕ ವರ್ಗಗಳಿಂದ ಬಂದ ಪ್ರೇಕ್ಷಕ ಸಮುದಾಯ ನಾಟಕ ಮಂದಿರದಲ್ಲಿ ಸೇರಿರುತ್ತದೆ. ಆ ನಾಟಕ ಅವರಿಗಾಗಿ, ಈ ನಾಟಕ ಇವರಿಗಾಗಿ ಎಂಬ ಭೇದ ಭಾವ ನಮ್ಮಲ್ಲಿ ಒಡೆದು ಕಾಣುವಷ್ಟು ಬೇರೆಡೆ ಇರಲಿಕ್ಕಿಲ್ಲ ಅನ್ನಿಸುತ್ತದೆ.

ಇದಕ್ಕೇ ನಾವು ವೃತ್ತಿ ಹಾಗೂ ಹವ್ಯಾಸಿಗಳ ನಡುವಿನ ಕಂದಕ, ಕಂದಕ ಅನ್ನುವುದು. ಈ "ಕಂದಕ" ಅನೇಕ ಅರ್ಥದಲ್ಲಿ ಕೆಲಸ ಮಾಡುತ್ತದೆ. ಕಥೆಯ ಮೂಲವಸ್ತು ಒಂದೇ ನೆಲೆಯಿಂದ ಬಂದಿದ್ದರೂ ಅದನ್ನು ನಾಟಕವಾಗಿ ಹೆಣೆಯುವ ರೀತಿ, ಸನ್ನಿ ವೇಶಗಳ ಜೋಡಣೆ, ಪಾತ್ರ ಚಿತ್ರಣ, ಸಂಭಾಷಣೆಯ ಶೈಲಿ, ಹಾಡು ಹಾಗು ನೃತ್ಯ ಗಳ ಬಳಕೆ, ಸಂಗೀತ ಹಾಗೂ ಬೆಳಕಿನ ಸಂಯೋಜನೆ, ನಾಟಕದ ಪ್ರಾರಂಭ ಹಾಗೂ

ಕೊನೆ, ಪ್ರಚಾರದ ವೈಖರಿ–ಈ ಎಲ್ಲ ಬಗೆಗಳಲ್ಲೂ ವೃತ್ತಿನಾಟಕ ಹಾಗೂ ಹವ್ಯಾಸಿ ನಾಟಕದ ನಡುವೆ ಒಡೆದು ಕಾಣುವ ಅಂತರಗಳು ಇವೆ.

"ಜನಪ್ರಿಯತೆ"ಯ ಮಾನದಂಡದಿಂದಲೂ ಈ ಮಾತು ಖರೆ. ಅನೇಕ ಹವ್ಯಾಸಿ ತಂಡಗಳು, ತಾತ್ಕಾಲಿಕ ಸಂಭವಗಳು : ಒಂದೋ ಎರಡೋ ಪ್ರಯೋಗ ಮಾಡು ವಷ್ಟರಲ್ಲಿ ಮಗ್ಗಲು ಮಡಚಿ ಮೂಲೆ ಹಿಡಿಯುವಂಥವು. ಆದರೆ ಹೆಚ್ಚಿನ "ಕಂಪನಿ" ಗಳಿಗೆ ದಶಕಗಳ ಇತಿಹಾಸವೇ ಇವೆ ಐವತ್ತು, ನೂರು ಪ್ರಯೋಗಗಳೆಂದರೆ ಅವರಿಗೆ ಅತಿ ಸಾಮಾನ್ಯ ಸಂಗತಿ. ಈ ಅಭಿಪ್ರಾಯಕ್ಕೆ ಅಪವಾದವಾಗಿರುವ ಹವ್ಯಾಸಿ ತಂಡ ಗಳೂ, ವೃತ್ತಿ ತಂಡಗಳೂ ಇವೆ ಎಂಬುದನ್ನು ನಾನು ಮರೆತಿಲ್ಲ.

ಯಾವುದೋ ಒಂದು ಗಟ್ಟಿಮುಟ್ಟಾದ "ನೌಕರಿ"ಯಲ್ಲಿದ್ದುಕೊಂಡು, ನಾಟಕವನ್ನು 'ಹವ್ಯಾಸ'ವನ್ನಾಗಿ ಮಾಡಿಕೊಂಡು ರಂಗದ ಮೇಲೆ ಅನೇಕ "ಪ್ರಯೋಗ" ಮಾಡುವ ಸಾಧ್ಯತೆ ಹವ್ಯಾಸಿ ಕಲಾವಿದರಿಗುಂಟು. ಹೋದರೊಂದು ಕಲ್ಲು, ಬಂದರೊಂದು ಹಣ್ಣು–ಎಂಬ ಪ್ರಾಯೋಗಿಕ ಮನೋಭಾವವಿದು. ಆದರೆ ವೃತ್ತಿಕಲಾವಿದರಿಗೆ ಮಾತ್ರ ಇದು ದಿನನಿತ್ಯದ ಊಟದ ಸಮಸ್ಯೆ. ಗಲ್ಲಾಪೆಟ್ಟಿಗೆ ಸರಿಯಾಗಿ ತುಂಬ ದಿದ್ದರೆ ಮರುದಿನದ "ಬೋರ್ಡಿಂಗಿ"ನಲ್ಲಿ ಒಲೆಗಳು ತಣ್ಣಗೇ ಉಳಿಯುವ ಸಂಭವ ಜಾಸ್ತಿ. ಮಾಲಕರಾದವರೇನೋ ಆರಾಮಾಗಿರಬಹುದು "ನಟಿ"ಯರು ಕಂಪನಿ ಬಿಟ್ಟು ಹೋಗಬಾರದೆಂದು ಅವರನ್ನೇ ಮದುವೆಯಾದ ಮಾಲಕರ "ಆರಾಮು" ಹೇಗಿರಬಹುದು–ಯೋಚಿಸತಕ್ಕ ಅಂಶವೇ. ಆದರೆ ಹಿಂದೆ ಮುಂದೆ ಯಾವ ಗತಿಯು ಇಲ್ಲದೆ, ನಾಟಕದ ಹುಚ್ಚಿಗೆ ಬಿದ್ದು ಕಂಪನಿ ಸೇರಿದ ಸಾಮಾನ್ಯ ಕಲಾವಿದರ ಪಾಡು ಶೋಚನೀಯ. ಥಳಥಳಿಸುವ ಲೈಟಿನ ಬೆಳಕಿನಲ್ಲಿ, ಪ್ರೇಕ್ಷಕರ ವಾಹ್‌ವಾ–"ವನ ಸ್ಮೋರ"ಗಳ ಗದ್ದಲವಲ್ಲಿ, ಬಣ್ಣದ ಮುಖ ತೊಟ್ಟು ಅಭಿನಯಿಸುವಾಗ ಮಾತ್ರ ಅವರಿಗೆ ಸಾರ್ಥಕತೆ. ಬಣ್ಣ ಅಳಿದಾಗ ಅಲ್ಲಿ ಕಾಣುವುದು ದುರಂತದ ಛಾಯೆ ಮಾತ್ರ ಮುಖದ ಮೇಲೆ ಸುಕ್ಕು ಮೂಡಿದಂತೆಲ್ಲ "ಹೀರೋ" ಹೋಗಿ 'ಅಣ್ಣ'ನ ಪಾರ್ಟು, "ಹಿರೋಯಿನ್" ಹೋಗಿ "ತಾಯಿ"ಯ ಪಾರ್ಟು ಮಾಡುತ್ತ ಕೊನೆಗೆ ಕಂಪನಿಗೆ ಬೇಕಾಗಿದ್ದರೂ, ನಾಟಕಕ್ಕೆ ಬೇಡವಾದ ಅನವಶ್ಯಕ ಹೊರೆಗಳಾಗಿ ಉಸಿರು ಹಾಕುವ ಕಲಾವಿದರನ್ನು ಕೇಳುವವರಾರು ? ಅವರ ಮುಪ್ಪು, ಅವರ ಹೆಂಡಿರು–ಮಕ್ಕಳ ವಸತಿ, ಶಿಕ್ಷಣ, ಆರೋಗ್ಯ–ಇಂಥ ಸಮಸ್ಯೆಗಳ ಬಗ್ಗೆ ಯಾರು ತಲೆ ಕೆಡಿಸಿ ಕೊಳ್ಳಬೇಕು ?

ಪ್ರೇಕ್ಷಕರು–ಅಂದರೆ ಸಾರ್ವಜನಿಕರು ಈ ಬಗ್ಗೆ ನಿರಾಸಕ್ತರು. ನಾಟಕ ನೋಡಲಿಕ್ಕೆ ಮಾತ್ರ ಹಣ ಕೊಟ್ಟು ನಾಟಕ ನೋಡಿ ಹೋದವರಿಂದ ಹೆಚ್ಚಿನವನ್ನು ಅಪೇಕ್ಷಿಸು ವದೂ ತಪ್ಪು. ನಮ್ಮ ಸರ್ವಾಂಗೀಣ ಅಭಿವೃದ್ಧಿಯ ಹೊಣೆ ಹೊತ್ತ ಸರಕಾರವೋ

ಕೆಲವರಿಗೆ ಮಾತ್ರ ಸಮೀಪ. ಹವ್ಯಾಸಿ ತಂಡದ ಅನೇಕ ಸದಸ್ಯರು ಪಟ್ಟಣವಾಸಿಗಳು. ಕೆಲವರು ಅಧಿಕಾರ ಕೇಂದ್ರಗಳಿಗೆ ಸಮೀಪವಿದ್ದವರು, ಪತ್ರಿಕೆ ಮುಂತಾದ ಸಮೂಹ ಮಾಧ್ಯಮಗಳ ಮೂಲಕ ಗಮನ ಸೆಳೆದುಕೊಳ್ಳಬಲ್ಲವರು. ಹೀಗಾಗಿ ಈ ವರೆಗೂ ಸರಕಾರದಿಂದಾಗಲಿ, ಅಕಾಡೆಮಿಗಳಿಂದಾಗಲಿ ಹೆಚ್ಚಿನ ನೆರವು ಪಡೆದವರು ಹವ್ಯಾಸಿ ಕಲಾವಿದರು, ಅದರಲ್ಲೂ ರಾಜಧಾನಿ ಬೆಂಗಳೂರಲ್ಲಿದ್ದವರು ಅಂದರೆ ವಿಧಾನ ಸೌಧದ ಮೂರನೆಯ ಮಹಡಿಗೆ ಚೆಂಗನೇ ನೆಗೆಯಬಲ್ಲವರು. ಒಟ್ಟು ವೃತ್ತಿ ಕಲಾವಿದರನ್ನಾಗಲಿ, ಗ್ರಾಮಾಂತರ ಪ್ರದೇಶದ ಹವ್ಯಾಸಿ ಜಾನಪದ ಕಲಾವಿದರನ್ನಾಗಲಿ ಸರಕಾರದ ಸಹಾಯಧನ ಮುಟ್ಟುವ ರೀತಿಯಲ್ಲಿ ಮುಟ್ಟಿಲ್ಲ. ಎಲ್ಲ ಕಡೆಗೆ ನಡೆಯುವಂತೆ ಇಲ್ಲಿಯೂ 'ರಾಜಕೀಯ' ನಡೆವ ಅನೇಕ ಪ್ರಸಂಗಗಳೂ ಇವೆ.

ಇನ್ನೂ ಒಂದು ವ್ಯಸನಪಡಬೇಕಾದ ಸಂಗತಿ. ಅನೇಕ ನಾಟಕಗಳನ್ನು ಬರೆದ, ಬರೆದು ಪ್ರಕಟಿಸಿದ ವೃತ್ತಿ ನಾಟಕಕಾರರ ಬಗ್ಗೆಯಾಗಲಿ, ನೂರಾರು ಪ್ರಯೋಗಗಳನ್ನು ಮಾಡುವ ಕಂಪನಿಗಳ ಸಾಧನೆಯ ಬಗ್ಗೆಯಾಗಲಿ, ಅಲ್ಲಿಯ ಪ್ರತಿಭಾನ್ವಿತ ನಟ-ನಟಿಯರ ಬಗ್ಗೆಯಾಗಲಿ ನಮ್ಮ ಪತ್ರಿಕೆಗಳು ನ್ಯಾಯವಾದ ರೀತಿಯಲ್ಲಿ ನಡೆದುಕೊಳ್ಳುತ್ತಿಲ್ಲ. ಹವ್ಯಾಸಿ ಕಲಾವಿದರಿಗೆ, ಸಿನಿಮಾ ಕಲಾವಿದರಿಗೆ ಸಿಗುವ ಪ್ರಚಾರ ವೃತ್ತಿ ಕಲಾವಿದರಿಗೆ ಇಲ್ಲ. ಹೀಗಾಗಿ ಕಂಪನಿ ನಾಟಕದವರು ತಮ್ಮ ಉದ್ಘಾಟನೆಗಳಿಗೆ ಪತ್ರಿಕಾ ಸಂಪಾದಕರನ್ನು, ರಂಗ ಪ್ರಯೋಗಗಳಿಗೆ ಸಿನಿಮಾ ಕಲಾವಿದರನ್ನು ಕರೆತಂದು ಹೂವಿನ ಹಾರ ಹಾಕುವ ಸಂಪ್ರದಾಯ ಬೆಳೆಸಿಕೊಳ್ಳುತ್ತಿದ್ದಾರೆ. ನಮ್ಮ 'ಸಾಹಿತ್ಯಿಕ' ವಲಯದಲ್ಲಂತೂ ವೃತ್ತಿ-ನಾಟಕಕಾರರು ಒಂದು ರೀತಿಯಿಂದ ಅಸ್ಪೃಶ್ಯರೇ ಆಗಿದ್ದಾರೆ.

ಈ ಎಲ್ಲ ಸಮಸ್ಯೆಗಳ ಬಗ್ಗೆ ಅನೇಕ ವೇದಿಕೆಗಳಲ್ಲಿ ಚರ್ಚೆಯಾಗಿದೆ. ಆದರೆ ಈ ಅರಿವಿಗೆ ಕ್ರಿಯಾರೂಪ ಬರುತ್ತಿರುವುದು ಇತ್ತೀಚೆಗೆ ಮಾತ್ರ. ಎಪ್ರಿಲ್ ೨೮ರಂದು ಹುಬ್ಬಳ್ಳಿಯಲ್ಲಿ ನಡೆದ ವೃತ್ತಿರಂಗ ಕಲಾವಿದರ ಹಾಗೂ ನಾಟಕಕಾರರ ಸಮಾವೇಶದಲ್ಲಿ ಅಸ್ತಿತ್ವಕ್ಕೆ ಬಂದ 'ಕರ್ನಾಟಕ ವೃತ್ತಿರಂಗ ಕಲಾವಿದರ ಒಕ್ಕೂಟ' ಈ ದಿಕ್ಕಿನಲ್ಲಿ ಇಟ್ಟಮೊದಲ ದಿಟ್ಟ ಹೆಜ್ಜೆಯಾಗಿದೆ. ವೃತ್ತಿ ಕಲಾವಿದರು ಎದುರಿಸುತ್ತಿರುವ ಅನೇಕ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕಾಗಿ 'ಸಹಕಾರಿ ಸಂಘ'ದ ಯೋಜನೆಯೊಂದನ್ನು ಒಕ್ಕೂಟ ಸಿದ್ಧಪಡಿಸುತ್ತಿದೆ, ಸ್ವಾವಲಂಬನ ಹಾಗೂ ಪರಸ್ಪರರ ಸಹಕಾರಗಳ ಮೂಲಕ ಕೆಲಸ ಮಾಡುವುದಲ್ಲದೆ ಸರಕಾರದ ಮೇಲೂ ಸರಿಯಾದ ರೀತಿಯ ಒತ್ತಡ ತರುವುದು ಕೂಡ ಒಕ್ಕೂಟದ ಉದ್ದೇಶವಾಗಿದೆ. ಪ್ರತಿಭಾನ್ವಿತರಾದ ವೃತ್ತಿ ಹಾಗೂ ಹವ್ಯಾಸ ನಾಟಕಕಾರರಲ್ಲಿ ಪರಸ್ಪರ ಸಂವಾದ ಉಂಟುಮಾಡುವ ಮೂಲಕ ಸಮಗ್ರ ರಂಗಭೂಮಿಯ ಬೆಳ

ವಣಿಗೆಯ ದೃಷ್ಟಿಯಿಂದ ಹೊಸ ನಾಟಕಗಳ ಸೃಷ್ಟಿಯನ್ನೇ ಈಗ ಪ್ರಾರಂಭಿಸಬೇಕಾಗಿದೆ. ಕೇವಲ ಅನುವಾದಿತ ಹಾಗೂ ಕತೆ ಕಾದಂಬರಿ ಆಧಾರಿತ ನಾಟಕಗಳೇ ವಿಜೃಂಭಿಸುತ್ತಿರುವ ಇವತ್ತಿನ ಸನ್ನಿವೇಶದಲ್ಲಿ ಹೊಸ ಹಾಗೂ ಅರ್ಥಪೂರ್ಣ ಬದಲಾವಣೆ ಬರಲೇಬೇಕಾಗಿದೆ. ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಯ ಅನೇಕ ಶಕ್ತಿಗಳು ಈಗ ಕ್ರೋಢೀಕರಣಗೊಂಡು ಸರಿಯಾದ ದಿಕ್ಕಿನಲ್ಲಿ ಕೆಲಸ ಮಾಡಿದರೆ, ಹಳ್ಳಿಗಾಡಿನ ಮೂಲೆಯಲ್ಲಿ ಬದುಕಿದರೂ ಬದುಕದಂತಿರುವ ಜಾನಪದ ರಂಗಭೂಮಿಯನ್ನೂ ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಅವಕಾಶ ಇನ್ನೂ ಹತ್ತಿರವಾಗುತ್ತದೆ.

DEVU PATTAR
GUTTIPETH,
MAHAPUR-583223

ಬೇಂದ್ರೆಯವರ ಮೊದಲ ಪುಣ್ಯತಿಥಿ

ಎಚ್. ಆರ್. ಅಮರನಾಥ

ಸತ್ತ ಬೇಂದ್ರೆ ಸತ್ತ.
ಸತ್ತು ಶ್ರಾದ್ಧ ಬಂತು.
ವಡೆ ಪಾಯಸ ಬಂತು.

ಗಾಯಂತ್ರೀ ರೆಕ್ಕೀ ಮ್ಯಾಲ ಕುಳತು
ಆಕಾಶಕ್ಕ ಗಸ್ತು ಹೊಡದಾಂವ
ಕಾಗಿ ಆಗಿ ಬಂದಾಂವ
ಪಿಂಡ ತಿನ್ನತಾನ.

ನರ ನಾಡೀ ಕಿಂವೀ ತಿರುವಿ
ಗಂವಗಂವಾ ಸರಿಗಮಾ ಮಾಡಿ
ಗಂಗವ್ವನ್ನ ಎಳಕೊಂಬಂದಾಂವ
ಎಳ್ಳು ನೀರು ಬಿಡತಾರಂತ
ಬಾಯಿ ಕಳಕೊಂಡು ಕುಂತಾನ.

ದೈವತ್ವದ ಎಳಿ ಹಿಂಡಕ್ಕ್ಯೋತ
ನಿದ್ದಿಯಾಗೂ ಕಣ್ಣು ಬಿಟಕೊಂಡು ಕುಂತಾಂವ;
ಗಡಗಡ ನಡಗಿ ಹೊಳದದ್ದ ಬಾಚಿಕೊಂಡಾಂವ,
ಅದರಾಗಿನ ಜಾದೂ ಹಿಡದು
ಹಾಡಾಗ ಭಟ್ಟಿ ಇಳಿಸಿ
ಪೆಣಕ್ಯಾ ಹುಚ್ಚು ಹಿಡಿಯೋಹಾಂಗ
ತಂತಿ ಕೆರಳಿಸಿ ಬಿಡಾಂವ

ಯಾರ್‍ಯಾರದೋ ತಲಿಯಾಗ ಕುಂತು
ಭೂತ ಆಗಿ ಕಾಡತಾನ,
ಬಲಿ ಬೇಡತಾನ,
ಕೊಡದ ಇದ್ರ ಗಂಡಸ್ತನಕ್ಕ
ಸವಾಲು ಹಾಕತಾನ.

ಕಾಲದ ಒಗಟಾ ಒಡಿಯಾಕಂತ
ಬೆಳ್ಳು ಮಡಿಸಿ ಬಿಡಿಸಿ
ಗಾಳ್ಯಾಗ ಸುಳಿದಿದ್ದೆಲ್ಲ ಹಾಳೀಗಿಳಿಸಿ
ಮುಂಗಿಲಾಗಿನ ಚಿಕ್ಕಿ
ಅಂಗೈ ಮ್ಯಾಲ ಇದ್ದ್ಹೋರಾಂಗ
ಲೆಕ್ಕ ಹಾಕಿದಾಂವ
ಕಾಲದಾಗ ಸೇರಿ ಹೋಗ್ಯಾನ.
ಕಾಲಕ್ಕೆ ಪುರುಷ ಅಂತಾರ.
ಅದಕ್ಕೂ ಗರ್ಭ ಅದ ಅಂತಾರ
ಇದು ಸತ್ತೋರ್‍ನ ಇಟ್ಕೊಳೋ
ಗರ್ಭಾನು ಇರಬೇಕು.
ಹುಟ್ಟೋರು ಮಾತ್ರ
ಭೂಮಿ ಹೊಟ್ಯಾಗಿಂದನು
ಹುಟ್ಟಿ ಬರಬೇಕು.

ಕಾಲ ಮಹಿಮಾ ಎಬಡ ಐತಿ
ಯುಗ ಯುಗಾನ ಕಳದು ಹೋದ್ರೂ
ನೂರು ಬೇಂದ್ರೆ ಬಂದು ಹೋದ್ರೂ
ಕಲಿಯುಗದಾಗ ಕಲಿಯೂದು ಬಹಳ ಐತಿ.

೧. ಇತ್ತೀಚಿನ ಕಾವ್ಯ: ಎರಡು ಸ್ಪಷ್ಟ ಪ್ರವಾಹಗಳು

ಸುಮಾರು ಹತ್ತು ವರ್ಷಗಳ ಅವಧಿಯಲ್ಲಿ ಕನ್ನಡ ಕಾವ್ಯ ಅನೇಕ ಬದಲಾವಣೆಗಳನ್ನು ಕಂಡಿದೆ. ಬರಿ ಮೇಲ್ಮೈಯಲ್ಲಿ ಆದ ಬದಲಾವಣೆ ಇದಲ್ಲ. ವಸ್ತು, ತಂತ್ರ, ಸಿದ್ಧಾಂತ, ಬದ್ಧತೆ ನೆಲೆಗಳಲ್ಲಿ ನೋಡಿದಾಗ ತೀವ್ರವಾದ ಬದಲಾವಣೆ ಕಾಣಬಹುದು. ಸಂಕ್ರಮಣ : ೧೩೭–೧೩೮–೧೩೯ರಲ್ಲಿ ಡಿ ರಘುನಾಥರಾಯರು ಹಲವು ಮಾತುಗಳನ್ನು ಹೇಳಿದ್ದರೂ ಇನ್ನೂ ಕೆಲವು ಮಾತುಗಳನ್ನು ಇತ್ತೀಚಿನ ಕನ್ನಡ ಕಾವ್ಯ ಕುರಿತು ಹೇಳಬಯಸುವೆ. ಇತ್ತೀಚೆಗೆ ಬಂದ ಹಲವು ಸಾಹಿತ್ಯಿಕ, ಸಾಮಾಜಿಕ, ರಾಜಕೀಯ ಚಳುವಳಿಗಳ ಸಂಗಡ ನಿಕಟ ಸಂಪರ್ಕ ಹೊಂದಿದ ಯಾವುದೇ ಕವಿಗೆ ಸದ್ಯದ ಕನ್ನಡ ಕಾವ್ಯ ನೋಡಿದಾಗ ಎರಡು ಸ್ಪಷ್ಟ ಪ್ರವಾಹಗಳು ಕಾಣುತ್ತವೆ.

ಎಪ್ಪತ್ತರ ದಶಕದ ಆರಂಭದಲ್ಲಿ ತನ್ನ ಎಲ್ಲ ಶಕ್ತಿ ಕಳೆದುಕೊಂಡು ಬಿದ್ದು ಹೋದ 'ನವ್ಯ' ಅನೇಕ ಗೊಂದಲಗಳನ್ನು ಸೃಷ್ಟಿ ಮಾಡಿಹೋಯಿತು. ವ್ಯಕ್ತಿಯ ತೀರ ಅಂತರ್ಮುಖಿಯ ಮೂಸೆಯಲ್ಲಿ ಹುಸಿ ಆರೋಪಗಳನ್ನು ಸಂಕೀರ್ಣಗೊಂಡ ಭಾಷೆಯಲ್ಲಿ ಅಭಿವ್ಯಕ್ತಗೊಳಿಸುತ್ತ, ಒಂದು ರೀತಿಯ ಗೊಂದಲಮಯವಾದ ವಾತಾವರಣದಲ್ಲಿ ನವ್ಯ ಮುಕ್ತಾಯವಾದಾಗ ಒಟ್ಟು ದೇಶದ ಸಂದರ್ಭವೂ ಹೊಸ ಸನ್ನಿವೇಶಕ್ಕೆ ತುಡಿಯುತ್ತಿತ್ತು. ಆಗ ಆದ ರಾಜಕೀಯ ಪಲ್ಲಟ, ಸಾಹಿತಿಗೆ ಬೇಕಾಗುವ ರಾಜಕೀಯ ಬದ್ಧತೆಯ ವಾದ. ವರ್ಗ ವರ್ಣ ವ್ಯತ್ಯಾಸಗಳ ಕುರಿತು ತೀವ್ರ ವಿಚಾರ ಸಂಘರ್ಷ, ಹಲವು ಸ್ಫೋಟಕ ಕ್ರಿಯೆಗಳು ಹೊಸ ಸಾಹಿತ್ಯದ ಹೊಸ ವಾತಾವರಣ ಹುಟ್ಟಿಸಿದವು. ಕಾವ್ಯದಂಥ ಸೂಕ್ಷ್ಮ ಮಾಧ್ಯಮದ ಮೇಲೆ ಇವೆಲ್ಲವುಗಳ ಮೊಹರು ಮುದ್ರೆ ಬಿದ್ದಿತು. ಇಂಥ ಹೊಸ ಕಾವ್ಯದ ಮುನ್ನೆಲೆಯಲ್ಲಿಯೂ ಎರಡು ರೀತಿಯ

ಕವಿಗಳ ಗುಂಪುಗಳನ್ನು ಕಾಣಬಹುದು. ಹೆಚ್ಚು ಕಲಾತ್ಮಕ, ಹೆಚ್ಚು ಸಂಕೀರ್ಣ, ಶಬ್ದಗಳ ನಿಗೂಢದಲ್ಲಿಯೇ ಅಮೂರ್ತತೆ ಹುಟ್ಟಿಸಿ ಬರೆಯುವವರ ಮೊದಲಗುಂಪು. ಉದಾ: ಜಯಸುದರ್ಶನ, ದೊಡ್ಡರಂಗೇಗೌಡ, ಎಚ. ಎಸ್. ವೆಂಕಟೇಶಮೂರ್ತಿ, ಜಯಂತ ಕಾಯ್ಕಿಣಿ, ಡಾ॥ ಎಂ. ಎನ್. ಜಯಪ್ರಕಾಶ, ಎಂ. ಎನ್. ವ್ಯಾಸ ರಾವ, ಕಾಳೇಗೌಡ ನಾಗವಾರ ಮುಂತಾದವರು. ಸರಳವಾಗಿ, ನೇರವಾಗಿ ಜನರನ್ನು ಮುಟ್ಟಬೇಕೆಂಬ ಒಂದು ರೀತಿಯ 'ಹುಂಬ' ಆಶಯದಿಂದ, ಬಂಡು ಖೋರ 'ದನಿ' ಯಿಂದ, ಸಮುದಾಯ ಪ್ರಜ್ಞೆಯಿಂದ ಬರೆಯುವವರ ಇನ್ನೊಂದು ಗುಂಪು ಕಾಣಬಹುದು. ಉದಾಃ ರಮಜಾನ ದರ್ಗಾ, ಗೋವಿಂದಯ್ಯ, ಅಲ್ಲಮ ಪ್ರಭು ಬೆಟ್ಟದೂರು, ಗವಿಸಿದ್ಧ ಬಳ್ಳಾರಿ, ಚೆನ್ನಣ್ಣ ವಾಲಿಕಾರ, ಸರಜೂ ಕಾಟಕರ, ಚಂಪಾ, ಸಿದ್ಧಲಿಂಗಯ್ಯ,ಚಂದ್ರಶೇಖರ ತಾಳ್ಯ, ಸತೀಶ ಕುಲಕರ್ಣಿ ಮುಂತಾದವರು. ಇದರಲ್ಲಿ ಬಹುತೇಕರು ಆರಂಭದಲ್ಲಿ ಆಕ್ರೋಶ, ಸಿಟ್ಟು, ರೊಚ್ಚುಗಳಿಂದ ಬರೆಯು ತ್ತಿದ್ದರೂ ಈಗ ಹೆಚ್ಚು ಸಂಯಮದಿಂದ ಬರೆಯುತ್ತಿದ್ದಾರೆ. (ದರ್ಗಾ, ಗೋವಿಂದಯ್ಯ, ಬಳ್ಳಾರಿ, ಚಂಪಾ ಮೊದಲಿನಿಂದಲೂ ಒಂದು ರೀತಿಯ ಕಾವ್ಯದಲ್ಲಿ ಅನವಶ್ಯಕ ಆಕ್ರೋಶ ತೋಡಿಕೊಂಡವರಲ್ಲ).

ಇಂದಿನ ಕನ್ನಡ ಕಾವ್ಯ ನೋಡಿದಾಗ ಸ್ಪಷ್ಟವಾಗಿ ಗೋಚರಿಸುವ ಈ ಎರಡು ಬೇರೆ ಬೇರೆ ಪ್ರವಾಹಗಳು ಒಟ್ಟು ಒಂದು ಶಕ್ತಿಯಾಗಿ ಬೆಳೆದಲ್ಲಿ ನಾವು ಬಯಸುವ ಜನಪರ ಬದ್ಧತೆಯ ಕಾವ್ಯ ಮುಂದಿನ ದಿನಗಳಲ್ಲಿ ಬರಲು ಸಾಧ್ಯ; ಬರಹಕ್ಕಿಂತ ಬದುಕು, ಬದುಕಿಗಿಂತ ಈ ಬದುಕಿನ ಅವ್ಯವಸ್ಥೆಗೆ ಮೂಲವಾದ ವರ್ಗ, ವರ್ಣದಂಥ ವ್ಯತ್ಯಾಸ ಗಳು, ಹೆಚ್ಚು ಹೆಚ್ಚು ಇಂದಿನ ಕವಿಗಳಿಗೆ ಕಾಡುವದರಿಂದ ಜನ ಸಮುದಾಯಕ್ಕೆ ತೀರ ಹತ್ತಿರವ ಕಾವ್ಯ ಇನ್ನು ಬರಬಹುದೆಂದು–ಇಂದಿನ ಕಾವ್ಯದ ಬಗ್ಗೆ ವಿಚಾರ ಮಾಡಿದಾಗ ನನ್ನ ಅನಿಸಿಕೆ. ನಾನು ಹೇಳಿದ ಎರಡೂ ರೀತಿಯ ಕಾವ್ಯದ ರೀತಿಯ ವರು ಒಬ್ಬರಿಂದ ಒಬ್ಬರು ಕಲಿಯುವದು ಬಹಳಿದೆ.

ಸತೀಶ ಕುಲಕರ್ಣಿ

೨. ಕನ್ನಡ ಲಿಪಿ ಮತ್ತು ಅದರ ಸುಧಾರಣೆ: ಒಂದು ವಿವರಣೆ

ಮಾತು ಮೊದಲು ಬರವಣಿಗೆ ನಂತರ ಎಂಬುದು ಪ್ರತಿಯೊಬ್ಬನಿಗೂ ತಿಳಿದ ಸಂಗತಿ. ಮಾತು ಮಾನವನಷ್ಟೆ ಪುರಾತನವಾದದ್ದು; ಆದರೆ ಬರವಣಿಗೆ ಇತ್ತೀಚಿನದು. ಚಾರಿ ತ್ರಿಕವಾಗಿ ಯಾವುದೇ ಭಾಷೆಯ ಲಿಪಿಯನ್ನು ನೋಡುತ್ತ ಬಂದಾಗ ಲಿಪಿಯು ತನ್ನ ಮೊಟ್ಟ ಮೊದಲಿನ ಆಕಾರವನ್ನು ಉಳಿಸಿಕೊಳ್ಳದೆ ಬದಲಾಗುತ್ತ ಬರುತ್ತಿರುವುದನ್ನು

ಕಾಣಬಹುದು. ಲಿಪಿಯ ವ್ಯಾಸಂಗ ಎರಡು ತೆರನಾದುದು : ೧. ಲಿಪಿಯ ಸೃಷ್ಟಿ ೨. ಲಿಪಿಯ ಸುಧಾರಣೆ. ಆಧುನಿಕ ಯುಗದಲ್ಲಿ ಲಿಪಿಯ ಸುಧಾರಣೆಯ ಬಗ್ಗೆ ಚರ್ಚೆ ಎಲ್ಲ ಭಾಷೆಗಳಲ್ಲಿಯೂ ನಡೆದಿದೆ; ಇದಕ್ಕೆ ಕನ್ನಡ ಹೊರತಾಗಿಲ್ಲ. ಲಿಪಿಯ ಸುಧಾರಣೆ ಎಂದರೆ ಕೇವಲ ವರ್ಣಗಳ ಆಕಾರವನ್ನು ಬದಲಿಸುವುದು, ಆಡುಮಾತಿಗೆ ಹತ್ತಿರ ತರುವುದು ಮಾತ್ರವಲ್ಲದೇ ಹೊಸ ವರ್ಣಗಳನ್ನು ಶೋಧಿಸುವುದೂ ಆಗಿದೆ. ಈ ಸುಧಾರಣೆಯನ್ನು ಭಾಷೆಯ ಬೆಳವಣಿಗೆಗಾಗಿ ಯೋಜಿಸಲಾಗುತ್ತದೆ.

ಇದನ್ನು ಹಿನ್ನೆಲೆಯಾಗಿರಿಸಿ ಪ್ರಾ. ನಿ. ಉಮಾಕಾಂತರ 'ಕನ್ನಡ ಲಿಪಿ ಮತ್ತು ಅದರ ಸುಧಾರಣೆ' (ಸಂಕ್ರಮಣ:೧೩೫–೧೩೬) ನೋಡುವಾ: ಐವತ್ತು ವರ್ಷದ ಯೋಜನೆಯನ್ನು ತಿಳಿಯ ಪಡಿಸಲು ೧೨ ನಿಯಮಾಭಾಸಗಳನ್ನು, ಸರಳ ಕನ್ನಡ ಲಿಪಿಗಾಗಿ ೬ ವಿಧಾನಗಳನ್ನು ಮತ್ತು ಇಂಗ್ಲೀಷ್-ಕನ್ನಡ ದ್ವಿಭಾಷಾ ಬೆರಳಚ್ಚುಯಂತ್ರದ ಮಾದರಿಯನ್ನು ಅವರು ನೀಡಿದ್ದಾರೆ.

ನಾನು ಒಬ್ಬ ಭಾಷಾವಿಜ್ಞಾನದ ವಿದ್ಯಾರ್ಥಿಯಾಗಿ ಇವರ ಲೇಖನ ಓದುತ್ತ ಹೋದಂತೆ ಇವರು ರೂಪಿಸಿದ ಕೆಲವು ನಿಯಮಗಳಲ್ಲಿ ಆಳವಾದ ದೋಷಗಳು ಕಂಡುಬಂದವು. ಲಿಪಿಯನ್ನು ಸುಧಾರಿಸುವಾಗ ಕನ್ನಡ ಭಾಷೆಯ ಹರವನ್ನು ಚನ್ನಾಗಿ ತಿಳಿಯಬೇಕು. ಇಲ್ಲದಿದ್ದಲ್ಲಿ ಲಿಪಿ ಸುಧಾರಣೆಯಾಗಲಾರದು. ಕನ್ನಡ ಭಾಷೆಯನ್ನು ಚನ್ನಾಗಿ ತಿಳಿದವರಾದರೆ ಮಹಾಪ್ರಾಣಗಳನ್ನು ಮೊದಲು ಕನ್ನಡ ಭಾಷೆಯಿಂದ ಓಡಿಸಬೇಕು. ಮಹಾಪ್ರಾಣಗಳು ಕನ್ನಡ ಧ್ವನಿಶಾಸ್ತ್ರದ ಚೌಕಟ್ಟಿನಲ್ಲಿ ಸೇರಲು ಅನರ್ಹವಾಗಿವೆ. ಲಿಪಿ ಸುಧಾರಣೆಗಾಗಿ ವಿಚಾರಿಸುವಾಗ ಕೂಡ ಅವುಗಳಿಗೆ ಜೋತು ಬೀಳುವುದು ಸರಿಯಲ್ಲ. ಕನ್ನಡದಲ್ಲಿರುವ ಎಲ್ಲ ಮಹಾಪ್ರಾಣಗಳನ್ನು ತಗೆದುಹಾಕಿದರೆ ಎಲ್ಲಿ ಪ್ರಾಣ ಹಾರುತ್ತದೆ ಎಂಬ ಭಯ ನಮ್ಮ ಹಿರಿಯರಿಗಿದೆ, ಇದು ಒಂದು ದೊಡ್ಡ ಹುಚ್ಚುತನ. ಹಾಗೆ ನೋಡಿದರೆ ಎಷ್ಟು ಜನ ಮಹಾಪ್ರಾಣಗಳನ್ನು ಉಚ್ಚರಿಸುತ್ತಿದ್ದಾರೆ? ಮಹಾಪ್ರಾಣ ಉಚ್ಚರಿಸುವಾಗ ಉಚ್ಚರಿಸುವವನ ಪ್ರಾಣ ಹಾರುತ್ತಿರುತ್ತದೆ ಅಷ್ಟೆ.

ಮಹಾಪ್ರಾಣಗಳನ್ನು ತಗೆದು ಹಾಕಿದ ನಂತರ—

ಶ್ ತಾಲವ್ಯ (Palatal)
ಷ್ ಪರಿವೇಷ್ಟಿತ (Retroflex)
ಸ್ ವತ್ಸ್ಯ (alveolar)

ಈ ಮೂರೂ ವ್ಯಂಜನಗಳನ್ನು ಕನ್ನಡದ ಉಪ-ಭಾಷೆ (dialect) ಗಳಲ್ಲಿ ತೌಲನಿಕವಾಗಿ ಅಭ್ಯಸಿಸಿದರೆ ಈ ವ್ಯಂಜನಗಳು ವತ್ಸ್ಯದಲ್ಲಿ ಒಂದಾಗುವ ಲಕ್ಷಣಗಳು ಕಂಡು

ಬರುತ್ತಿರುವವರಿಂದ ಶ್, ಷ್ ಗಳನ್ನು ಕೈಬಿಟ್ಟು ಸ್ ಒಂದನ್ನೇ ಮುಂದುವರಿಸಬೇಕು.§ (ಸಾಧ್ಯವಾದರೆ ಹ್ ವನ್ನು ಬಿಡಲು ಪ್ರಯತ್ನಿಸುವದೂ ಒಳಿತು. ಯಾಕಂದರೆ ದ್ರಾವಿಡ ಭಾಷೆಗಳಲ್ಲಿ ಈ ಬಗೆಯ ಧ್ವನಿ ಬದಲಾವಣೆ ನಡೆಯುತ್ತಿದೆ. ಗೊಂಡಿಯಲ್ಲಿ ಈ ಬದಲಾವಣೆ ಪೂರ್ಣವಾಗಿ ನಡೆದಿದೆ. ಕನ್ನಡದಲ್ಲಿಯೂ ಬಹಳ ಜನ ಹತ್ತು ಅನ್ನು ಅತ್ತು, ಹರಿ ಅನ್ನು ಅರಿ, ಹಾಲು ಅನ್ನು ಆಲು ಎಂದು ಬಳಸುವುದುಂಟು).

ನಿಯಮಾಭಾಸ ೭ರಲ್ಲಿ "ಅನುಸ್ವಾರವು ಒಂದೇ ಧ್ವನಿಯನ್ನು ಸೂಚಿಸುವುದಿಲ್ಲ........ ಈ ಪದಗಳ ಸಹಜವಾದ ಉಚ್ಚಾರಣೆ ಈ ಎ ಡು ಉಚ್ಚಾರಣೆಗಳ ಮಧ್ಯ ಇರುತ್ತದೆ......ಹೀಗಾಗಿ ಅನುಸ್ವಾರ ಒಂದು ನಿರ್ದಿಷ್ಟವಾದ ಅಥವಾ ಒಂದೇ ಸೂತ್ರಕ್ಕೆ ಒಳಗಾಗದ ಧ್ವನಿ ಸೂಚಕವಲ್ಲ" ಎಂದಿದೆ. ಲೇಖಕರು ಈ ಮಾತನ್ನು ಯಾವ ವೈಜ್ಞಾನಿಕ ಆಧಾರದ ಮೇಲೆ ಹೇಳುತ್ತಾರೆಂಬುದು ತಿಳಿಯದು, ಧ್ವನಿಶಾಸ್ತ್ರವನ್ನರಿತವರು ಹೀಗೆ ಹೇಳುವುದು ಅಸಾಧ್ಯ.

ಕೊನೆಯದಾಗಿ ಸರಳ ಕನ್ನಡಲಿಪಿ ವಿಧಾನ ೧೨ರಲ್ಲಿ ಋಣ, ಋತು, ಋಷಿಗಳಲ್ಲಿ ಋ ಬಿಟ್ಟು ರು ಬರೆಯುವುದು ಒಳ್ಳೆಯದು, ೠ ಅಂತೂ ಇಲ್ಲವೇ ಇಲ್ಲ ಎಂಬ ಮಾತು ನಿಜವಾಗಿದೆ. ಸೂರ್ಯ, ಕರ್ನಾಟಕ, ಮಾರ್ಗ ಇವುಗಳನ್ನು ಸೂರ್‍ಯ, ಕರ್‍ನಾಟಕ, ಮಾರ್‍ಗ ಈ ರೀತಿಯಾಗಿ ಬರೆಯಬೇಕು.

ಮೊಟ್ಟ ಮೊದಲು ಈ ರೀತಿಯಾಗಿ ಕನ್ನಡವನ್ನು ಕನ್ನಡದ ಚೌಕಟ್ಟಿನಲ್ಲಿ ತಂದನಂತರ ನಾವು ಮುಂದಿನ ಹೆಜ್ಜೆ ಇಡುವುದು ಒಳ್ಳೆಯದು. ಇದೊಂದು ಪ್ರಕಾರದ ಟೆಸ್ಟ ಡೋಜಾಗಿ ಉಪಯೋಗಿಸಬಹುದು. ನಂತರ ಉಮಾಕಾಂತರ ಸಲಹೆ ಉಪಯುಕ್ತವಾಗುತ್ತದೆ.

ರಘು ಕುಲಕರ್ಣಿ

೩. '೧೨ನೇ ಶತಮಾನದ ಕಾಯಕ ಜೀವಿಗಳ ಚಳುವಳಿ' : ಒಂದು ಪ್ರತಿಕ್ರಿಯೆ

ಸಿ. ವೀರಣ್ಣನವರ ಸಂಶೋಧನಾತ್ಮಕ ಗ್ರಂಥ 'ಹನ್ನೆರಡನೆ ಶತಮಾನದ ಕಾಯಕ ಜೀವಿಗಳ ಚಳುವಳಿ'† ವಿಪುಲ ಶಾಸನಗಳ ಆಧಾರವನ್ನು ಹಿನ್ನೆಲೆಯಾಗಿಟ್ಟುಕೊಂಡು ರಚಿಸಿರುವ ಪುಸ್ತಕ. ಇವರಲ್ಲಿ ಚಳುವಳಿಗೆ ಕಾರಣವಾದ ಅಂಶಗಳು

§ ಇದನ್ನು ಇನ್ನೂ ಕೆಲವು ಕಾಲದ ವರೆಗೆ ಪರೀಕ್ಷಿಸಿ ನಂತರ ಅಳವಡಿಸಿಕೊಳ್ಳುವುದು ಚನ್ನಾಗಿ ಕಾಣುತ್ತದೆ.

† ಸಂಕ್ರಮಣ ೧೭೭-೧೩೮-೧೩೯ ರಲ್ಲಿ ಇದರ ವಿಮರ್ಶೆ ಪ್ರಕಟವಾಗಿದೆ.

ಮುಖ್ಯವಾಗಿ ಆರ್ಥಿಕ ಸಮಸ್ಯೆಗಳೇ ಆಗಿದ್ದು, ಅವುಗಳಿಂದ ಪಾರಾಗಿ ಬರಲು ಕಾಯಕ ಜೀವಿಗಳು ಯತ್ನಿಸಿದರು ಎಂದು ಹೇಳುತ್ತಾ, ಬಸವಣ್ಣ ಹೇಗೆ ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡು ಕುಳಿತ ಎಂಬುದರ ಬಗ್ಗೆ ತಮಗೆ ತಿಳಿದಂತೆ ಲೇಖಕರು ಅರ್ಥೈಸಲು ಹೊರಟಿರುವುದು ಇಲ್ಲಿ ಕಾಣುತ್ತದೆ.

ಒಂದು ಚಳುವಳಿ ಹುಟ್ಟಿ ಬಂದದ್ದರ ಹಿನ್ನೆಲೆ, ದೇಶ, ಕಾಲವನ್ನೇ ಗಮನದಲ್ಲಿರಿಸಿ ಕೊಳ್ಳದೆ ಅಥವಾ ಅದನ್ನು ಬೇಕಾಗಿಯೇ ತಪ್ಪಾಗಿ ಅರ್ಥೈಸುತ್ತಾ, ಬೇರಾವುದೋ ದೇಶದಲ್ಲಿ ನಡೆದ ಚಳವಳಿಯ ವಿಫಲತೆಯ ಅಂಶಗಳನ್ನು ಹನ್ನೆರಡನೇ ಶತಮಾನದ ಚಳವಳಿಯಲ್ಲಿ ಅವರು ಗುರುತಿಸುತ್ತಾರೆ.

ರಾಜರು, ರಾಜಕೀಯ ಇವು ಶರಣರಿಗೆ ತಲೆನೋವೇ ಆಗಿರಲಿಲ್ಲ. ಆದರೆ ರಾಜರ ಮನಸ್ಸನ್ನು, ತನ್ಮೂಲಕ ದೇಶದ ಮನಸ್ಸನ್ನು ಆಳುತ್ತಿದ್ದ ಪುರೋಹಿತವರ್ಗ. ಅದರಿಂದ ಸೃಷ್ಟಿಯಾದ ಚಾತುರ್ವರ್ಣಗಳು, ದೇವರು, ಶೋಷಣೆ ಇವು ಶರಣರನ್ನು ಕಾಡಿದ್ದು. ಯಾವುದೇ ರೋಗದ ಲಕ್ಷಣಗಳಾಗಿರಬಹುದಾದ ತಲೆನೋವು. ಮೈನೋವು, ಜ್ವರಕ್ಕೆ ಔಷಧ ಕೊಡುವುದು ದೊಡ್ಡ ಮಾತಲ್ಲ. ವೈದ್ಯನ ಕರ್ತವ್ಯ ವೆಂದರೆ ಆರೋಗ್ಯದ ಮೂಲವನ್ನು ಪತ್ತೆಹಚ್ಚಿ ರೋಗಕ್ಕೆ ಮದ್ದು ನೀಡುವುದಾಗಿದೆ. ರೋಗ ಕಳೆದಾಗ ತಲೆನೋವು ತಂತಾನೆ ಮಾಯವಾಗುತ್ತದೆ. ಜನಜೀವಾಳದ ಕುತ್ತಿಗೆಗೇ ಕೈ ಹಾಕಿದ ಈ ಪುರೋಹಿತಶಾಹಿಯ ಕೈಕತ್ತರಿಸಿಹಾಕುವ ಕೆಲಸಕ್ಕೆ ಬಸವ ಮತ್ತು ಆತನ ಸಮಕಾಲೀನರು ಪ್ರಯತ್ನಿಸಿದರು ಎನ್ನುವ ಮೂಲಭೂತ ಅಂಶವನ್ನು ಲೇಖಕರು ಗೊತ್ತಿದ್ದೂ ಮರೆಯಲೆತ್ನಿಸಿ ಅದಕ್ಕೆ ಆರ್ಥಿಕ ಕಾರಣಗಳನ್ನು ನೀಡಿ ಬಸವ ಮತ್ತು ಆತನ ಅನುಯಾಯಿಗಳು ಏಕೆ ಬಿಜ್ಜಳನೊಂದಿಗೆ ಶಕ್ತಿ ಕಾಳಗಕ್ಕೆ ಇಳಿಯಲಿಲ್ಲ ಎಂದು ಪ್ರಶ್ನಿಸುತ್ತಾ ಚಳುವಳಿಯ ವಿಫಲತೆಯ ಪಟ್ಟವನ್ನು ಬಸವನ ತಲೆಗೆ ಕಟ್ಟಿ ಕೈ ತೊಳೆದುಕೊಂಡಿದ್ದಾರೆ.

"ಆದರೂ ಅವರು (ಅಂದರೆ ಬಸವಣ್ಣನವರು) ರಾಜಕೀಯ ಶಕ್ತಿಯಾಗಿ ತಮ್ಮ ಸಂಘಟನೆಯನ್ನು ಬಲಪಡಿಸಲು ಇಷ್ಟಪಡಲಿಲ್ಲ" ಎನ್ನುವ ಲೇಖಕರು ಅಂದಿನ ರಾಜಕೀಯ ವ್ಯವಸ್ಥೆಯನ್ನು ಹೇಗೆ ತಪ್ಪಾಗಿ ಗ್ರಹಿಸಿದ್ದಾರೆನ್ನುವುದು ಆಶ್ಚರ್ಯದ ಸಂಗತಿ. ರಾಜರನ್ನು ರಾಜರೇ ಎದುರು ಹಾಕಿಕೊಳ್ಳಬೇಕಾದ ಕಾಲ ಅದು. ಕೂಲಿ ಕುಂಬಳ ಮಾಡಿ ಬದುಕುವವರು ಅಂದರೆ ಕಾಯಕ ಜೀವಿಗಳು ರಾಜನ ವಿರುದ್ಧ ಯಾವ ರೀತಿ ಹೋರಾಟ ಮಾಡಬೇಕಾಗಿತ್ತು? ಹನ್ನೆರಡನೇ ಶತಮಾನದ ಮಾತು ದೂರ ಇರಲಿ; ೨೦ನೇ ಶತಮಾನದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮವಾದರೂ ಹೇಗಿತ್ತು? ಅಲ್ಲಲ್ಲಿ ಉಗ್ರಗಾಮಿಗಳು ಹಿಂಸಾತ್ಮಕ ಹೋರಾಟ ನಡೆಸಿದರೂ ಅದು ಸಾರ್ವತ್ರಿಕವಾಗಿ ಯಶಸ್ವಿಯಾದದ್ದು ಅಹಿಂಸೆಯಿಂದಲೇ!

ಇಂದೂ ಅನ್ಯಾಯವಿದೆ, ಅನಾಚಾರವಿದೆ. ಅದರ ಪ್ರತಿಭಟನೆ ಪಾರ್ಲಿಮೆಂಟಿನಲ್ಲಿ, ಸಮ್ಪರ್ಕ ವೇದಿಕೆಗಳಲ್ಲಿ ಆಗುತ್ತಲಿದೆ. ಹಾಗೆಂದರೆ ಕತ್ತಿ ಹಿಡಿದೇಕೆ ಈ ಅನ್ಯಾಯ ಪ್ರತಿಭಟಿಸುತ್ತಿಲ್ಲ ಎಂದು ಕೇಳಿದರೆ? ದೇಶದ ಮಾತು ಇರಲಿ ಒಂದು ವಿದ್ಯಾ ಸಂಸ್ಥೆಯಲ್ಲಿ ಕೆಲಸಮಾಡುವ ವ್ಯಕ್ತಿ ಅಲ್ಲಿ ನಡೆಯುವ ಏನೆಲ್ಲ ಅನಾಚಾರವನ್ನು ನೋಡಿಯೂ ಸುಮ್ಮನಿರುತ್ತಾನೆ. ಅಥವಾ ಸಮ್ಪರ್ಕ ವೇದಿಕೆಯಲ್ಲಿ ಪ್ರತಿಭಟಿಸುವು ದಕ್ಕಿಂತ ಹೆಚ್ಚಿಗೇನನ್ನು ಮಾಡಲಾರ. ನನ್ನ ಪ್ರಶ್ನೆ ನೇರವಾಗಿ ಇಡಬೇಕೆಂದರೆ: ಎಷ್ಟು ಜನ ರಾಜೀನಾಮೆ ಕೊಟ್ಟು ಹೊರ ಬಂದಿದ್ದಾರೆ? ಆದರೆ ಬಸವಣ್ಣ ಬಿಜ್ಜಳನ ಗದ್ದುಗೆ ಯನ್ನು ಬಿಟ್ಟು ಬಂದು, ತಾನು ನಂಬಿದ ತತ್ವಗಳ ಬೆಳಕಿನಲ್ಲಿ ನಡೆದ. ಲೇಖಕರು ಅರ್ಥೈಸಿರುವಂತೆ ಬಸವಣ್ಣ ಎಲ್ಲಿಯೂ ಸೋಲಲಿಲ್ಲ. ಕಾರಣ ಸ್ಪಷ್ಟವಿದೆ. ಇಂಡಿ ಯಾದ ಇಂದಿನ ಸಂದರ್ಭದಲ್ಲಿಯೂ ಬಸವಣ್ಣನ ಜೀವನ ವಿಧಾನ ನಮಗೆ ರೆಲೆವೆಂಟ್ ಆಗಿರುವುದು.

"ಕರ್ನಾಟಕದಲ್ಲಿ ವಚನಕಾರರ ಚಳವಳಿ ಏಕೆ, ಹೇಗೆ ಹುಟ್ಟಿತೆಂದು ಹೇಳುವಾಗ ಅನೇಕರು ಒಂದೇ ಬಾರಿಗೆ, ಧರ್ಮ ಜಡವಾಗಿತ್ತು, ಜನರಿಗೆ ಅರ್ಥವಾಗದ ರೀತಿ ಯಲ್ಲಿ ಪುರೋಹಿತರು ವ್ಯವಹರಿಸುತ್ತಿದ್ದರು ಇತ್ಯಾದಿಯಾದ ದುರ್ಬಲ ಕಾರಣ ಗಳನ್ನು ಹೇಳಿ, ಇದು ಬಸವಣ್ಣನ ಮನಸ್ಸನ್ನು ಕಲಕಿ ಅವನು ಹೊಸ ಪಂಥದ ಬೆಳವಣಿಗೆಗೆ ಕಾರಣನಾದನೆಂದು ಹೇಳಿಬಿಡುತ್ತಾರೆ. ಹಾಗೆ ನೋಡಿದರೆ ವೈದಿಕ ಧರ್ಮ ಅದರ ಆರಂಭದಿಂದಲೂ ಎಂದೂ ಜನಸಾಮಾನ್ಯರ ಧರ್ಮವಾಗಿರಲೇ ಇಲ್ಲ. ಅಥವಾ ಹೊಸದಾಗಿ ಈ ಕಾಲದಲ್ಲಿ ಅದು ಜಡವಾಗಬೇಕಾದ ಅಗತ್ಯವೂ ಇರಲಿಲ್ಲ" ಎಂದು ಲೇಖಕರು ವ್ಯಾಖ್ಯಾನಿಸಿ, ಅದರ ಬಗ್ಗೆ ಹನ್ನೊಂದನೇ ಶತಮಾನದಲ್ಲಿಯೇ ವಿರೋಧ ವ್ಯಕ್ತವಾಯಿತು ಎಂದಿದ್ದಾರೆ. ವೈದಿಕ ಧರ್ಮ ಎಂದೂ ಜನಸಾಮಾನ್ಯರ ಧರ್ಮವಾಗಿರಲಿಲ್ಲ ನಿಜ. ಆದರೆ ಅದು ಜನಸಾಮಾನ್ಯರನ್ನು ಆಳುತ್ತಿತ್ತು. ಅದನ್ನೇ ಶರಣರು ಪ್ರಶ್ನಿಸಿದ್ದು. ಅದು ಒಂದು ಗಟ್ಟಿಯಾದ ಚಳುವಳಿಯ ರೂಪು ತೆಗೆದುಕೊಂಡದ್ದು ಬಸವ ಮತ್ತು ಆತನ ಅನುಯಾಯಿಗಳಿಂದ.

ಬಾಲ್ಯದಲ್ಲಿ ಜನಿವಾರ ಕಿತ್ತೆಸೆದುದು, ಮಾದಾರನ ಮಗನಿಗೆ ಬ್ರಾಹ್ಮಣನ ಮಗಳನ್ನು ಲಗ್ನ ಮಾಡಿಸಿದ್ದು, ವೃತ್ತಿಗೆ ಘನತೆ ತಂದುಕೊಟ್ಟದ್ದು, ನಾಯಿ, ಹಂದಿಗಳಿಗಿಂತಲೂ ಕೀಳಾಗಿ ಕಾಣುತ್ತಿದ್ದ ಜನರ ಮಧ್ಯೆ ಬಸವ ಹೋಗಿ ಅವರನ್ನು ಅಪ್ಪ, ಅಣ್ಣ, ಅಕ್ಕ ಎಂದು ಮೇಲೆತ್ತಿದ್ದು, ಅವರ ಮನೆಯಲ್ಲಿ ಉಂಡದ್ದು, ಸಂಸ್ಕೃತದಲ್ಲಿ ಬರೆದವರೇ ಪಂಡಿತರೆಂದು ತಿಳಿಯುತ್ತಿದ್ದ ಕಾಲದಲ್ಲಿ ಆಡುಮಾತಿನಲ್ಲಿ ವಚನಗಳನ್ನು ರಚಿಸಿದ್ದು, ಇಂಥ ಚಳವಳಿಗೆ ಧಕ್ಕೆ ತಂದ ಬಿಜ್ಜಳನ ಮಂತ್ರಿ ಪದವಿ ದೊರೆತದ್ದು ಒಂದೂ ಸಿ. ವೀರಣ್ಣನವರಿಗೆ ಬಂಡಾಯವಾಗಿ ಕಾಣದಿರುವುದು ಅಥವಾ ಕಂಡರೂ

ಕಣ್ಣು ಮುಚ್ಚುವುದು ನೋಡಿದರೆ ತುಂಬಾ ಸೋಜಿಗವಾಗುತ್ತದೆ. ಸಂಶೋಧಕರೊಬ್ಬರು ತಳೆದ ನಿಲುವು, ಒಂದು ಚಳುವಳಿಯನ್ನು ಅರ್ಥೈಸುವ ರೀತಿ ಇದೇನೇ ಎಂದು ಖೇದವಾಗುತ್ತದೆ. ಈ ಪುಸ್ತಕ ಯಶಸ್ವಿಯಾಗಿರುವುದು ಶಾಸನಗಳಲ್ಲಿ ಕಾಣಸಿಗುವ ವಿವಿಧ ತೆರಿಗೆಯನ್ನು, ಅವನ್ನು ಅನುಭವಿಸುತ್ತಿದ್ದ ಜನರನ್ನು ಗುರುತಿಸುವಲ್ಲಿ ಹೊರತು ಹನ್ನೆರಡನೇ ಶತಮಾನದ ಚಳುವಳಿಯನ್ನು ಸರಿಯಾಗಿ ಅರ್ಥೈಸುವಲ್ಲಿ ಅಲ್ಲ.

ಚರಿತ್ರೆಯನ್ನು ವ್ಯಾಖ್ಯಾನಿಸುತ್ತ ಕೂತುಕೊಳ್ಳುವುದಕ್ಕಿಂತ ಅದನ್ನು ಬದಲಾಯಿಸುವುದೇ ಉತ್ತಮವೆಂಬುದನ್ನೇ ನಂಬಿದ ವೀರಣ್ಣನವರು, ಚರಿತ್ರೆಯೊಂದರ ಅಪೂರ್ವ ಚಳುವಳಿಯ ಮಾದರಿಯನ್ನು ತಪ್ಪಾಗಿ ಗ್ರಹಿಸಿ ಆ ತಪ್ಪನ್ನು ಎಲ್ಲರೂ ತಿಳಿಯಲಿ ಎಂಬುದಕ್ಕಾಗಿಯೆ ಬರೆದಂತಿದೆ ಈ ಪುಸ್ತಕ.

ಡಾ. ಬಸವಪ್ರಭು ಪಾಟೀಲ

೪. ನಾವು ಇಂಗ್ಲಿಷನ್ನು ಹೇಗೆ ಕಲಿಯಬೇಕು ?— ಒಂದು ಪ್ರತಿಕ್ರಿಯೆ.

ಸಂಕ್ರಮಣದ ೧೫–೧೬೦–೧೬೧ರ ಸಂಚಿಕೆಯಲ್ಲಿ ಶ್ರೀ ರ. ಶಶಿಧರರು ಮಂಗಳೂರು ವಿಶ್ವವಿದ್ಯಾನಿಲಯದ ಇಂಗ್ಲಿಷ ವ್ಯಾಸಂಗ ಸಮಿತಿಯು ಶಿಫಾರಸು ಮಾಡಿದ ಹೊಸ ಇಂಗ್ಲಿಷ ಶಿಕ್ಷಣ ಕ್ರಮವನ್ನು ಟೀಕಿಸಿ ಬರೆದ "ನಾವು ಇಂಗ್ಲಿಷ ಕಲಿಯಬೇಕಾದ ರೀತಿ" ಎಂಬ ಪ್ರಬಂಧದಲ್ಲಿ ಕಂಡುಬರುವ ಕೆಲವು ನ್ಯೂನಾತಿರೇಕಗಳನ್ನು ಬೊಟ್ಟು ಮಾಡುವುದು ಈ ಪ್ರತಿಕ್ರಿಯೆಯ ಉದ್ದೇಶ.

ಶ್ರೀ ಶಶಿಧರರು "ಸಮಿತಿಯ ಶಿಫಾರಸುಗಳನ್ನು ಗಮನಿಸಿದರೆ ಈ ಸಮಿತಿಯ ಯಾವುದೇ ಸದಸ್ಯರಿಗೂ ಭಾಷೆಯ ಬಗ್ಗೆ ಸರಿಯಾದ ಕಲ್ಪನೆ, ಮಾಹಿತಿ ಇಲ್ಲದೇ ಇರುವುದು ತಿಳಿದು ಬರುತ್ತದೆ" ಎಂದಿದ್ದಾರೆ. ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡು ಎಲ್ಲಕ್ಕೂ ಸೈ ಎನ್ನುವಷ್ಟೇ ಅಪಾಯಕಾರಿಯಾದ ಪ್ರವೃತ್ತಿ, ತಾನು ತಿಳಿದದ್ದೇ ಸರಿ, ಉಳಿದವರು ಮೂಢರು, ಅವರ ಹೇಳಿಕೆಗಳೆಲ್ಲ ಖಂಡನಾರ್ಹ– ಎಂಬುದು. ಈ ಶಿಫಾರಸುಗಳ ಹಿನ್ನೆಲೆಯಲ್ಲಿ ಭಾಷಾ ಶಿಕ್ಷಣದಲ್ಲಿ ವಿಸ್ತೃತ ಅಧ್ಯಯನ, ಪ್ರಯೋಗಗಳಿಂದ ಸಿದ್ಧಿಗಳನ್ನು ಪಡೆದ ಹಾಗೂ ಅಂತರರಾಷ್ಟ್ರೀಯ ಮಾನ್ಯತೆ ಪಡೆದ ಶಿಕ್ಷಣವೇತ್ತರ ಅನುಭವದ ಪರಿಪಾಕ ಅಡಗಿದೆ ಎಂಬುದನ್ನು ಶಶಿಧರರು ತಿಳಿದಿದ್ದರೆ ಅವರು ತಮ್ಮ ಟೀಕೆಗಳಲ್ಲಿ ಸ್ವಲ್ಪ ಜಾಗರೂಕರಾಗಿರುತ್ತಿದ್ದರೋ ಏನೋ.

ಹೊಸ ಪಠ್ಯಕ್ರಮವು ಭಾಷೆಯನ್ನು ಬರಿಯ form ಆಗಿ ಕಲಿಸುವ ಗುರಿಯುಳ್ಳದ್ದು, ನೌಕರಶಾಹಿ ವರ್ಗದ ನಿರ್ಮಾಣಕ್ಕಷ್ಟೇ ಸೀಮಿತವಾಗಿ ಉಳ್ಳದ್ದು, ಭಾಷೆಯನ್ನು ಬರಿಯ ಸಂಪರ್ಕ ಸಾಧನವಾಗಿ ಬಳಸಿ ವಿಚಾರವಂತಿಕೆಯನ್ನು ಅಲ್ಲಗಳೆಯುವ ಉದ್ದೇಶ ಹೊಂದಿದೆ-ಎಂಬುದು ಶ್ರೀ ಶಶಿಧರರ ವಾದ. ಸಮಿತಿಗೆ ಅರಿವಾಗದೆ ಇರುವ ಹುಳುಕನ್ನು ಎತ್ತಿ ತೋರಿಸಿರುವುದು ಲೇಖಕರ ತೀಕ್ಷ್ಣ ಮತಿಗೆ ಸಾಕ್ಷ್ಯ ವಾದರೂ ಶಿಫಾರಸುಗಳ ಆಳವಾದ ಅಧ್ಯಯನ ಮಾಡದೆ ಇಂಗ್ಲಿಷ ಭಾಷಾ ಶಿಕ್ಷಣದ ಶಿಫಾರಸು ಮಾಡಲಾದ ಹಲವಾರು ಉದ್ದೇಶಗಳಲ್ಲಿ ಒಂದನ್ನೇ ಟೀಕೆಗೆ ಗುರಿಯಾಗಿಸಿ ಅದೇ ಆಧಾರದಲ್ಲಿ ಎಲ್ಲ ಉದ್ದೇಶಗಳೂ ಅದೇ ನೆಲೆಯವುಗಳೆಂದು ತಳ್ಳಿ ಬಿಟ್ಟುದ ರಿಂದ ಅವರ ತೀಕ್ಷ್ಣ ಮತಿಗೆ ಅಪಚಾರವಾಗಿದೆ.

ವಿದ್ಯಾರ್ಥಿಗಳ ಇಂದಿನ ಮತ್ತು ಅವರವರ ಆಯ್ಕೆಯ ಮುಂದಿನ ಉಚ್ಚ ಶಿಕ್ಷಣಕ್ಕೆ ಸಹಾಯವಾಗುವಂತೆ ಭಾಷಾ ಪರಿಣತಿಯನ್ನು ಸಾಧ್ಯ ಮಾಡುವ ಭಾಷಾ ವ್ಯಾಸಂಗ ಬೇಕೆಂದು ಮಾಡಿದ ಸಮಿತಿಯ ಶಿಫಾರಸಿಗೆ ಶ್ರೀ ಶಶಿಧರರ ಆಕ್ಷೇಪಣೆ—'ಆ ಮುಟ್ಟಿನ' ಹೋಗುಬಾ 'ಭಾಷೆ', ಬಹಳ ಹಿಂದೆಯೇ ವಿದ್ಯಾರ್ಥಿಗಳು ಕಲಿತಿರುತ್ತಾರೆ ಎಂದು. ನಮ್ಮ ಬಹ್ವಂಶ ವಿದ್ಯಾರ್ಥಿಗಳ—ಯಾರ ಮೇಲೆ ಶ್ರೀ ಶಶಿಧರರಿಗೆ ಅತ್ಯಂತ ಕಾಳಜಿ ಇದೆಯೋ – ಅಂಥ ಗ್ರಾಮೀಣ, ದಲಿತ ವರ್ಗಕ್ಕೆ ಸೇರಿದ ವಿದ್ಯಾ–ರ್ಥಿಗಳ ಭಾಷಾ ಪರಿಣತಿಯ ನಿಜವಾದ ಮಾಹಿತಿಯುಳ್ಳ ಯಾವ ಶಿಕ್ಷಕನೂ ನಮ್ಮ ವಿದ್ಯಾರ್ಥಿಗಳು ತಾವು ವ್ಯಾಸಂಗ ಮಾಡುವ ವಿಷಯಗಳನ್ನು ಪ್ರಬುದ್ಧವಾಗಿ ತಿಳಿದುಕೊಳ್ಳಲು ಅಗತ್ಯವಿರುವ ಭಾಷಾ ಪಾಂಡಿತ್ಯವನ್ನು ಹೊಂದಿರುತ್ತಾರೆ ಎಂಬ ದಾರ್ಷ್ಟ್ಯದ ಮಾತನ್ನಾಡಲಿಕ್ಕಿಲ್ಲ.

ನೌಕರ ಸಂಬಂಧೀ ವ್ಯವಹಾರಕ್ಕೆ ಬೇಕಾದ ಭಾಷಾ ವ್ಯಾಸಂಗ ಶ್ರೀ ಶಶಿಧರರ ತೀವ್ರ ಆಕ್ಷೇಪಕ್ಕೆ ಗುರಿಯಾಗಿದೆ. ಇದನ್ನು ಕಲಿಯುವುದರಿಂದ ಇಡೀ ವಿದ್ಯಾರ್ಥಿ ಸಮುದಾಯ ದಾಸ್ಯಪ್ರವೃತ್ತಿಯಲ್ಲಿ ಕೊಳೆಯಬೇಕಾಗುತ್ತದೆ ಎಂಬುದು ಅವರು ಕಂಡುಕೊಂಡ ಸತ್ಯ. ನೌಕರ ಸಂಬಂಧೀ ವ್ಯವಹಾರವನ್ನು ಭಾಷೆಯಲ್ಲಿ ಪದವಿ ಪಡೆದೂ ಬೇರೆ ಅನುಭವಿಗಳು ಉಕ್ತಲೇಖನ ಮಾಡಿದಂತೆ ಬರೆಯುವ ವಿದ್ಯಾವಂತರ ಪರಾವಲಂಬನೆ ಇವರಿಗಿನ್ನೂ ದಾಸ್ಯ ಶೃಂಖಲೆಯೆಂದು ಕಾಣುವುದಿಲ್ಲ. ಆ ಮೇಲೆ ವ್ಯವಸ್ಥೆಗೆ ಬದ್ಧವಾಗಿರುವುದೆಂದರೆ ಅದು 'ಪೂರ್ತಿ' ಪಾಪವೇನು ? ಶಿಕ್ಷಣದ ಭಾಷಾ ಶಿಕ್ಷಣದ ಮೂಲೋದ್ದೇಶ—ವ್ಯವಸ್ಥೆಯನ್ನು ಬುಡಮೇಲು ಮಾಡುವುದು ಮಾತ್ರವೆಯೊ ? ಸಮಾಜದ ಅಂಗವಾದ ಮಾನವನಿಗೆ ವ್ಯವಸ್ಥೆಗೆ ಹೊಂದಿಕೊಳ್ಳಲು ತಿಳಿದಿರುವುದೇ ಬೇಡವೇನು ? ವ್ಯಾವಹಾರಿಕವಾದ ಕೌಶಲವನ್ನೂ, ಸಿದ್ಧಿಯನ್ನೂ ಶಿಕ್ಷಣವು ಉದ್ದೇಶವಾಗಿ ಹೊಂದಿರಲೇಬಾರದೇ ? ಇರುವ ವ್ಯವಸ್ಥೆ

ಯನ್ನು ರೂಪಿಸುವುದೇ ಅಲ್ಲವೆ ? Yours faithfully, yours sincerely ಎಂಬ ದೃಷ್ಟಿಗಳಲ್ಲಿ ಶ್ರೀ ಶಶಿಧರರು ಹೇಳುವ ಮಾನವೀಯ ಗುಣಗಳು ಪೂರ್ತಿ ಮರೆಯಾಗಿವೆಯೊ ? ವ್ಯವಸ್ಥೆಯಿಂದ ಪೂರ್ತಿ ಸಿಡಿದು ಹೋಗಿ ಸಮಾಜ ಜೀವಿಯಾದ ಮಾನವನು ಯಾವುದನ್ನೂ ಸಾಧಿಸಲಿಕ್ಕಿದೆಯೆ ? ಪರಕೀಯ ಭಾಷೆಯಾದ ಇಂಗ್ಲಿಷ ಮುಂದೊಂದು ದಿನ ಅದು ನಮ್ಮಲ್ಲಿಂದ ಮರೆಯಾಗತಕ್ಕದ್ದಾದರೂ, ಅದು ನಮಗೆ ಕೊಡುವ ಕೆಲವು ಮಾನವೀಯ ಪ್ರಜ್ಞೆಗಾಗಿ ನಾವು ಅದಕ್ಕೆ ಅನಿವಾರ್ಯವಾಗಿ ಹೊಂದಿಕೊಳ್ಳಬೇಕಾಗಿದೆ ಎಂಬ ಅನುಕೂಲ ಶಾಸ್ತ್ರವನ್ನು ಬೋಧಿಸುವ ಶ್ರೀ ಶಶಿಧರರು ಈ ಔದಾರ್ಯವನ್ನು ಇತರ ವಿಚಾರಗಳಲ್ಲೇಕೆ ಬೋಧಿಸುವುದಿಲ್ಲ ? yours faithfully ದೃಷ್ಟಿ ಅಪ್ರಿಯವಾದರೂ ವ್ಯಾವಹಾರಿಕವಾಗಿ ಅನಿವಾರ್ಯವಾಗಿದೆ ಎಂಬ ಕಟುಸತ್ಯ ಅವರಿಗೆ ತಿಳಿದಿಲ್ಲವೋ ? ವ್ಯವಸ್ಥೆಯ ಎಲ್ಲ ರಕ್ಷಣೆಗಳನ್ನು ಪಡೆದು ವ್ಯವಸ್ಥೆಯನ್ನು ದೂಷಿಸುವುದು sincerityಯ ಲಕ್ಷಣವಲ್ಲವೆಂದೇ ಹೇಳಬೇಕಾಗುತ್ತದೆ.

ಸುದ್ದಿ ಪತ್ರಿಕೆ, ಮ್ಯಾಗಜೀನುಗಳನ್ನು ಓದಲು ಬೇಕಾಗುವ ಸಾಮರ್ಥ್ಯವನ್ನು ಶ್ರೀ ಶಶಿಧರರು ತಮ್ಮ ವಾದದ ಅನುಕೂಲಕ್ಕಾಗಿ ಹೆಚ್ಚು ವಿವರಿಸವೆ ನುಣುಚಿಕೊಂಡಿದ್ದಾರೆ, ಸುದ್ದಿ ಪತ್ರಿಕೆ, ಮಾಗಜೀನುಗಳನ್ನು ಓದುವುದರಿಂದ ವಿದ್ಯಾರ್ಥಿ ವ್ಯವಹಾರದಲ್ಲಿ ಮಾತ್ರ ಚತುರನಾಗುತ್ತಾನೆಯೋ ? ಶೇಕ್ಸ್ಪಿಯರ್ ವಿಲ್ಸನ್ ವಿದ್ವಾಂಸನಾಗುತ್ತಾನೆಯೆ ? ಈ ಓದು ಯಾವ ಮಾನವೀಯ ಪ್ರಜ್ಞೆಯನ್ನೂ ಬೆಳೆಸುವುದಿಲ್ಲವೆ ? ವ್ಯವಹಾರದಲ್ಲಿ ಪತ್ರಿಕೆಗಳನ್ನು ವ್ಯವಸ್ಥಿತವಾಗಿ ವೈಚಾರಿಕತೆಯ ವಸ್ತುವಾಗಿ ಓದುವ ವಿದ್ಯಾರ್ಥಿಗಳು ಎಷ್ಟು ಮಂದಿ ಇದ್ದಾರೆ ?

ವಾದ ವಿವಾದಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ, ರಚಿಸುವುದಕ್ಕೆ ಸುಸಂಬದ್ಧವಾಗಿ ಮಂಡಿಸುವುದಕ್ಕೆ ವ್ಯಕ್ತಿತ್ವದ ಬೆಳವಣಿಗೆಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಭಾಷಾ ವ್ಯಾಸಂಗವನ್ನು ಸಮಿತಿ ಔಪಚಾರಿಕವಾಗಿ ಮಾತ್ರ ಶಿಫಾರಸುಮಾಡಿದೆ ಎಂದು ಶಶಿಧರರು ಅನುಮಾನಿಸುತ್ತಾರೆ. ಈ ಅನುಮಾನಕ್ಕೆ ಆಧಾರವೇನು? ಸೂಚಿಸಲಾದ ಉದ್ದೇಶಗಳಲ್ಲಿ ಮೊದಲನೆಯ ಎರಡು ಮುಖ್ಯ, ಉಳಿದೆಲ್ಲ ಔಪಚಾರಿಕ ಎಂಬ ಇವರ ವ್ಯಾಖ್ಯಾನ ಇವರು ಕಣ್ಣಿಗೆ ಹಚ್ಚಿಕೊಂಡ ಹಳದಿ ಕನ್ನಡಕದ ಪರಿಣಾಮವೋ? ಅಥವಾ ನಿಷ್ಪಕ್ಷಪಾತದ ತಾರ್ಕಿಕ ತೀರ್ಮಾನವೋ? ಹೆಚ್ಚು ಮುಖ್ಯವಾದ ಅಂಶಗಳನ್ನು ಪಟ್ಟಿಯ ಉತ್ತರಾರ್ಧದಲ್ಲೇ ಸೇರಿಸಲಾಗಿದೆ ಎಂದು ಯಾಕೆ ವ್ಯಾಖ್ಯಾನ ಮಾಡಬಾರದು? ಅಥವಾ ಎಲ್ಲ ಉದ್ದೇಶಗಳೂ ಏಕಪ್ರಕಾರವಾದ ಪ್ರಾಮುಖ್ಯವುಳ್ಳವೆಂದು ಸಮಿತಿ ತಿಳಿದಿದೆಯೆಂದುದನ್ನು ಸಂದೇಹಿಸಲು ಆಧಾರವಿದೆಯೆ?

ಸಮಿತಿಯು ಮಾಡಿದ ಶಿಫಾರಸುಗಳನ್ನು ಒಂದೆಡೆ ಬರೇ ತೇಪೆಹಾಕುವ ಕೆಲಸ, ಸ್ವಪಿವರ ಣಾತ್ಮಕವಾದ ಸುಧಾರಣೆ ಎಂದು ಕರೆದಿದ್ದಾರೆ. ಇದರಿಂದ ಏನೂ ಸಮಗ್ರ

ಬದಲಾವಣೆ ಆಗದು ಎಂದಿದ್ದಾರೆ. ಆದರೆ ಶ್ರೀ ಶಶಿಧರರು ಬಯಸುವ ಬೌದ್ಧಿಕ. ಸೃಷ್ಟಾತ್ಮಕ ಚಟುವಟಿಕೆಗಳನ್ನು ಹೊಸ ಶಿಕ್ಷಣಕ್ರಮ ಉತ್ತೇಜಿಸುತ್ತದೆಂಬುದು ಅರಿಯದೆ ಅವರ ಕನಸಿನ ರಾಜ್ಯವನ್ನು ನನಸಾಗಿಸಬಲ್ಲ ಸಾಧ್ಯತೆಯುಳ್ಳ ಪಠ್ಯಕ್ರಮ ವನ್ನು ಅವರು ವಿರೋಧಿಸಿದುದು ಪರಮಾಶ್ಚರ್ಯವಾಗಿ ಕಾಣುತ್ತದೆ. ಶಿಕ್ಷಣವು ದಾಸ್ಯವೃತ್ತಿಯನ್ನು ತೊಡೆದು ಹಾಕಬೇಕೆಂಬುದೇ ಹೊಸ ಪಠ್ಯಕ್ರಮದ ಪ್ರಮುಖ ಉದ್ದೇಶ. ಇಂದಿನ ವರೆಗೆ ಪ್ರಚಲಿತವಿರುವ ಅಭ್ಯಾಸ-ಬೋಧನಾ ವಿಧಾನದಲ್ಲಿ ಶಿಕ್ಷಕನಿಂದಲೇ ಪಠ್ಯವನ್ನು ವಿವರಿಸುವುದು, ಟೀಕಿಸುವುದು, ವ್ಯಾಖ್ಯಾನಿಸುವುದು ನಡೆಯುತ್ತದೆ ವಿನಾ ವಿದ್ಯಾರ್ಥಿಗೂ-ಪಠ್ಯಕ್ಕೂ ನೇರವಾದ ಸಂಪರ್ಕ ಏರ್ಪಡುವದೇ ಇಲ್ಲ. ಪರೀಕ್ಷಾ ಪದ್ಧತಿಯಲ್ಲಿ ಶಿಕ್ಷಕನು ಕೊಟ್ಟ ಅಥವಾ ಗೈಡುಗಳಲ್ಲಿ ದೊರೆಯುವ ಪೂರ್ವಸಿದ್ಧ ಉತ್ತರಗಳನ್ನು ಕಂಠಪಾಠ ಮಾಡಿಯೇ ತನ್ನ ಸಿದ್ಧಿಯನ್ನು ತೋರಿ ಸುವ ಪದ್ಧತಿಗಿಂತ ವಿದ್ಯಾರ್ಥಿಯು ಕೇಳಿದ್ದನ್ನು, ಓದಿದ್ದನ್ನು ಅರ್ಥಮಾಡಿಕೊಂಡ ದ್ದರ ಆಧಾರದಲ್ಲಿ ಅದನ ಸಿದ್ಧಿಯನ್ನು ಅಳೆಯುವ ವಿಧಾನ ಅವನನ್ನು ಯಾವ ರೀತಿಯು ಸ್ವಾವಲಂಬನೆಗೆ ಅಣಿಗೊಳಿಸುತ್ತದೆ ಎಂಬುದನ್ನು ಶ್ರೀ ಶಶಿಧರರು ತುಸು ವಾದರೂ ಗಮನಿಸಿದ್ದರೆ ಈ ಶಿಕ್ಷಣ ಕ್ರಮವನ್ನು ಅವರು ಹಾರ್ದಿಕವಾಗಿ ಸ್ವಾಗತಿಸು ತ್ತಿದ್ದರು.

ವಿದ್ಯಾರ್ಥಿಗಳನ್ನೂ ಬುದ್ಧಿಶಕ್ತಿಯ ಮೇಲೆ ಬೇರೆ ಬೇರೆ ಗುಂಪುಗಳನ್ನಾಗಿ ವಿಂಗಡಿಸಿ ಹೆಚ್ಚು ಕಮ್ಮಿ ತೀವ್ರತೆಯ ಪಾಠಗಳನ್ನು ಕೊಡುವುದು ಶ್ರೀ ಶಶಿಧರರಿಗೆ ಹಾಸ್ಯಾಸ್ಪ ದವಾಗಿ ಕಾಣುತ್ತದೆ. ಸಾಮೂಹಿಕ ವಿದ್ಯಾಭ್ಯಾಸದ ಅನಿಷ್ಟದಿಂದ ನಾವು ತೊಳಲು ತ್ತಿದ್ದೇವೆ ಎಂದು ಒಂದು ಉಸುರಿನಲ್ಲಿ ಒಪ್ಪಿಕೊಳ್ಳುವ ಅವರು ಅದೇ ಉಸುರಿನಲ್ಲಿ ಇದನ್ನು ತಕ್ಕಮಟ್ಟಿಗಾದರೂ ನಿವಾರಿಸಲೆಂದು ಮಾಡಿದ ಸಲಹೆಯನ್ನು ಹಾಸ್ಯಾಸ್ಪದ ವೆಂದು ತೀರ್ಮಾನಿಸುವುದು ಹಾಸ್ಯಾಸ್ಪದವಲ್ಲವೆ ?

ಭಾಷೆಯ ವ್ಯಾಪಕವಾದ ಪರಿಣಾಮದ ಕುರಿತು ಶ್ರೀ ಶಶಿಧರರು ಮಾಡಿದ ವ್ಯಾಖ್ಯಾ ನಕ್ಕೆ ನಮ್ಮ ತಕರಾರೇನಿಲ್ಲ. ಆದರೆ ಜೀವಂತ ಭಾಷೆಯಲ್ಲಿ ಶಬ್ದಗಳಿಗೆ ಹೊಸ ಹೊಸ ವ್ಯಾಪ್ತಿ ಬರುತ್ತದೆಂಬುದನ್ನು ತಿಳಿಯದ ಅಜ್ಞರು ಶ್ರೀ ಶಶಿಧರರು ಅಲ್ಲ. Comm-nnication ಎಂಬ ಇಂಗ್ಲಿಷ ಪದಕ್ಕೆ "ಸಂಪರ್ಕ ಮಾಧ್ಯಮ" ವೆಂಬ ಸಂಕುಚಿತ ವ್ಯಾಪ್ತಿಯನ್ನು ಶಶಿಧರರು ಕೊಟ್ಟದ್ದಕ್ಕೆ ವ್ಯಾಸಂಗ ಸಮಿತಿಯವರು ಹೊಣೆಗಾರ ರಾಗುವುದಿಲ್ಲ. ಉಚ್ಚ ಮಟ್ಟದ ಕಾವ್ಯದ ಅಂತರಾಳವನ್ನು ರಸಗ್ರಾಹಿ ಪಡೆದಾಗ ಆಗುವ ಅನುಭವವೂ Communication ಎಂಬ ಪದದ ಅರ್ಥದಲ್ಲಿ ಅಡಕವಾಗಿದೆ.

ಎನ್. ಟಿ. ಭಟ್

ಅರುಣ ಕಾಂಬಳೆ : ಲಂಕಾವತಾರ

ಸಿದ್ದಣ್ಣ ಗುಬ್ಬಿ

ದಲಿತ ಲೇಖಕ ಅರುಣ ಕಾಂಬಳೆ ಅವರ ಮರಾಠಿ ಕೃತಿ "ರಾಮಾಯಣದಲ್ಲಿ ಸಂಸ್ಕೃತಿ ಸಂಘರ್ಷ" ಎಂಬ ಇತ್ತೀಚಿನ ಪುಸ್ತಕ ಮಹಾರಾಷ್ಟ್ರದಲ್ಲಿ ಬಿರುಗಾಳಿ ಎಬ್ಬಿಸಿದೆ. 'ನವ ಶಕ್ತಿ' ಎಂಬ ಮರಾಠಿ ದಿನಪತ್ರಿಕೆ ತನ್ನ ಮೇ ಎರಡು ಹಾಗೂ ಒಂಭತ್ತರ ರವಿವಾರದ ವಿಶೇಷ ಪುರವಣಿಯಲ್ಲಿ ಅರುಣ ಕಾಂಬಳೆಯವರ ಪುಸ್ತಕದ ಪ್ರಮುಖ ಭಾಗಗಳನ್ನು ಪ್ರಕಟಿಸಿತು. ತಕ್ಷಣವೇ "ಹಿಂದೂ ರಾಜ್ಯಸಭಾ"ದ ಸಂಸ್ಥಾಪಕ ಕರ್ತಾರಸಿಂಗ ಥಟ್ಟೆ ಎಂಬ ಹಿಂದೂ ಕಟ್ಟಾ ಅಭಿಮಾನಿ 'ನವಶಕ್ತಿ' ಪತ್ರಿಕೆಯ ಕಚೇರಿಗೆ ಹೋಗಿ ಪತ್ರಿಕೆಯ ಸಂಪಾದಕ ಪಿ. ಆರ್. ಬೆಹರೆಯವರನ್ನು ಹಾಗೂ ಕಾಂಬಳೆಯವರನ್ನು ಕೊಂದು ಹಾಕುವದಾಗಿ ಚೀರಾಡಿದ. ಆದರೆ ಥಟ್ಟೆ ಪತ್ರಿಕಾ ಕಛೇರಿಗೆ ಬಂದ ಎರಡೂ ಸಲವೂ ಬೆಹರೆಯವರು ಅಲ್ಲಿರಲಿಲ್ಲ

ನಂತರ ಕೀರ್ತಂಕರ ಕೋಪರಗಾಂವಕರ ಬುವಾ ವರು ಪತ್ರಿಕಾಗೋಷ್ಠಿಯೊಂದನ್ನು ಕರೆದು ಕ್ರಿಮಿನಲ್ ಆಪಾದನೆಗಳ ಮೇಲೆ ಅರುಣ ಕಾಂಬಳೆಯವರನ್ನು ತಕ್ಷಣ ದಸ್ತಗಿರಿ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಪಡಿಸಿದರು. ಹಾಗೂ ಇಡೀ ಮಹಾರಾಷ್ಟ್ರದ ತುಂಬ ಪ್ರವಾಸ ಮಾಡಿ ಕಾಂಬಳೆ ಹಾಗೂ ಬೆಹರೆಯವರ ವಿರುದ್ಧ ಜನರನ್ನು ಕೆರಳಿಸಬೇಕೆಂಬ ಯೋಜನೆಯೂ ಅದೇ ದಿನ ಸಾರಲ್ಪಟ್ಟಿತು.

ಅರುಣ ಕಾಂಬಳೆಯವರ ಪುಸ್ತಕದ ತಿರುಳು ಇಷ್ಟು : ರಾಮಾಯಣದಲ್ಲಿ ಬರುವ ರಾಮ-ರಾವಣರ ಕಾಳಗವನ್ನು ಹಿಂದೂ ಹಾಗೂ ಬೌದ್ಧ ಸಂಸ್ಕೃತಿಗಳ ಘರ್ಷಣೆ ಎಂದು ಪುರಾವೆ ಸಹಿತ ವಿವರಿಸಿ, ರಾಮನ ಹಿಂದೂ ಸಂಸ್ಕೃತಿ, ದಲಿತರಿಗೆ, ಮಹಿಳೆಯರಿಗೆ ಹಾಗೂ ಆದಿವಾಸಿಗಳಿಗ ಯಾವ ಹಕ್ಕುಗಳನ್ನೂ ನೀಡದೆ ಹೋದದ್ದು; ರಾವಣನ ಬೌದ್ಧ ಸಂಸ್ಕೃತಿ ಎಲ್ಲರಿಗೆ ಸಮಾನ ಹಕ್ಕು, ಸ್ಥಾನಮಾನಗಳನ್ನು ಒದಗಿಸಿ

ದ್ದುದನ್ನು ಎತ್ತಿ ತೋರಿಸಲಾಗಿದೆ. ಈ ವಾದದ ಪುಷ್ಟೀಕರಣಕ್ಕಾಗಿ ಸ್ವತಃ ರಾಮಾಯಣದಲ್ಲಿರುವ ಅನೇಕ ಕಥಾನಕಗಳು, ಪ್ರಸಂಗಗಳು, ನಿರೂಪಣೆ, ವಾಕ್ಯಭಾಗಗಳ ಅಂತರ್ಗತ ಆಧಾರಗಳಲ್ಲದೆ "ಲಂಕಾವತಾರ ಸುತ್ತ" ಎಂಬ ಮಹಾಯಾನ ಬೌದ್ಧ ಧರ್ಮ ಗ್ರಂಥವು ಕಾಂಬಳೆಯವರಿಗೆ ಮುಖ್ಯ ಆಕರ ಗ್ರಂಥವಾಗಿದೆ.

'ಲಂಕಾವತಾರಸುತ್ತ'ದಲ್ಲಿ ಐತಿಹಾಸಿಕ ವ್ಯಕ್ತಿಯಾಗಿ, ಜನಪ್ರಿಯ ರಾಜನಾಗಿ ಕಂಗೊಳಿಸುವ ರಾವಣ ಹಾಗೂ ರಾಮಾಯಣದ "ದುಷ್ಟ" ರಾವಣ ಇಬ್ಬರೂ ಒಂದೇ ವ್ಯಕ್ತಿ ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ರಾಮನು ವಿಜಯೀ ಆರ್ಯರ ಹೀರೋ ಮಾತ್ರ. ರಾಮನು ಅನಾರ್ಯರಿಗೆ ಪೂಜ್ಯ ವ್ಯಕ್ತಿಯಾಗುವದು ಸಾಧ್ಯವಿಲ್ಲ. [ಇಸ್ರೇಲಿನ ಮೆನಾಜಿನ್ ಬೆಗಿನ್‌ರನ್ನು ಪ್ಯಾಲೆಸ್ಟೀಯನ್ನರು ಪೂಜ್ಯವ್ಯಕ್ತಿ ಎಂದು ಪರಿಗಣಿಸುವದು ಸಾಧ್ಯವಾದೀತೆ ? ಹಾಗೆ ಅನಾರ್ಯರಿಗೆ ರಾಮನು ಹೀರೋ ಆಗಲಾರ.]

ಸನಾತನ ಹಿಂದೂಗಳನ್ನು ಕೆರಳಿಸಿರುವ ಕಾಂಬಳೆಯವರ ಇನ್ನೊಂದು ವಾದಸರಣಿಯೆಂದರೆ ರಾವಣನು ಸೀತೆಯನ್ನು ಅಪಹರಿಸಿರುವದು ಅಸಾಧ್ಯ; ರಾವಣನು ಆಗಿನ ಕಾಲದ ಪದ್ಧತಿಯಂತೆ ನ್ಯಾಯಸಮ್ಮತವಾಗಿ ಹೋರಾಡಿ ಯುದ್ಧದಲ್ಲಿ ಜಯಗಳಿಸಿ ಸೀತೆಯನ್ನು ಕರೆದುಕೊಂಡು ಹೋಗಿರಬಹುದು ಇಲ್ಲವೆ ಸ್ವತಃ ಸೀತೆಯೇ ರಾವಣನ ವ್ಯಕ್ತಿತ್ವದಿಂದ ಆಕರ್ಷಿತಳಾಗಿ ಸ್ವಇಚ್ಛೆಯಿಂದ ರಾವಣನನ್ನು ಬೆಂಬತ್ತಿ ಹೋಗಿರಬಹುದು ಎಂಬುದು. ಈ ವಾದವೂ ಸಹ ರಾಮಾಯಣದಲ್ಲಿಯ ಅಂತರ್ಗತ ಆಧಾರಗಳಲ್ಲದೆ ಅನೇಕ ಪಂಡಿತರ ಪುಸ್ತಕಗಳ ಆಧಾರಗಳಿಂದ ಪೋಷಿತವಾಗಿದೆ. ಕಾಂಬಳೆಯವರು ಸೀತೆಯಂಥ 'ಪತಿವ್ರತೆ'ಯನ್ನು ಅವಮಾನಗೊಳಿಸಿದ್ದಾರೆಂದು ಹಿಂದೂಗಳ ಕೋಪ. ಆದರೆ ಕಾಂಬಳೆ ಹೇಳುತ್ತಾರೆ—"ರಾಮನು ಸೀತೆಯಲ್ಲದೆ ಬೇರೆ ಹೆಣ್ಣುಗಳ ಸಂಬಂಧ ಹೊಂದಿದ್ದನೆಂಬುದು ಸ್ವತಃ ರಾಮಾಯಣದಲ್ಲಿಯೇ ನಿರೂಪಿತವಾಗಿದೆ. ಹೀಗಿರುವಾಗ ನಾನು ಕೇಳುವದಿಷ್ಟೆ; ಹೆಣ್ಣೊಬ್ಬಳಿಗೆ ಮದುವೆಯ ನಂತರ ಬೇರೊಬ್ಬನನ್ನು ಪ್ರೀತಿಸುವ ಹಕ್ಕು ಇದೆಯೋ ಇಲ್ಲವೋ?"

ಕಾಂಬಳೆಯವರ ಪುಸ್ತಕಕ್ಕೆ ಉತ್ತರವಾಗಿ ಪ್ರತಿಯೊಂದು ವಾದಕ್ಕೂ ಸರಿಸಾಟಿಯಾಗಿ ತಮ್ಮ ದೃಷ್ಟಿಕೋನದಿಂದ ಪ್ರೊಫೆಸರ್ ವ್ಯಾಸ್ ಎಂಬವರು ಅದೇ 'ನವಶಕ್ತಿ' ಪತ್ರಿಕೆಯಲ್ಲಿ ಲೇಖವನ್ನು ಪ್ರಕಟಿಸಿದರು. ಇಷ್ಟೆಲ್ಲ ಆದ ನಂತರ ಬೆಹರೆಯವರು 'ನವಶಕ್ತಿ'ಯ ಸಂಪಾದಕೀಯವೊಂದರಲ್ಲಿ ಕಾಂಬಳೆಯವರ ವಿವಾದಗ್ರಸ್ತ ಪುಸ್ತಕದ ಭಾಗಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದುದನ್ನು ಸಮರ್ಥಿಸಿ, ರಾಮಾಯಣವನ್ನು ಆಳವಾಗಿ ಅಭ್ಯಸಿಸಿದ ಯಾರಿಗಾದರೂ ಆಧಾರಸಹಿತ ತಮ್ಮ ವಾದಸರಣಿ

ಯನ್ನು ಮಂಡಿಸಲು ಅವಕಾಶವಿದೆ ಎಂದರು. 'ನನಗೆ ರಾಮನ ಕುರಿತು ಗೌರವ ವಿರಬಹುದು. ಆದರೆ ಎಲ್ಲದರ ಬಗೆಗೆ ಮುಕ್ತ ಚರ್ಚೆಯನ್ನು ಸಾಧ್ಯವಾಗಿಸಿರುವ ಹಿಂದೂ ಸಂಪ್ರದಾಯದಲ್ಲಿಯೂ ನಂಬಿಕೆಯಿಂದೆ. ಅಸಹಿಷ್ಣುತೆಯೇ ಹಿಂದೂ ಧರ್ಮದ ನಿಜವಾದ ವೈರಿ. ಕಾಂಬಳೆಯವರ ಪುಸ್ತಕ ಸುಮ್ಮನೆ ಸೀತೆಯನ್ನು ಅವ ಮಾನಗೊಳಿಸಲು ಅಥವಾ ಪ್ರಚಾರಕ್ಕಾಗಿ ಅರ್ಥರಹಿತ ಚರ್ಚೆಯನ್ನು ಆರಂಭಿಸಲು ಪ್ರಯತ್ನಿಸುವದಿಲ್ಲ. ಕಾಂಬಳೆಯವರ ವಾದಸರಣಿಯಲ್ಲಿ ಗಾಂಭೀರ್ಯವಿದೆ, ಸತ್ಯಾಂಶಗಳಿವೆ. ಈ ಬಗ್ಗೆ ಭಿನ್ನಮತೀಯರು ಅಷ್ಟೇ ಗಾಂಭೀರ್ಯದಿಂದ ಆಧಾರ ಸಹಿತ ಚರ್ಚೆಗೆ ಉತ್ತರವೀಯಲಿ" ಎಂಬುದು ಬೆಹರೆಯವರ ಕರೆ.

●

ನೆರಳ ನಡಿಗೆ

ಶ್ರೀನಾಥ್ ರಾಯಸಂ

ನೆರಳ ನಡಿಗೆಗೆ ಸನ್ನೆಗೋಲಿನಾಸರೆ
ಆಸರೆಯೇ ?–ಅಲ್ಲ–ತಿವಿತ
ಈ ಕ್ರಿಯೆಯಲ್ಲೇ ಇರಬೇಕು
ಸಮಗ್ರ ಅರ್ಥೈಸುವ ಮತ್ತೊಂದು
ಕ್ರಿಯೆ; ನಿಜಕ್ಕೇ
ಇದರ ಸೂತ್ರವೇ ಬೆರಳಲ್ಲಿ
ದಾರಿಯಿಟ್ಟು ದೀಪ ತೋರಿಸುತ್ತ
ಅನನ್ಯ ಖುಷಿ ಕೊಡುವ
ಅಥವ ದುಃಖದ ಮಜಲು ತೋರಿಸುವ
ಮತ್ತೊಂದು ಮುಖ

ಇದರ ಕುರಿತು ಹಾಡಬೇಕೆನ್ನುವ
ಮನಸ್ಸಿಗೆ ದನಿಯೇ ಇಲ್ಲದ
ದನಿಯಿರುವ ಮನಸ್ಸಿಗೆ
ಮುಖವೇ ಇಲ್ಲದ ಆಭಾಸ
ಸದ್ಯ ಕಾಣುವ ಹಗಲು,
ಸದ್ಯ ಕಾಣುವ ಹಗಲು.
ರಾತ್ರಿಯೆಂದೇ ತಿಳಿವ ಮುಖದ ಗೆರೆಗಳಲ್ಲಿ
ಬದುಕು ಅಳಿಯುವ
ಜನ ಝಣ ಝಣ ಎಣಿಸಿ ಹೋಗುತ್ತಾರೆ.

ಇಲ್ಲಿ
ಧಿಮಾಕಿನ ತಂತ್ರೂರಿಗೆ
ಸರಿಗಮವಿಲ್ಲ ಇರುವುದೊಂದೇ
ದನಿ–ಕದ್ದು ತಂದದ್ದೋ
ಯಾ ಕಡ ಪಡೆದದ್ದೋ
ನೆರಳ ನಡಿಗೆಗೆ ಮಾತ್ರ
ಸ್ಪಷ್ಟ ಸಹಕಾರಿ.

ಅವಳಿ ಜವಳಿ‡

ಚಂದ್ರಶೇಖರ ಪಾಟೀಲ

ಸ್ವಲ್ಪ ಹಿಂದೆ ಮುಂದೆ ಹುಟ್ಟಿದ್ದರೂ ಈ ಅವಳಿ, ಈ ಅವಳಿ,
ಒಬ್ಬ ಇನ್ನೊಬ್ಬನಿಗೆ ಇಂಚುಪಟ್ಟಿ.
ಪಬ್ಲಿಕ್ಕಿನಲ್ಲಿ ಅವಳಿ–ಜವಳಿ ಉತ್ತರಧ್ರುವ–ದಕ್ಷಿಣಧ್ರುವ.
ಬಾರಿನ ಮುಸ್ಸಂಜೆಯಲ್ಲಿ ಮಾತ್ರ ಇಬ್ಬರ ಮೈತುಂಬ ಚುಂಬಕಗಾಳಿ.

ಸದಾ ಆಕಾಶಜೀವಿ ಅವಳಿ.   ಅವನಿಗೆ ನೆಲವ್ದೇ ವ್ಯಸನ.
ಜವಳಿಗೂ ವಿಮಾನ ಕಂಡರೆ ಪ್ರೀತಿ, ರೋಮಾಂಚನ.
ಆದರೆ ವಿಮಾನ ಹತ್ತುವವರ ಬಗ್ಗೆ ಹೊಟ್ಟೆಕಿಚ್ಚು.
ಹೊಟ್ಟೆಕಿಚ್ಚಲ್ಲಿ ಬೆಂದ ಗದ್ಯ ಕಾವ್ಯವಾಗುತ್ತದೆ.

ತನ್ನ ಪೀಳಿಗೆಯ, ಅಂದರೆ ತನ್ನನ್ನೊಳಗೊಂಡ ತನ್ನ ಪೀಳಿಗೆಯ
ಪ್ರತಿಭೆಯ ಬಗ್ಗೆ ಅವಳಿಗೆ ತೇಲು_ಮೇಲುಗಣ್ಣು.
ಅದ ಕಂಡು ಮೀಸೆಯಲ್ಲೇ ಗಹಗಹಿಸುವ ಜವಳಿ
ಒಳಗೇ ತಾನೂ ತೂಗಾಡುವುದ ಕಂಡು ಬೆಚ್ಚಿಬೀಳುತ್ತಾನೆ.

ಕಪ್ಪು ಹುಡುಗಿಯ ಮೊಲೆಗೆ (ಕನಸಲ್ಲಿ) ಅವಳಿ ಬಲಗೈ ಹಾಕಿದಾಗ,
ತನ್ನ ಎಡಗೈ ಅವನಿಗೆ ಜವಳಿಯದಾಗಿ ಕಾಣುತ್ತದೆ.
ಜವಳಿಗೆ ಕನ್ನಡಿಯಲ್ಲಿ, ತನ್ನ ಮುಖದ ಕೆಸರಲ್ಲಿ
ಅವಳಿಯ ಮುಖಕಮಲ ಅರಳಿದಂತೆನಿಸುತ್ತದೆ.

ಅವಳಿ ರಾಜಗುರು; ಜವಳಿಯೋ ವಿದೂಷಕ.
ಜವಳಿಗೆ ಜೋಕು ಸತ್ಯ, ಸತ್ಯ ಜೋಕು; ಅವಳಿಗೆ ಸುಳ್ಳಿನ ಗಂಭೀರ ದಿಮಾಕು.
ಕೊನೆಗೂ ಅವಳಿ ಗಳಿಸುವ ರಾಜನ ಮಂದಸ್ಮಿತ ಕಂಡು
ಜವಳಿಗೆ ಸಂಕಟ ಹೆಚ್ಚಾಗಿ ಲಗಾಟ ಹೊಡೆಯುತ್ತಾನೆ.

ಅವಳಿ ಜವಳಿಯೊಳಗೋ, ಜವಳಿ ಅವಳಿಯೊಳಗೋ ಎಂಬಂತಿರುವ
ಅವಳಿಗೂ ಜವಳಿಗೂ ಫರಕು ಏನಪ್ಪಾ ಅಂದರೆ—
ಅವಳಿಗೆ ಅನಂತಮುಖ, ಜವಳಿಗೆ ಹತ್ತೇ ಮುಖ.
ಇದೇ ಅವಳಿಗೂ ಜವಳಿಗೂ ಇರುವ ಮುಖ್ಯ ತೊಂದರೆ.

‡ ರಚನೆ : ೧೯೭೯

ಪ್ರಥಮ ಸಂಕಲನದ ಕವಿ

ಸಿದ್ದನಗೌಡ ಪಾಟೀಲ

ನಾಲ್ಕು ಕವನಗಳು

೧. ಚಿಂತೆ

ಓ ! ರಾಜರು
ಚಿಂತಾಕ್ರಾಂತರಾಗಿರುವರು !
ಅಯ್ಯೋ ವಿರಹವೇದನೆಯಲ್ಲಿ
ಬಳಲುತ್ತಿರುವರು.

ಪಾಪ; ಮುಖ ಬಾಡಿ ಹೋಗಿದೆ.
ಕೈ ಕಾಲಲ್ಲಿ ಶಕ್ತಿ ಇಲ್ಲ—
ಅವರ ಶೃಂಗಾರ ಕಿರೀಟ
ಇನ್ನೂ ತಲೆಗೇರಿಲ್ಲ.

ಎಂದು ಚಿಂತಿಸುತ್ತಲೇ
ಆ ಭಿಕ್ಷುಕ
ಮಲಗಿದಲ್ಲೇ ಕಾಲು ಚಾಚಿದ.
ಹರಕು ಕೌದಿಯಿಂದ ಅವನ ಕಾಲು
ಹೊರಬಂದು ಛಳಿ ಹತ್ತಿದಾಗ
ಸಟ್ಟನೆ ಯೋಚನೆಯಿಂದ ಹೊರಬಂದು
ಆಚೆ ಬಿದ್ದಿದ್ದ ತನ್ನ ಭಿಕ್ಷಾಬಟ್ಟಲನ್ನು
ತೆಗೆದುಕೊಂಡು
ಮತ್ತೆ ನಿದ್ದೆ ಹೋದ.

೨. ನಾಯಕ

ಪ್ರಾಚೀನ
ಸಂಸ್ಕೃತಿಯಲ್ಲಿ
ನಾನೊಬ್ಬ ಶೂದ್ರ.
ಬಿಳಿಯರಿದ್ದಾಗ
ನಾನೊಬ್ಬ ಕರಿಯ ಮಾತ್ರ.

ಇಂದು,
ಎಲ್ಲರೂ ಬಯಸುವ
'ಸುಧಾರಣೆ' ನಾಟಕದ
ಶ್ರೇಷ್ಠ ಪಾತ್ರಧಾರಿ,
ಎಲ್ಲರ ಹೆಮ್ಮೆಯ ನಾಯಕ
'ಹರಿಜನ' ನಾನು.

ಐದು ವರ್ಷಕ್ಕೊಮ್ಮೆ
ನನ್ನ ಪಾತ್ರಕ್ಕೆ ಭಾರೀ ಬೆಲೆ.
ನನ್ನ ಹಸಿದ ಹೊಟ್ಟೆಯ ಮುಂದೆ
ಉಂಡವರು ಕೊಡುವ
'ಹಸಿವಿನ ವ್ಯಾಖ್ಯಾನ'.
ನಂತರ ಕತ್ತಲಲ್ಲಿ
ನನ್ನ ನಾಯಕತ್ವಕ್ಕೆ
ಸಕ್ಕರೆ ರೂಪದ ಗೊಬ್ಬರ ಹಂಚಿಕೆ.

೩. ನಗುತ್ತೇನೆ

ಭೂಮಿ ತಿರುಗುತ್ತದೆ
ಕತ್ತಲಾಗುತ್ತದೆ; ಹೊತ್ತು ಮೂಡುತ್ತದೆ.
ನಾನೂ ಜೀವಿಸಿದ್ದೇನೆ.

ಅದಕ್ಕೇ ಮನುಷ್ಯರಂತೆ
ರಾತ್ರಿಯಾದಾಗ ನಿದ್ದೆ ಬರುತ್ತದೆ.
ಹೊತ್ತು ಮೂಡಿದಾಗ ಎಚ್ಚರವಾಗುತ್ತದೆ.

ಈ ನಡುವೆ ಏನೇನೋ
ಭೂಮಿಗೆ ಸಂಬಂಧ ಪಟ್ಟಿರದೇ ಇದ್ದ
ಎಲ್ಲಿಯವೋ ಕನಸು ಬೀಳುತ್ತವೆ.
ಎರಡೂ ಹೊತ್ತು ಊಟ ಮಾಡಿದಂತೆ,
ಲಗ್ನವಾದಂತೆ, ಮನೆಯಲ್ಲಿದ್ದಂತೆ,
ಏನೇನೋ ಸಿಹಿ ಪದಾರ್ಥ ತಿಂದಂತೆ...

ಛೇ ಎಂದು ಕಣ್ಣು ತೆರೆದರೆ
ತಟ್ಟಿಯ ಸಂದಿನಿಂದ ಸುಂದರವಾದ
ಸೂರ್ಯನ ಬೆಳಕು ಬಳಿಗೆ ಬಂದಿರುತ್ತದೆ.
ಆದಕ್ಕೆ ನನ್ನ ದೇಹದ ಅಂಗುಲಂಗುಲ ಒಡ್ಡಿ
ಥಂಡಿಯಲ್ಲಿ ಬಿಸಿಯಾಗಿ ನಗುತ್ತೇನೆ.

೪. ನಾನಿದ್ದೇನೆ ಆದರೆ...

ಬದುಕು ಮುಗಿಯುವಾಗ
ಮರಳಿ ನೋಡಿದರೆ
ಬಾಳಿನ ಕೆಸರಲ್ಲಿ
ನನ್ನವಾದ ಹೆಜ್ಜೆಗಳೇ ಇಲ್ಲ.

ಅಪ್ಪ, ತಾತತಾತಂದಿರಿಟ್ಟು ಹೋದ
ಹೆಜ್ಜೆಯಲ್ಲಿಯೇ ಹೂತು
ಹೋಗಿವೆ.

ನಾನಿದ್ದೇನೆ,
ಆದರೆ ! ಆದರೆ !
ನನ್ನ ಹೆಜ್ಜೆಗಳೇ ಇಲ್ಲ !!

[ಸಿದ್ದನಗೌಡ ಪಾಟೀಲರ **ನಾ ಬಸ್ಯಾ ಅಂತ** (೧೯೮೩)
ಸಂಕಲನದಿಂದ ಆಯ್ದುಕೊಂಡ ಪದ್ಯಗಳಿವು.]

೧೯೮೨ ರ ಐವರು ಹೊಸ ಕವಿಗಳು

ಪುಸ್ತಕ ವಿಮರ್ಶೆ

ಅಶೋಕ ಮಠದ

೧. ಇವನೊಬ್ಬ ಬೇರೆ ಹುಟ್ಟಿದ : ಭಗತರಾಜ ನಿಜಾಂಕಾರ
೨. ಕಂದಿ: ರವಿಂದ್ರ ವಿ. ಪಾಟೀಲ
೩. ಚಿಲುಮೆ : ಎಸ್ ಜಿ. ಸ್ವಾಮಿ
೪. ನೀನು ಅವರು ಪರಿಸರ : ಸುಗಡೋಣಿ ಅಮರೇಶ ಹಳೆಮನಿ
೫. ನನ್ನುಸಿರ ತಂತಿಗಳು : ಧರ್ಮದಾಸ ಬಾರಕೇರ

ನಾವು ಬದುಕುತ್ತಿರುವ ಪರಿಸರದಲ್ಲಿಂದು ಮನುಷ್ಯ ಮನುಷ್ಯರಲ್ಲಿ ಭೇದನೀತಿಯ ಆಚರಣೆ ಮತ್ತು ಭಯದ ವಾತಾವರಣವಿದೆ. ಹೊಲ–ಮನೆ, ಕಾರಖಾನೆ–ಕಚೇರಿಗಳಲ್ಲಿ; ಶಾಲೆ–ವಿದ್ಯಾಲಯ, ಮಠ–ಮಂದಿರಗಳಲ್ಲಿಯ ಅನ್ಯಾಯವನ್ನು ಎದುರಿಸುವ ಸಾಧನವಾಗಿ ಮಾತುಗಳನ್ನು ಹಾಡಾಗಿಸಿ-ಹೋರಾಟದ ಮುಂಚಿನ ಎಚ್ಚರಿಕೆಯ ಗಂಟೆಯಾಗಿ ಬಳಸುವಲ್ಲಿ ಸೃಜನಶೀಲ ವ್ಯಕ್ತಿಗಳು ಮುಂದಾಗಬೇಕಿದೆ. ಜನಸಾಮಾನ್ಯರ ಭೀತಿ ತೊಡೆದು ಅವರ ಮೌನಕ್ಕೆ ಮಾತಾಗಿ ಕಾವ್ಯದಿಂದ ಕ್ರಾಂತಿಯೇ ಎನ್ನುವವರಿಗೆ ಕಾವ್ಯ ಹೋರಾಟದ ಕಣಕ್ಕಿಳಿವ ಸಾಧನವಷ್ಟೇ ಅಲ್ಲ, ಅಸ್ತ್ರವೆಂದೂ ತೋರಿಸಬೇಕಿದೆ.

ಇದೆಲ್ಲ ಬರಿಯ ಘೋಷಣೆ ಪ್ರತಿಭಟನೆಯ ದಾಖಲೆ, ಸಿಟ್ಟಿನ ಪ್ರತಿಕ್ರಿಯೆಯ ಮಟ್ಟದಲ್ಲಿ ನಿಲ್ಲದೆ ಇದನ್ನು ಮೀರಿ ಬದುಕಿದ್ದನ್ನು ಅನುಭವಿಸಿದ್ದನ್ನು ಕಸುಗಾರಿಕೆಯೊಂದಿಗೆ ಮನುಷ್ಯಯಾತನೆಯ ಒಳಪದರನ್ನು ಮುಟ್ಟಿ, ಬದುಕಿನೊಂದಿಗಿನ ಆಸ್ಥೆ ಪ್ರೀತಿಯನ್ನು ಚಿಮ್ಮುವ ಕೆಲಸವೂ ಈ ಹಾಡಿನಲ್ಲಿ ಬರಬೇಕಿದೆ. ಈ ಛಲಕ್ಕೆ ಬದುಕು ಪ್ರೀತಿಸುವ, ಸತ್ಯವನ್ನು ಮೆಚ್ಚಿಕೊಳ್ಳುವ ಮಾನವೀಯ ತುಡಿತವಿರಬೇಕಾದದ್ದು (ಕವಿಯಾದವನಿಗೆ) ಅಗತ್ಯ.

●

ಶ್ರೀ ಭಗತರಾಜರ ಮೊದಲನೆಯ ಸಂಕಲನ 'ಇವನೊಬ್ಬ ಬೇರೆ ಹುಟ್ಟಿದ' ಸಂಕಲನದ ಹೆಸರು ಹೊತ್ತ ಕವಿತೆಯಿಂದಲೇ ಕವಿಯ ಮನೋಭಾವ ತಿಳಿದರೂ ಕವಿ ತನ್ನ ಅನುಭವನ ವಿವರಗಳನ್ನು ಕಾವ್ಯವಾಗಿಸುವಾಗಿನ ಕ್ರಮ ಕಲೆಯ, ಕಸರತ್ತು ಕಡಿಮೆ ಎಂದೇ ಹೇಳಬೇಕು 'ಡಿಶೆಂಬರ್ ೭೯...' '(ನಾ) ಲಾಯಖ್' ಗೋಡೆಗಳು' 'ಕೇಳು ಸಖಿ' ಕವಿತೆಗಳಲ್ಲಿ ಶಬ್ದಗಳನ್ನು ತುಂಡರಿಸುವ, ನಡುವೆ ಆಂಗ್ಲ ಪದ ಪುಂಜಗಳ ಬಳಕೆ ಕಾವ್ಯದ ಬಂಧವನ್ನು ಸಡಿಲಿಸುವದರೊಟ್ಟಿಗೆ ಕಲಾತ್ಮಕತೆಗೂ ಅಡ್ಡ ಬರುತ್ತವೆ. ಹೀಗಾಗಿ ವಿಷಯ ಅಷ್ಟೊಂದು ಪರಿಣಾಮ ಬೀರುವದಿಲ್ಲ. ಚುಟುಕುಗಳಲ್ಲಿ 'ಕವನ' 'ವ್ಯವಸ್ಥೆ' 'ನೌಕರ' ಹೆಸರಿಸಬೇಕಾದವು. ಕವಿಯ ಒಲವು ಪ್ರಗತಿಪರವಾಗಿದ್ದು ತನ್ನ ಪರಿಸರದ ನೋವಿಗೆ ಧ್ವನಿಯಾಗಿ ಕಾವ್ಯದ ಬಗ್ಗೆ ಖಚಿತವಾದ ಅರಿವಿಟ್ಟುಕೊಂಡು ತನ್ನ ಮಾತಿನಲ್ಲಿ ಸಿಡಿವ ತಂತ್ರದ ಸೂಚನೆಯನ್ನು ಈ ಸಂಕಲನದಲ್ಲಿ ಕೊಟ್ಟಿದ್ದಾರೆಂದು ಹೇಳಿದರೂ ಇನ್ನೂ ಗಟ್ಟಿಗೊಳ್ಳಬೇಕಿದೆ.

ಇವರ 'ನವರಂಗ ದರವಾಜಾ', 'ಒಂದು ಖಾಸಮಾತು' ಕವಿತೆಗಳಲ್ಲಿಯ ಜನರಾಡುವ ನುಡಿಗಟ್ಟು, ನುಡಿವವರ ಬದುಕನ್ನು ಚಿತ್ರಿಸುವ ಚತುರತೆ ಬರವಣಿಗೆಯ ಸಾಧನವಾಗುವದನ್ನು ಲಕ್ಷಿಸುವಂತಿದೆ. ಇವರು ಇದನ್ನು ಇನ್ನೂ ಬೆಳೆಸಿಕೊಳ್ಳಬೇಕು. ಆಗ ಇನ್ನಷ್ಟು ಒಳ್ಳೆ ಕವಿತೆ ಕೊಡಬಲ್ಲರು.

●

"ಸಮಾಜದಲ್ಲಿಯ ದೋಷಗಳನ್ನು ಹೋಗಲಾಡಿಸಿ...ಅವುಗಳಿಗೆ ನಮ್ಮನ್ನು ಹೊಂದಿಸಿಕೊಂಡು ಸುಖವಾಗಿರುವ ವಿಧಾನವನ್ನು ಅತ್ಯಂತ ಮಾರ್ಮಿಕವಾಗಿ ವ್ಯಂಗ್ಯ ಶೈಲಿಯಲ್ಲಿ ಹೇಳಲು ನನ್ನ ಕೈಲಾದಮಟ್ಟಿಗೆ ಪ್ರಯತ್ನ ಮಾಡಿದ್ದೇನೆ' ಎಂದು ಕವಿ ಹೇಳುತ್ತಾರೆ—"ಕುದಿ" ಸಂಕಲನದ ರವಿಂದ್ರ ಪಾಟೀಲ.

'ಕುದಿ', 'ನಿರಂತರ', 'ತಗ್ಗು' ಕವನಗಳಲ್ಲಿ ಕವಿಗೆ ತತ್ವದ ಪದಗಳಂಥ ವಿಚಾರ ಹೇಳುವ ಹವಣಿಕೆ ಇದ್ದರೂ—ಅವು ಅಸ್ಪಷ್ಟತೆ ಸಂಧಿಗ್ಧತೆಗಳಿಂದ ಕೂಡಿವೆ. ಉಪದೇಶಪರ "ಕುಡಿತ-ಕಡಿತ" ಕವಿತೆಯಲ್ಲಿ "ಮಾನವೀಯತೆಯು ಮಾರಿ ಹಾಳು । ಹೆಂಡಿರ ಮಕ್ಕಳ ತೀರದ ಗೋಳು । ಧರ್ಮ ಸಮಾಜ ಸಂಸ್ಕೃತಿಯು ತಲೆಬೋಳು । ಈ ಕೇಳು ಚಟದಿಂದ ನೀ ಬಿಟ್ಟೇಳು ।" ಅದರಂತೆ "ಇರುವೆ" ಕವಿತೆ ಕೂಡಾ ಜಾಳು ಜಾಳು.

"ನ್ಯಾಯ, ಅನ್ಯಾಯ, ಆಕ್ರೋಶ, ಕರ್ತಾರನ ಕಮ್ಮಟ, ಜೀವನದ ಗಾಡಿ, ನಶ್ವರದಿಂದ ಈಶ್ವರ, ಅಜ್ಞಾನ ಅಂಧಕಾರ"—ಈ ಎಲ್ಲ ವಿಷಯಗಳ ಬಗ್ಗೆ ಓದಿದ್ದು ತಿಳಿದದ್ದನ್ನೆಲ್ಲ ಕವಿತೆಯಾಗಿಸುವ ಬದಲು ಪಾಟೀಲರು ಬದುಕನ್ನು ನೋಡಿ, ಅನು

ಘಟಿಸಿ ಬರೆಯಬೇಕೆಂದಾದರೆ ಕವನ ಕಟ್ಟುವ ಕಲೆಯ ಕುರಿತು ಯೋಚಿಸಿ ಬರೆದಾಗ ಒಳ್ಳೆಯ ಕವಿತೆ ಬರೆಯಬಲ್ಲರು. ಕಾರಣ ಕವಿಯ ತೆಕ್ಕೆಗೆ ಎಲ್ಲವೂ ಒಂದೇ ಏಟಿಗೆ ಒಗ್ಗುವದಿಲ್ಲ. ದಿನ ಕಳೆದಂತೆ ಬುದ್ಧಿ ಬಲಿವಂತೆ ಮನಸ್ಸು ತುಡಿದಾಗ ಜೀವಜೀವಕ್ಕೆ ಮೈತ್ರಿಯಾಗಿ ನಿಜವಾದ ಸ್ಪಂದನ ಸಾಧ್ಯವಾದಾಗ ಹಾಡು ಕೆನೆಗಟ್ಟುತ್ತದೆ

ಇಷ್ಟೆಲ್ಲಾ ಹೇಳಲು ಕಾರಣ ತರುಣ ಕವಿ ಮನಃಶಾಸ್ತ್ರದ ವಿದ್ಯಾರ್ಥಿಯೂ ಆಗಿರುವದರಿಂದ ತನ್ನ ಪರಿಸರದಲ್ಲಿ ಬದುಕುವ ಜೀವಿಗಳ ಮನಸ್ಸನ್ನು ಅರಿತು ಇಡೀ ಪರಿಸರಕ್ಕೆ ಲೇಸನು ಬಯಸುವ ತನ್ನ ಮಾತು ಹಾಡಾಗಿಸುವ ಪ್ರಯತ್ನ ಮಾಡಬೇಕು. ಅದೂ ವರ್ತಮಾನದ ಬದುಕಿಗೆ. ಅವರು ಈ ಕೆಳಗಿನ ಕವಿತೆಗಳಲ್ಲಿ ಭರವಸೆ ಮೂಡಿಸುತ್ತಾರೆ. ‘ಹೊಸ ವರುಷ’, ‘ರೈತರು’, ‘ಬಡವ’, ‘ಶೋಷಣೆ’, ‘ಅನುನಾಯಿಗಳು’, ‘ಗಾಂಧಿ ನಾಡು ಸುಡಗಾಡು’—ಇಲ್ಲಿ ತೀರ ವಾಚ್ಯತೆ ಕಂಡು ಬಂದರೂ ಸಮಕಾಲೀನ ಬದುಕಿಗೆ ಸ್ಪಂದಿಸುವ ಗುಣ ಇದೆ. “ಕುರಸಾಲ್ಯಾ ಕುನ್ನಿ” ‘ಪರ್‌ಹೆಡ್’ಗಳಲ್ಲಿ ಭಾಷೆಯ ಬಳಕೆಯ ಹೊಸತನದ ಪ್ರಯತ್ನವಿದ್ದರೂ ಕವಿತೆಯ ಸಾರ್ಥಕತೆಯ ಬಗ್ಗೆ ಯಾವ ಮೆಚ್ಚುಗೆ ಕೊಡಲಾಗುವದಿಲ್ಲ.

●

ತರುಣ ಕವಿ “ಸ್ವಾಮಿ”ಗಳು ಸ್ವಾಭಾವಿಕವಾಗಿಯೇ ಪ್ರೇಮ ಪದ್ಯಗಳನ್ನು ತಮ್ಮ ಮೊದಲ ಸಂಕಲನದಲ್ಲಿ ಕೊಟ್ಟಿದ್ದಾರೆ. ಲೆಕ್ಕ ಮಾಡಿ ಹೇಳುವದಾದರೆ ಒಟ್ಟಿಗೆ ಸಣ್ಣದೊಡ್ಡ ೩೩ ಕವಿತೆಗಳಲ್ಲಿ ೨೨ ಪದ್ಯಗಳು. ‘ಮುದ್ದಿಸಿದಂತೆ’, ‘ಕಲ್ಪನೆ’, ‘ಮುಗಿಲ ಗುಬಾರಲೆ ಹಿಗ್ಗಿ’, ‘ಅವಳೆ’ ‘ಸುಪ್ರಭಾತವು ನಿನಗೆ’—‘ಮಂಡಮೂಗಿನ ಚೆನ್ನೆ’, ‘ಮು ಬಟ್ಟು’, ‘ಎದ್ದು ಬರಲಾರದು ನನ್ನ ಹೆಣ’—ಹೀಗೆ ಒಂದಿಲ್ಲೊಂದು ರೀತಿ ‘ಅವಳ’ ಸುತ್ತ ಗುದಮುರಗಿ ಹಿಡಿಯುತ್ತವೆ, ಗಿರಕೀ ಹೊಡೆಯುತ್ತವೆ. ಅಷ್ಟೇ ಅಲ್ಲ. ಪ್ರೀತಿ ಅರ್ಧ ಕನ್ನಡ ಮತ್ತೆ ಅರ್ಧ ಇಂಗ್ಲೀಷಾಗಿ ಕವಿಯಿಂದ ಪ್ರಿಯತಮೆಗೆ ತಲುಪುತ್ತದೆ. ನೋಡಿ ‘ಬಾಕಿ’ ಕವಿತೆಯಲ್ಲಿ ಹಚ್ಚನ್ನ ಹCರಾಗಿ ಮನವೆಲ್ಲ ಹC ಯಾಗಿCದಳು ತುTಗಳ ಸVJೀನ ಹೀರಿ’...ಚೆವರ ಜಾರಿC ಮಲಿಗಳಲ್ಲಿ ಮುಖVಟ್ಟ ಮಲಗಿ”. ‘ಹಾಗೆ’ ಪುಟ್ಟಪದ್ಯದಲ್ಲಿ “ಕಟಿ ರೊಟ್ಟಿ ಪುಂಡಿಪಲ್ಯ। ಅಷ್ಟೇ ರುಚಿ। ನಿನ್ನ ತುಟಿ।” ಎನ್ನುವಾಗ ಸಾಚಾ ಬದುಕಿನ ಸರಳ ಪ್ರೀತಿಯ ಪ್ರಕಟಣೆ ಕವಿಯ ಜಾಣ್ಮೆಯ ಒಂದು ಸೂಚನೆ. ಆಡುಮಾತಿನಲ್ಲಿ ತಮ್ಮ ವಿಚಾರಗಳನ್ನು ಇನ್ನಷ್ಟು ಪರಿಸರಕ್ಕೆ ಒಡ್ಡಿ ‘ರಾಜಕಾರಣಿಗಳು’‘ನಾವು ಬರ್ತೇವಿ...’ ಮುಂತಾದ ಪದ್ಯಗಳನ್ನೂ ಬರೆಯಲು ಶ್ರಮಪಟ್ಟರೆ ಬದುಕಿನಲ್ಲಿ ಪ್ರೀತಿ ಸುಖದೊಟ್ಟಿಗೆ, ಸಾಮಾಜಿಕ ಬದುಕಿಗೂ ಸ್ಪಂದಿಸಿ ತನ್ನಲ್ಲಿಯ ಕಾವ್ಯಾಸಕ್ತಿಯನ್ನೂ ಇನ್ನಷ್ಟು ಕಲೆಯ ಕುಸುರಿಸಿಂದ ಸಜ್ಜುಗೊಳಿಸಿಕೊಂಡು ಅನುಭವ ಪ್ರಾಮಾಣಿಕತೆಗಳ ಜೊತೆಗೆ ಬರೆಯಲು ಹವಣಿಸ

ಬೇಕು. ಆಗ ಮಾತ್ರ 'ನಾ ಬರೆಯುವದು ಕವನವೇ ಅಲ್ಲ ಎಲ್ಲವೂ ಅವಳೇ' ಅನ್ನುವ ಮಾತನ್ನು ಮೀರಿ ಬರೆಯುವದು, ಬದುಕುವದು ಎಂದರೇನೆಂದು ಪ್ರಶ್ನಿಸಿ ಕೊಂಡು ಹೊಸ ಬದುಕು ಬದುಕುತ್ತ, ತಾನೂ ಬೆಳೆಯುತ್ತ, ಪರಿಸರಕ್ಕೆ ಪ್ರತಿ ಸ್ಪಂದಿಸುತ್ತ 'ದೇಶಭಕ್ತರು', 'ಸಮಯ ಸಾಧಕರು' ಎಂಬ ಕೇವಲ ಚಿತ್ರ ಕೊಡುವ ಅವರನ್ನು ನಿಯಂತ್ರಿಸುವ ಬಲ ಮತ್ತು ತಿದ್ದುವ ಛಲ ಕವಿತೆಯ ಸಾಲುಗಳಿಗೆ ಹಾಡಿನ ಧಾಟಿಗೆ ತಂದು ಕೊಡಲು ಯತ್ನಿಸಬೇಕು.

●

ತನ್ನ ಪ್ರಥಮ ಸಂಕಲನದಲ್ಲಿಯೇ ಕವಿ ತನ್ನನ್ನು ಮತ್ತು ಪರಿಸರವನ್ನು ಒಟ್ಟಾಗಿ ತಿಳಿದುಕೊಳ್ಳಲು ಯತ್ನಿಸುತ್ತ ಕೆಲವೊಮ್ಮೆ ಮುಗ್ಧನಾಗಿ ಆಕ್ರೋಶವನ್ನು ಎಷ್ಟು ತೀವ್ರಗೊಳಿಸುತ್ತಾನೆಂದರೆ—'ಪತ್ರಿಕೆಗೆ ಬರೆದು ಒಂದೊತ್ತು ಅನ್ನ ಗಿಟ್ಟಿಸಿ ಕೊಳ್ಳುವ ಬಂಡಾಯಕೋರರೆ! ಪತ್ರಿಕಾಗಾರರೇ।(?!) ಎಸೆಯಿರಿ ಪೆನ್ನನ್ನು ತಿಪ್ಪೆಗೆ. ಹೊಡೆಯಿರಿ ಜನರನ್ನು" ಮುಂತಾಗಿ ಹೇಳುತ್ತ "ಬಿಸಿರಕ್ತದ ಕೂಗು" ಕವಿತೆಯಲ್ಲಿ 'ರಮ್ಯವೂ ಬೇಡ ಗಿಮ್ಯವೂ ಬೇಡ ಈಗ' ಎನ್ನುತ್ತ ಸ್ವಾರ್ಥಕ್ಕೆ ಮುಖ ವಾಡ ಹಾಕಿಕೊಂಡು....ವ್ಯಕ್ತಿಗಳ ಗುಟ್ಟು ಬಯಲಿಗೆಳೆಯುವ ಕಾವ್ಯಗಳು ಬೇಕಾ ಗಿವೆ ಎನ್ನುತ್ತಾರೆ. ಮುಂದೆ "ನಾನು ಒಮ್ಮೊಮ್ಮೆ ಬದುಕಿದ್ದು ಸತ್ತ ಹೆಣವಾಗಿರು ತ್ತೇನೆ' ಹೀಗೆಲ್ಲ ಗೋಜಲು-ಗೊಂದಲುಗೊಂಡ ವಿಚಾರಗಳು. ಬರೆಯಬೇಕೆನ್ನಿಸಿ ದ್ದನ್ನು ತನಗರಿವಿಲ್ಲದೆ, ಪರಿಣಾಮ ತಿಳಿಯದೆ ಬರೆಯಬೇಕೆಂಬ ಉತ್ಸುಕತೆಯಿಂದ ಕವಿತೆ ಬರೆದಂತಿದೆ.

ಹದಿಹರೆಯ ಪ್ರೀತಿಯಲ್ಲಿ ವಿಹಾರಿಸಿದಂತೆ, ವೈಚಾರಿಕತೆಯಲ್ಲಿಯೂ ಬಂದರೆ ತರುಣರೆಂಬ ಸಬ್ಸಿಡಿ ಕೊಟ್ಟುಬಿಟ್ಟರೆ ಮುಂದಿನ ಬರಹಕ್ಕೆ ನಿರ್ದಿಷ್ಟ ಗುರಿ ಇಲ್ಲವಾದೀ ತೆಂದೇ ಮೊಟ್ಟಮೊದಲಿಗೆ ವೈರುಧ್ಯಗಳ ಪಟ್ಟಿಮಾಡಿದ್ದು.

ಆರೋಗ್ಯಕರವಾದ ಧೋರಣೆಗಳನ್ನು ತನ್ನ ತಿಳಿವಿನಿಂದ ಓದಿನಿಂದ ಅನುಭವಗಳಿಂದ ಪಡೆದಾಗ-ಭಾವಪ್ರಕಟಣೆಯಲ್ಲಿ ಪರಿಣಾಮದಲ್ಲಿ ಒಂದು ಸ್ಪಷ್ಟತೆ ಮತ್ತು ಸಾಂದ್ರತೆ ಮೂಡಿಬಂದೀತು. ಪ್ರೀತಿಯಬಗ್ಗೆ 'ಚಿಮಣಿಪತಂಗದ' ಹಳೇ ದ್ರವ್ಯಕ್ಕಿಂತ "ಕಾಲೇಜು ಕಟ್ಟಡದ।ಎಡಸು ಪಡಸಿನ ಓಡಾಟದಲ್ಲಿ। ಡಿಕ್ಕಿ ಹೊಡೆದ ದಿನ। ನಿನ್ನ ಕೊಬ್ಬಿನಿಂತ ಕುಚಗಳು ನನ್ನೆದೆಗೆ ಇರಿದ। ಆ ಸತ್ತ ನೆನಪು?...ಪರಿಣಾಮಕಾರಿಯಾಗಿದೆ. 'ಕಲೆ' 'ನೆನಪು' ಅಷ್ಟು ಪರಿಣಾಮ ಬೀರುವದಿಲ್ಲ.

ಇವರ ಕವಿತೆಗಳಲ್ಲಿ ವಿಷಯ ವೈವಿಧ್ಯವಿದ್ದರೂ ತನಗೆ ತೋಚಿದ ವಿಷಯಕ್ಕೆ ಮಾನಸಿಕ ಸಿದ್ಧತೆ, ಸರಿಯಾದ ಬಂಧ ಮತ್ತು ನುಡಿಗಟ್ಟಿನ ಕೊರತೆಯಿಂದ ಕವಿತೆಗಳು

ಸೊರಗಿನಿಂತಿವೆ. ಇದಕ್ಕೆ ತನ್ನ ಸೀಮಿತ ಅನುಭವವನ್ನು ಮೀರಿ ಬರೆಯಲು ಹವಣಿಸುವಾಗಿನ ತೊಂದರೆಯೂ ಕಾರಣವಿರಬಹುದು.

●

ಕವಿಗಳಿಗೆ 'ಸಾವಿನಂಚಿನಲ್ಲಿರುವವರಿಗೆ ಬದುಕಿಸಲು' ಕೇಳುತ್ತ, ಸತ್ತ ತಲೆಗಳ ಲೆಖ್ಖ ಮಾಡಬಲ್ಲಿರಾ ಎಂದು ಸವಾಲು ಹಾಕುತ್ತ ರೊಟ್ಟಿ ಇಲ್ಲದೆ ಒದ್ದಾಡುವವರ ಬಗ್ಗೆ ಜಗತ್ತಿಗೆ ಪ್ರಶ್ನೆಹಾಕುತ್ತ, ಪ್ರೀತಿಯ ಬಗ್ಗೆ ಅಂತರಂಗದ ಬಗ್ಗೆ ಹಾಡುತ್ತ ಸಮುದ್ರದ ತೆರೆಗಳಲ್ಲಿದಂಡೆಯ ಮೇಲಿನ ಬಂಡೆಗಳ ಚೆಲುವು ಕಾಣುತ್ತ "ಬದುಕಿನ ಬಗೆಗೆ ಧಾರಾಳವಾಗಿ ಬರೆಯಬಲ್ಲೆ ಹಾಡು ಬರೆಯುವದನ್ನು ಬಿಡುವದಿಲ್ಲ" ಎಂದು ತಮ್ಮ ಕುಂಚದ ಕಾವ್ಯವನ್ನು ತಮ್ಮ ಮೊದಲ ಕೃತಿಯಲ್ಲಿ ಕೊಟ್ಟಿದ್ದಾರೆ ಧರ್ಮದಾಸ ಬಾರಕೇರ.

'ಹುಡುಗಿರ ಕಂಡು. ತತ್ತರಿಸಿದ್ದೇನೆ' 'ನಾನಿನ್ನೂ ಹಸುಳೆ' 'ವರದಕ್ಷಿಣೆ' 'ಮುತ್ತು ಕೊಡಲೆ' ಎಂಬಂತಹ ಪ್ರೀತಿಯ ಪದ್ಯಗಳು, ನಾನು-ನೀನು' ಎಂಬ ಅಧ್ಯಾತ್ಮ, ಬೇಂದ್ರೆ ಮೇಲೆ ಪದ್ಯ. ಕವಿಕುಂಚಕ (ರತ್ನನ ಪದಗಳ ಅನುಕರಣೆ).......

ಎಂಜನಿಯರಿಂಗ್ ವಿದ್ಯೆ ಸಂಪಾದಿಸುತ್ತಿರುವ ಯುವಕನೊಬ್ಬನ ಮನದಲ್ಲಿ ಮೂಡಿದ ಭಾವನೆಗಳನ್ನು ಮೆಚ್ಚಿಕೊಳ್ಳಬಹುದಾದರೂ ವಯಸ್ಸಿಗೆ ತಕ್ಕುದಾದ ಭಾವಗಳಲ್ಲಿ ಬರೆವ ಪದ್ಯಗಳಲ್ಲಿ ಒಮ್ಮೊಮ್ಮೆ ಗದ್ಯದ ಧಾಟಿ ಇದ್ದರೂ ಅವರ ಅನುಭವಕ್ಕೆ ಸರಿಯೆಂದೇ ಹೇಳಬೇಕು. ಇವರ ಓದಿನ ಅನುಭವದ ಮೂಸೆಯಲ್ಲಿ ತಯಾರಿಸಿದ ಯಾವ ಚಿತ್ರವೂ ಕವಿತೆಯಲ್ಲಿ ಮೂಡಿ ಬರಲಿಲ್ಲವೇಕೆ? ಆ ದಿಶೆಯಲ್ಲಿ ಅವರು ಯೋಚಿಸಿ ಬರೆದರೆ ಹೊಸ ಪರಿಭಾಷೆಯಲ್ಲಿ ಮೂಡಬಹುದು. ಹೇಳುವದನ್ನು ಸೂಚ್ಯವಾಗಿ ಕೆಲವೇ ಪದಗಳಲ್ಲಿ ಅನುಭವದ ಚಿತ್ರವನ್ನು ಎಂಜನಿಯರಿಂಗ್ ಭಾಷೆಯಲ್ಲೇ ಹೇಳಲು ಪ್ರಯತ್ನಿಸಬೇಕು. ಆದರ್ಶಗಳ ಮಾತಿಗಿಂತ ವಾಸ್ತವಕ್ಕೆ ಸ್ಪಂದಿಸಿ ಹಾಡು ಕಟ್ಟುವತ್ತ ಗಮನ ಹರಿಸಿದರೆ ಇನ್ನಷ್ಟು ಗಟ್ಟಿ ಕವಿತೆ ಕೊಡಬಲ್ಲರು.

●

ಇಂದು ಕವಿತೆಗೆ ಓದುಗರಿಲ್ಲ, ಕವಿತೆ ಏನು ಯಾರೂ ಬರೆಯಬಹುದು ಎನ್ನುವಂತಹ ಸುದ್ದಿ ಹರಡುವವರಿರುವಾಗ ಒಂದು ಒಳ್ಳೆಯ ಮಾಧ್ಯಮವಾದ ಕಾವ್ಯವನ್ನು ಆಯ್ದುಕೊಳ್ಳುವ ಮತ್ತು ತಿಳಿದುಕೊಳ್ಳಬೇಕೆನ್ನುವ ಹಂಬಲವಿರುವ ತರುಣರು ಕವಿತೆಯ ಆಶಯ ಮತ್ತು ಭಾಷೆಯ ಬಗ್ಗೆ, ಬಂಧದ ಬಗ್ಗೆ ಅಲ್ಲದಿದ್ದರೂ ಕವಿತೆಯ ಒಟ್ಟು ಪರಿಣಾಮದ ಬಗ್ಗೆಯಾದರೂ ಯೋಚಿಸಿ ಬರೆಯಲು ಹವಣಿಸಿದರೆ ಒಂದಿಷ್ಟಾದರೂ ಹೆಚ್ಚಿನ ಓದುಗರನ್ನು ಕಂಡುಕೊಳ್ಳಬಹುದು.

●

ಸಾದರ ಸ್ವೀಕಾರ

ಕಮ್ಮಟದ ಕವಿತೆಗಳು : ಸಂ–ಚೊಕ್ಕಮೂರ್ತಿ ಪಾಟೀಲ; ೧೯೮೨; ಅಭಯಂ ಪ್ರ, ಹರಿಹರ; ೫ ರೂ.

ಆಹ್ವಾನ.: ವೇದವ್ಯಾಸ ಜೋಶಿ; ವಸುಧಾ ಪ್ರ, ಸಂಡೂರು; ೧೯೮೧; ೮ರೂ

ತೊಗಲು ಗೊಂಬೆಯ ಆತ್ಮಕಥೆ; ಸ. ಉಷಾ; ಪುಸ್ತಕ ಚಿಲುಮೆ, ಮೈಸೂರು; ೧೯೮೧; ೮ರೂ.

ಜೀವನ ಗೀತೆ; ವಿಭೂತಿ ಅಂದಾನೆಪ್ಪ; ಅಂಪವಿ ಪ್ರ, ಬೆಳ್ಳಟ್ಟಿ; ೧೯೮೧; ೫ರೂ.

ಪ್ರಣಯ ಪ್ರಣಯ : ವೇದವ್ಯಾಸ ಜೋಶಿ; ವಸುಂಧಾ ಪ್ರ, ಸಂಡೂರು; ೧೯೮೨; ೮ರೂ.

ಗತಿ : ಸ. ರಘುನಾಥ; ಸಾಹಿತ್ಯ ಪ್ರ, ಪಾಶ್ಚಾಪುರ; ೧೯೮೨; ೫ರೂ

ಪರಸಂಗದ ಗೆಂಡೆ ತಿಮ್ಮ; ಶ್ರೀಕೃಷ್ಣ ಆಲನಹಳ್ಳಿ, ನೆಲಮನೆ ಪ್ರ, ಮೈಸೂರು; ೧೯೮೧ (೩ನೇ ಮು.); ೧೨ರೂ.

ನಾಳಿನ ರಾಜರ ಇಂದಿನ ಕಥೆ; ವಿಭೂತಿ ಅಂದಾನೆಪ್ಪ; ಕವಿರಾಜ ಪ್ರ, ಲಕ್ಷ್ಮೇಶ್ವರ; ೧೯೮೧: ೯ರೂ,

ಜಾಲ; ಬಿ. ನಟೇಶ; ಬೃಂದಾವನ ಪ್ರ, ಮೈಸೂರು; ೧೯೮೦; ೬ರೂ.

ದಲಿತ ಚಳುವಳಿ–ಒಂದು ಒಳನೋಟ; ರಾವಸಾಹೇಬ ಕಸಬೆ; ನೇಗಿಲ ಪ್ರ, ಆಳಂದ; ೧೯೮೨; ೨.೫೦ ರೂ.

ಅವಲೋಕನ :ಜಯಪ್ರಕಾಶ ಮಾವಿನ ಕುಳಿ; ಸ್ಫಟಿಕ ಪ್ರ, ಮಂಗಳೂರು; ೯.೫೦ ರೂ.

ಹೊಳಹು : ಸಿ.ಪಿ. ಸಿದ್ಧಾಶ್ರಮ; ಚೈತ್ರಪಲ್ಲವಿ, ಮೈಸೂರು; ೧೯೫೫; ೬ರೂ.

ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು–೯

ತಂದೆಯರೂ ಮಕ್ಕಳೂ (ಕಾದಂಬರಿ): ಇವಾನ್ ತುರ್ಗೆನೇವ್; ೮ ರೂ.

ಜೇಡರ ಹುಳು ಹಾಗೂ ನೊಣ: ಲೀಬ್‌ಕ್ನೆಹ್ಟ್; ೫೦ ಪೈ.

ಸಾಮ್ರಾಜ್ಯವಾದ : ಲೆನಿನ್; ೧.೫೦ ರೂ.

ಶ್ರಮಜೀವಿ ವರ್ಗದ ಕ್ರಾಂತಿ ಮತ್ತು ತತ್ವಭ್ರಷ್ಟ ಕೌತ್‌ಸ್ಕಿ; ಲೆನಿನ್; ೧.೫೦ ರೂ.

ರಾಜಕೀಯ ಅರ್ಥಶಾಸ್ತ್ರದ ಪರಾಮರ್ಶೆ: ಮಾರ್ಕ್ಸ್; ೪ರೂ.

ರಾಜಕೀಯ ಅರ್ಥಶಾಸ್ತ್ರದ ತಾರುಣ್ಯ ; ಎ.ವಿ. ಅನೀಕಿನ್; ೧೩ರೂ.

ರಾಜಕೀಯ ವಿಜ್ಞಾನದ ಮೂಲತತ್ವಗಳು; ೧೨ರೂ.

ಯುವಶಕ್ತಿಯ ಸದ್ಬಳಕೆಗೆ ಸೂಕ್ತ ಅವಕಾಶಗಳು

- ಯುವಜನತೆಗೆ ಸೂಕ್ತ ಮಾರ್ಗದರ್ಶನ ಮಾಡಿ, ಯುವಶಕ್ತಿಯ ಸದ್ಬಳಕೆಗೆ ನೆರವಾಗುವಂತಹ ಹಲವು ಕಾರ್ಯಕ್ರಮಗಳನ್ನು ರಾಜ್ಯ ಯುವಜನಸೇವಾ ಇಲಾಖೆಯು ಕೈಗೊಂಡಿದೆ.
- ಗ್ರಾಮಾಂತರ ಪ್ರದೇಶಗಳಲ್ಲಿ ದೃಢಕಾಯರಾದ ಯುವ ಸಮೂಹವನ್ನು ರೂಪಿಸುವ ಸಲುವಾಗಿ ವ್ಯಾಯಾಮ ಶಾಲೆಗಳನ್ನು ಆರಂಭಿಸಲಾಗಿದೆ.
- ಯುವ ಜನತೆಯಲ್ಲಿರುವ ಸುಪ್ತ ಪ್ರತಿಭೆಯ ಪ್ರಕಾಶಕ್ಕೆ ಅನುಕೂಲವಾಗುವಂತ ಹವ್ಯಾಸಿ ಕಲಾಸಂಘಗಳು ಹಾಗೂ ಯುವಜನ ಮೇಳಗಳ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.
- ಆಸಕ್ತರಾದ ಯುವಕ-ಯುವತಿಯರಿಗೆ ವಿವಿಧ ಕ್ರೀಡೆಗಳಲ್ಲಿ ತರಬೇತಿ ನೀಡುವುದಕ್ಕಾಗಿ ಬೆಂಗಳೂರು, ಮಂಗಳೂರು, ಬೆಳಗಾವಿ ಹಾಗೂ ಉಚಿತ ವಸತಿ ಸೌಲಭ್ಯವಿದೆ.
- ಕೊಡಗು ಜಿಲ್ಲೆಯ ಕೂಡಿಗೆ ಕ್ರೀಡಾಶಾಲೆಯಲ್ಲಿ ಪ್ರತಿ ವರ್ಷ ೫೦ ಜನ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ.
- ರಾಜ್ಯಮಟ್ಟದ ಕ್ರೀಡಾಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ತಲಾ ೬೦೦ ರೂ. ರಾಷ್ಟ್ರಮಟ್ಟದ ಕ್ರೀಡಾಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ೯೦೦ ರೂ. ಶಿಷ್ಯವೇತನ ಕೊಡಲಾಗುತ್ತದೆ.
- ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಸಂಕಷ್ಟದಲ್ಲಿರುವ ಮಾಜಿ ಕ್ರೀಡಾ ಹಾಗೂ ಕುಸ್ತಿ ಪಟುಗಳಿಗೆ ೩೦೦ ರೂ. ರಾಷ್ಟ್ರಮಟ್ಟದಲ್ಲಿ ಭಾಗವಹಿಸಿದವರಿಗೆ ೨೦೦ ರೂ. ಹಾಗೂ ರಾಜ್ಯಮಟ್ಟದಲ್ಲಿ ಭಾಗವಹಿಸಿದವರಿಗೆ ೧೫೦ ರೂ. ಹಾಗೂ ಇತರರಿಗೆ ೧೦೦ ರೂ. ಮಾಸಾಶನವನ್ನು ಕೊಡಲಾಗುತ್ತದೆ.
- ಹರಿಜನ-ಗಿರಿಜನ ಯುವಕ ಸಂಘಗಳಿಗೆ ವಿಶೇಷ ನೆರವು ನೀಡಲಾಗುತ್ತದೆ. ಪುಸ್ತಕ, ಕ್ರೀಡಾ ಸಲಕರಣೆಗಳನ್ನು ಕೊಳ್ಳಲು ಧನ ಸಹಾಯ ಸೌಲಭ್ಯವಿದೆ.
- ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಯುವಜನಸೇವೆ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು, ವಿಭಾಗ ಮಟ್ಟದಲ್ಲಿ ಉಪ-ನಿರ್ದೇಶಕರು, ಜಿಲ್ಲಾಮಟ್ಟದಲ್ಲಿ ಜಿಲ್ಲಾ ಯುವಜನ ಸೇವಾ ಅಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದಲ್ಲಿ ಸಹಾಯಕ ಯುವಜನ ಸೇವಾ ಅಧಿಕಾರಿಗಳನ್ನು ಸಂಪರ್ಕಿಸಬೇಕು

ಪ್ರಕಟಣೆ— ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ

October 83

No. R. N. 29730/76 No. KRNG 97
Licenced to post without pre-payment
Licence No. WPP-31

ಕುಶಲ ಕರ್ಮಿಗಳಿಗೆ ಸೌಲಭ್ಯಗಳು

ಅನುವಂಶಕವಾಗಿ ಬಂದಿರುವ ಕುಂಬಾರಿಕೆ,ನೇಕಾರಿಕೆ, ಬಡಿಗತನ, ಕಮ್ಮಾರಿಕೆ, ಚಾಪೆ, ಹೆಣೆಯುವುದು, ಗೊಂಬೆ ತಯಾರಿಕೆ ಮೊದಲಾದ ಕಸಬುಗಳನ್ನು ಅಭಿವೃದ್ಧಿಪಡಿಸಿಕೊಂಡು ಕುಶಲಕರ್ಮಿಗಳು ಆರ್ಥಿಕ ಪ್ರಗತಿ ಹೊಂದಲು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಅನೇಕ ಸಹಾಯ-ಸೌಲಭ್ಯಗಳನ್ನು ನೀಡುತ್ತಿದೆ.

ರಾಜ್ಯದ ಜಿಲ್ಲೆ, ತಾಲ್ಲೂಕು ಕೇಂದ್ರಗಳು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಒಟ್ಟು ೩೧ ಕುಶಲಕರ್ಮಿ ತರಬೇತಿ ಕೇಂದ್ರಗಳಲ್ಲಿ ವಿದ್ಯಾವಂತ ಹಾಗೂ ಕನಿಷ್ಠ ಅಕ್ಷರಜ್ಞಾನ ಇರುವ ಕುಶಲಕರ್ಮಿಗಳಿಗೆ ೬ ರಿಂದ ೯ ತಿಂಗಳ ತರಬೇತಿ ನೀಡಿ, ತರಬೇತಿ ಅವಧಿಯಲ್ಲಿ ೧೦೦ ರಿಂದ ೧೫೦ ರೂ. ಮಾಸಿಕ ಶಿಷ್ಯವೇತನ ಕೊಡಲಾಗುತ್ತಿದೆ.

ಕುಶಲ ಕೈಗಾರಿಕೆಗಳನ್ನು ಕೈಗೊಳ್ಳಲು ಮತ್ತು ಅವುಗಳನ್ನು ಉತ್ತಮಪಡಿಸಿಕೊಳ್ಳಲು ಅವಶ್ಯಕ ಉಪಕರಣಗಳು ಮತ್ತು ಆರ್ಥಿಕ ನೆರವನ್ನು ಒದಗಿಸಲಾಗುತ್ತಿದೆ. ವಿಶೇಷ ಘಟಕ ಯೋಜನೆಯನ್ವಯ ಕುಶಲಕರ್ಮಿಗಳು ತಾವು ವಾಸಿಸುವ ಸ್ಥಳದಲ್ಲೆ ತಮ್ಮ ಉದ್ಯೋಗಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ವಾಸಕ್ಕೆ ಮತ್ತು ಉದ್ಯೋಗಗಳಿಗೆ ಅನುಕೂಲವಾಗುವಂತಹ ಶೆಡ್ಡುಗಳನ್ನು ಕಟ್ಟಿಸಿಕೊಡಲಾಗುತ್ತಿದೆ. ಹೆಚ್ಚಿನ ವಿವರಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರದ ಜನರಲ್ ಮ್ಯಾನೇಜರ, ಉಪವಿಭಾಗಗಳಲ್ಲಿರುವ ಕೈಗಾರಿಕಾ ಕೇಂದ್ರದ ಸಹಾಯಕ ನಿರ್ದೇಶಕರು ಮತ್ತು ತಾಲ್ಲೂಕು ಕೇಂದ್ರಗಳಲ್ಲಿರುವ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಬೇಕು.

ಪ್ರಕಟಣೆ : ವಾರ್ತಾ ಮತ್ತು ಪ್ರಚಾರ ಇಲಾಖೆ.
ಕರ್ನಾಟಕ ಸರ್ಕಾರ, ಬೆಂಗಳೂರು.

Sept 83.

EVU PATTAR
GUTTIPETH,
SHAHAPUR-585223

ನಿಮಗೊಂದು ಸಂತೋಷದ ಸುದ್ದಿ

ಸಂಕ್ರಮಣದ ಆಯಾ ತಿಂಗಳ ಸಂಚಿಕೆ ಇನ್ನು ಮೇಲೆ ಅದೇ ತಿಂಗಳು ನಿಮ್ಮ ಕೈಸೇರಲಿದೆ. ಮೇ ೧೯೮೪ರ ವರೆಗಿನ ಸಂಚಿಕೆಗಳು ಸದ್ಯ ಅಚ್ಚಾಗುತ್ತಿವೆ. **ಈ ಸಂಚಿಕೆ** ನಿಮ್ಮ ಕೈಸೇರಿದೊಡನೆ ಕೂಡಲೇ ಸಂ: ೧೩೭–೧೪೮ರ (ಜೂನ್ ೮೩–ಮೇ ೮೪) ಚಂದಾ ಕಳಿಸಿರಿ. **ಹಾಗೆ ಕಳಿಸಿದವರಿಗೆ ಮಾತ್ರ** ಮುಂದಿನ ಸಂಚಿಕೆಗಳು ಲಭ್ಯ; ಉದ್ರಿ ಉಳಿಸಿಕೊಂಡವರಿಗೆ ಬರಿ ನಮಸ್ಕಾರ. —ಸಂಪಾದಕ

Sankramana Prakashana, Dharwad–580008